ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 1 ಸಂಚಿಕೆ 23

ನವೆಂಬರ್ 04, 2007


ಕನ್ನಡ ವಾರಪತ್ರಿಕೆ

ರೂ. 5/-



ಸಂದರ್ಭಸಾಧಕರ ಮರುಮೈತ್ರಿ

ಪೇಜ್ 5




ದೇವೇಗೌಡರನ್ನು ಯಾರು ನಂಬುತ್ತಾರೆ?



ಪೇಜ್ 8


ಕೆಲಸ ಕೊಡಲಾಕ ಆಗದಿದ್ರೆ......

ಪೇಜ್ 9



ಪರಮಾಣು ವ್ಯವಹಾರ ಸಂಸತ್ತಿಗೆ ಬರಲಿ

ಚೆ ನಿನ್ನ ಮರೆಯಲಿ ಹ್ಯಾಂಗ



ಗಡಿಗಳು ಗೋಡೆಗಳೇ?

ಭಾಷೆ ನಮ್ಮ ಸಮಾಜದ ಸಂವಹನದ ಸಾಧನ. ಭಾವನೆ–ವಿಚಾರಗಳ ವಿನಿಮಯ ಮಾಧ್ಯಮ. ಭಾಷೆಯಿಲ್ಲದ ಸಮಾಜವೊಂದನ್ನು ಕಲ್ಪಿಸಿಕೊಳ್ಳುವುದು ಕಷ್ಟಕರ. ಭಾಷೆ ನಮ್ಮ ಬದುಕಿನಲ್ಲಿ ಹಾಸುಹೊಕ್ಕಾಗಿ ಬೆರೆತಿದೆ. ಹೀಗಾಗಿ ತಮ್ಮ ಭಾಷೆಯ ಕುರಿತ ಪ್ರೀತಿ ಸಹಜ. ಭಾಷೆ ಸಂವಹನ, ಶಿಕ್ಷಣ, ಆಡಳಿತಗಳ ಮಾಧ್ಯಮವಾಗುವುದರಿಂದ ಒಂದು ಭಾಷೆಯ ಜನರು ತಾವೆಲ್ಲ ಒಂದು ಎಂದು ಭಾವಿಸುವುದು ತುಂಬಾ ಸಹಜ. ಇದು ಒಂದು ಪ್ರಜಾಸತ್ತಾತ್ಮಕ ಆಶಯವೂ ಹೌದು.

ಆದರೆ ಇಂದು ಭಾಷಾಭಿಮಾನವೆಂಬ ಮುಖವಾಡದ ಮರೆಯಲ್ಲಿ ಭಾಷಾಂಧತೆ, ಭಾಷಾ ದುರಭಿಮಾನ, ದ್ವೇಷ ಭಾವನೆಗಳನ್ನು ಬೆಲೆಸಲಾಗುತ್ತಿರುವ ಈ ಸಂದರ್ಭದಲ್ಲಿ ಒಂದು ಐತಿಹಾಸಿಕ ದೃಷ್ಟಿಯ ಚಿಂತನಾರ್ಹ ಲೇಖನ.

51ನೆಯ ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ಲೇಖನ. ಈ ಹಿನ್ನೆಲೆಯಲ್ಲಿ ಹಲವಾರು ವೈಚಾರಿಕ ಲೇಖನಗಳನ್ನೂ ಪ್ರಕಟಿಸಲಾಗುವುದು.

ಕರ್ನಾಟಕವೆಂದಾಗ 27 ಜಿಲ್ಲೆಗಳನ್ನೊಳಗೊಂಡ ಕರ್ನಾಟಕ ರಾಜ್ಯದ ಭೂಪಟ ನಮ್ಮ ಕಣ್ಣಮುಂದೆ ಬಂದುನಿಲ್ಲುತ್ತದೆ. ಗೋವಾ, ಮಹಾರಾಷ್ಟ್ರ, ಆಂಧ್ರ, ತಮಿಳುನಾಡು, ಕೇರಳ ಹಾಗೂ ಅರಬ್ಬೀ ಸಮುದ್ರಗಳಿಂದ ಆವರಿಸಿದ ಈ ರಾಜ್ಯದ ಕಲ್ಪನೆಯನ್ನು ಐವತ್ತು ವರ್ಷಗಳ ನಂತರವಾದರೂ ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಭಾಷಾವಾರು ಪ್ರಾಂತ್ಯದ ಆಧಾರದ ಮೇಲೆ, ಕರ್ನಾಟಕ ಏಕೀಕರಣ ಹೋರಾಟದ ಫಲವಾಗಿ, 1956ರ ರಾಜ್ಯ ಪುನರ್ ವಿಂಗಡಣಾ ಸಮಿತಿಯ ವರದಿಯ ಮೇರೆಗೆ ನಮ್ಮ ಗಡಿರೇಖೆಯನ್ನು ಗುರುತಿಸಲಾಯಿತು. ಭಾಷೆಯ ಹಿನ್ನೆಲೆಯಲ್ಲಿ ಜನರನ್ನು ಒಂದುಗೂಡಿಸಿ ಗೆರೆ ಎಳೆಯಲಾಯಿತು. ಅದು ಗೆರೆ ಮಾತ್ರವಾಗಿ ಉಳಿದಿದೆಯೇ?

ಗಡಿಯ ಕಲ್ಪನೆಯನ್ನು ಅರಿಯಬೇಕಾದರೆ ಅದರ ವಿಭಿನ್ನ ಆಯಾಮಗಳನ್ನು ಪರಿಶೀಲಿಸಬೇಕಾಗುತ್ತದೆ. ಕರ್ನಾಟಕವನ್ನು ಚಾರಿತ್ರಿಕ ಕರ್ನಾಟಕ, ಭೌಗೋಳಿಕ ಕರ್ನಾಟಕ, ಸಾಂಸ್ಕೃತಿಕ ಕರ್ನಾಟಕ ಹಾಗೂ ಆರ್ಥಿಕ ಕರ್ನಾಟಕವೆಂದು ವಿಭಿನ್ನ ಸ್ಥರಗಳಲ್ಲಿ ಅರ್ಥೈಸಬಹುದಾಗಿದೆ.

ಚರಿತ್ರೆಯಲ್ಲಿ ಕರ್ನಾಟಕಕ್ಕೊಂದು ಗಡಿ ಇತ್ತೆ

ಕನ್ನಡನಾಡಿನ ಮೇರೆಯನ್ನು ಉಲ್ಲೇಖಿಸುವಾಗ ಕವಿರಾಜ ಮಾರ್ಗ ಕೃತಿಯ ಸಾಲುಗಳನ್ನು ನೆನೆಯುತ್ತೇವೆ.

"ಕಾವೇರಿಯಿಂದ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ", ಎಂಬ ಸಾಲು ಕ್ರಿ.ಶ 9ನೆಯ ಶತಮಾನದ ಹಾಗೂ ಅದರ ಹಿಂದಿನ ಭೌಗೋಳಿಕ ಪ್ರದೇಶವೊಂದನ್ನು ಸೂಚಿಸುತ್ತದೆ. ಕಾವೇರಿಯಿಂದ ಗೋದಾವರಿವರೆಗಿನದು ಒಂದು ರಾಜ್ಯವೆಂದಾಗಲೀ, ರಾಜಕೀಯ ಗಡಿಯೆಂದಾಗಲೀ ಅದು ಸೂಚಿಸುವುದಿಲ್ಲ. ಅದು ಒಂದು ಭೌಗೋಳಿಕ ಪ್ರದೇಶ ಮಾತ್ರವಾಗಿತ್ತು. ಈ ಕರ್ನಾಟಕ ಭೂಭಾಗದಲ್ಲಿ ಕನ್ನಡ ಮಾತನಾಡುವ ಜನ ವಾಸಿಸುತ್ತಿದ್ದರು. ಆ ಕನ್ನಡದಲ್ಲೂ ಹಲವು ಭಗೆಗಳಿದ್ದವೆಂದು ಕವಿರಾಜಮಾರ್ಗದಿಂದಲೇ ತಿಳಿದುಬರುತ್ತದೆ.



ಡಾ. ವಸು
ಪ್ರಾಧ್ಯಾಪಕರು,
ಇತಿಹಾಸ ವಿಭಾಗ
ಬೆಂಗಳೂರು ವಿ.ವಿ.

ಚಾರಿತ್ರಿಕವಾಗಿ ಕರ್ನಾಟಕವನ್ನು ಗುರುತಿಸುವಾಗ ಕರ್ನಾಟಕದ ರಾಜವಂಶಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡುತ್ತಾ ಬಂದಿದ್ದೇವೆ. ಕನ್ನಡ ಮೂಲದ ರಾಜರ ಆಳ್ವಿಕೆಗೆ ಒಳಪಟ್ಟ ಪ್ರದೇಶವನ್ನು ಗುರುತಿಸುತ್ತಾ ಕರ್ನಾಟಕದ ವಿಸ್ತಾರವನ್ನು ವೈಭವದಿಂದ ನೆನೆಸಿಕೊಳ್ಳುತ್ತೇವೆ. ಪುಲಕೇಶಿ ಕ್ರಿ.ಶ ಏಳನೆಯ ಶತಮಾನದಲ್ಲಿ ನರ್ಮದಾ ತೀರದಲ್ಲಿ ಹರ್ಷವರ್ಧನನನ್ನು ಸೋಲಿಸಿ 'ದಕ್ಷಿಣಾ ಪಥೇಶ್ವರ' ಎನಿಸಿಕೊಂಡ. ಆದ್ದರಿಂದ ಕರ್ನಾಟಕದ ಸೀಮೆ ನರ್ಮದಾ ನದಿಯವರೆಗೆ ಹರಡಿತ್ತೆಂದು ಹೇಳುತ್ತೇವೆ. ಹಾಗೆಯೇ ಕನ್ನಡ ಸಾಹಿತ್ಯಕ್ಕೆ ಅಪಾರ ಪ್ರೋತ್ಸಾಹವನ್ನು ನೀಡಿದ ರಾಷ್ಟ್ರಕೂಟರು ವಿಶಾಲವಾದ ಪ್ರದೇಶವನ್ನು ಆಳಿದವರೆಂದೂ ಹೆಮ್ಮೆಪಡುತ್ತೇವೆ. ಕನ್ನಡಿಗರಂತೆ ಮರಾಠಿಗರೂ ಅಭಿಮಾನದಿಂದ ರಾಷ್ಟ್ರಕೂಟರನ್ನು ಸ್ಮರಿಸುತ್ತಾರೆ. ಅಷ್ಟೇ ಅಲ್ಲದೆ ಮಹಾರಾಷ್ಟ್ರದ ಹೆಸರಿನ ವ'ಂಊಲದ'ಲಊ್ಲ ರಾಷ್ಟ್ರಕೂಟರನ್ನೇ ಗುರುತಿಸುತ್ತಾರೆ. ಗಂಗರು, ಕಲ್ಯಾಣಿ ಚಾಲುಕ್ಯರು ಮತ್ತು ಹೊಯ್ಸಳರು ಆಳಿದ ಪ್ರದೇಶವನ್ನು ಕನ್ನಡನಾಡಿನ ಚರಿತ್ರೆಯೆಂದು ಅಧ್ಯಯನ ಮಾಡುತ್ತಾ ಪ್ರಾಚೀನ ಕರ್ನಾಟಕದ ಸೀಮೆಯ ಚಿತ್ರಣವನ್ನು ಕಟ್ಟಿಕೊಳ್ಳುತ್ತೇವೆ. ಕನ್ನಡ ಮೂಲದ ರಾಜರು ಕನ್ನಡ ಪ್ರದೇಶವನ್ನು ಆಳಿದಂತೆ ಕರ್ನಾಟಕದ ಹೊರಗೂ ತಮ್ಮ ರಾಜ್ಯಭಾರವನ್ನು ವಿಸ್ತರಿಸಿದ್ದರು. ಚರಿತ್ರೆಯನ್ನು ಆಧರಿಸಿ ಇಂದಿನ ಕರ್ನಾಟಕದ ಮೇರೆಯನ್ನು ಗುರುತಿಸಬಹುದೇ ಎನ್ನುವ ಪ್ರಶ್ನೆ ಹಲವು ಬಾರಿ ನನ್ನನ್ನು ಕಾಡಿಸಿದ್ದು ಅದಕ್ಕಾಗಿ ಉತ್ತರವನ್ನು ಹುಡುಕುವ ಪ್ರಯತ್ನ ಇದಾಗಿದೆ. ಏಕೆಂದರೆ ಕನ್ನಡ ನಾಡು ನುಡಿಯ ಬಗ್ಗೆ ಆವೇಶದಿಂದ ಮಾತನಾಡುವ ಸಂದರ್ಭಗಳಲ್ಲಿ ಕನ್ನಡದ ಮೇರೆಯ ಆಚೆ ಸಿಗುವ ಶಾಸನಗಳನ್ನು ಉಲ್ಲೇಖಿಸಿ ಕರ್ನಾಟಕ ಒಂದು ಕಾಲಕ್ಕೆ ನರ್ಮದಾ ನದಿಯವರೆಗಿತ್ತು ಅಥವಾ ಆಂಧ್ರ ಪ್ರದೇಶದ ಭಾಗಗಳು ತಿರುಳ್ಗನ್ನಡ ನಾಡಾಗಿತ್ತೆಂದು ಹೇಳಿಕೊಳ್ಳುತ್ತಾ ಆ ನಾಡಿನ ಜನ ನಮ್ಮ ಭೂಭಾಗವನ್ನು ಕಸಿದುಕೊಂಡಿದ್ದಾರೆಂಬ ಭಾವನೆಯನ್ನು ಬಿತ್ತುವುದು ಕಾಣಬರುತ್ತದೆ. ಕನ್ನಡಿಗರ ಆಡಳಿತ ಭಾಗ ವಿಶಾಲವಾಗಿತ್ತೆಂಬ ಗತ ವೈಭವ ದುರಭಿಮಾನಕ್ಕೆ ತಿರುಗದಿರಲೆಂಬ ಕಾರಣಕ್ಕಾಗಿ ಮತ್ತಷ್ಟು ಉದಾಹರಣೆಗಳನ್ನು ನೋಡಬೇಕಾಗಿದೆ. ಕನ್ನಡಿಗರು ಕರ್ನಾಟಕದ ಎಲ್ಲೆಯನ್ನು ಅರಿಯಲು ಬಯಸುವಂತೆ ನೆರೆನಾಡಿನ ಜನರೂ ತಮ್ಮ ನಾಡಿದ ಎಲ್ಲೆಗಳನ್ನು ಚರಿತ್ರೆಗಳಲ್ಲಿ ಹುಡುಕುವುದು ಸೋಜಿಗದ ವಿಷಯವೇನಲ್ಲ. ಬಾದಾಮಿ ಚಾಲುಕ್ಯರು ಕಂಚಿಯುವರೆಗೆ ತಮ್ಮ ರಾಜ್ಯವನ್ನು ವಿಸ್ತರಿಸಿದಂತೆ, ಪಲ್ಲವರು ಹಿಂತಿರುಗಿ ಬಾದಾಮಿಯನ್ನು ವಶಪಡಿಸಿಕೊಂಡು ಕೆಲವು ಕಾಲ ಆಳಿದ್ದರು. ಅಷ್ಟೇ ಏಕೆ ಕದಂಬರು ಅಧಿಕಾರಕ್ಕೆ ಬಂದಾಗ ಕನ್ನಡನಾಡಿನ ಬಹುತೇಕ ಪ್ರದೇಶಗಳು ತಮಿಳು ಪಲ್ಲವರ ಆಳ್ವಿಕೆಗೆ ಒಳಪಟ್ಟಿತ್ತು. ಚರಿತ್ರೆಯ ಪುಟಗಳನ್ನು ಇನ್ನೂ ಹಿಂದಕ್ಕೆ ತಿರುಗಿಸಿದರೆ ಆಂಧ್ರರು ಎನಿಸಿಕೊಂಡ ಶಾತವಾಹನರು ಕ್ರಿ.ಶ.ದ. ಆರಂಭದಲ್ಲಿ ಕರ್ನಾಟಕದ ಪ್ರದೇಶಗಳನ್ನು ಆಳಿದ್ದರು. ಕರ್ನಾಟಕದ ರಾಜಕೀಯ ಚರಿತ್ರೆಯನ್ನು ಆರಂಭಿಸುವುದೇ ಮೌರ್ಯರ ಕಾಲದಿಂದ. ಅಶೋಕನ ಶಾಸನಗಳನ್ನು ಕರ್ನಾಟಕದಲ್ಲಿ ಕಂಡಾಗ ನಮ್ಮ ಅರಿವಿಗೆ ಬಂದದ್ದು ಕ್ರಿ.ಪೂ. 3ನೆಯ ಶತಮಾನದಲ್ಲಿ ಇಂದಿನ ಕರ್ನಾಟಕ ಪ್ರದೇಶ ಅಶೋಕನ ಆಳ್ವಿಕೆಗೆ ಒಳಪಟ್ಟಿತ್ತು. ಒಂದು ರೀತಿಯಲ್ಲಿ ಕರ್ನಾಟಕದ ರಾಜಕೀಯ ಸಂಸ್ಥೆಯ ಬೆಳವಣಿಗೆ ಕನ್ನಡೇತರ ಪ್ರದೇಶದ ಆಡಳಿತಗಾರರಿಂದ ಆರಂಭಗೊಂಡಿತಲ್ಲವೇ? ಹಾಗಾದರೆ ಅದು ನಮ್ಮ ಅಭಿಮಾನಕ್ಕೆ ಚ್ಯುತಿ ತರುವ ವಿಚಾರವೇ?

ಚೋಳರು ತಮಿಳರಾಗಿದ್ದು ಬಹು ದೀರ್ಘಕಾಲ ದಕ್ಷಿಣ ಕರ್ನಾಟಕ ಪ್ರಾಂತ್ಯಗಳನ್ನು ಆಳುತ್ತಿದ್ದರು. ತಮಿಳರಲ್ಲದೇ ತೆಲುಗು, ಗುಜರಾತಿ, ಉರ್ದು, ಮರಾಠಿ ಮೂಲದ ದೊರೆಗಳು ಕರ್ನಾಟಕ ಪ್ರದೇಶವನ್ನು ಆಳಿದ್ದಾರೆ. ವಿಜಯನಗರ ಸಾಮ್ರಾಜ್ಯದ ಆರಂಭದಲ್ಲಿ ಕನ್ನಡ ಮೂಲದ ದೊರೆಗಳೂ ಆನಂತರ ತುಳು ಹಾಗೂ ತೆಲುಗು ಮೂಲದ ದೊರೆಗಳು ಅಧಿಕಾರವನ್ನು ವಹಿಸಿಕೊಂಡಿದ್ದರು. ಅವರ ರಾಜ್ಯ ಕೇವಲ ಕನ್ನಡನಾಡಿಗೆ ಮೀಸಲಾಗದೆ ಆಂಧ್ರ, ತಮಿಳು ನಾಡುಗಳನ್ನು ಒಳಗೊಂಡಿತ್ತು. ಕನ್ನಡ-ಆಂಧ್ರ ರಮಾರಮಣನೆನಿಸಿಕೊಂಡಿದ್ದ ಕೃಷ್ಣದೇವರಾಯನ



ಆಸ್ಥಾನದಲ್ಲಿ ತೆಲುಗರು ಹೆಚ್ಚಿನ ಆದ್ಯತೆಯನ್ನು ಪಡೆದುಕೊಂಡಿದ್ದರು. ಬಹುಮನಿ ಸುಲ್ತಾನರು ಕನ್ನಡ ಮತ್ತು ತೆಲುಗು ಭಾಷೆಗಳ ಜೊತೆಗೆ ಮೂರನೆಯ ಭಾಷೆ 'ಪರ್ಷಿಯನ್'ನನ್ನು ಪರಿಚಯಿಸಿದರು. ಇಸ್ಲಾಂ ಸಂಸ್ಕೃತಿಯನ್ನು ನಾಡಿಗೆ ಪರಿಚಯಿಸಿದರು. ವಿಜಯನಗರ ಸಾಮ್ರಾಜ್ಯದ ನಂತರ ವಿಸ್ತಾರವಾದ ರಾಜ್ಯವನ್ನು ಕಟ್ಟಿದವರೆಂದರೆ ಹೈದರ್ ಮತ್ತು ಟಿಪ್ಪು. ಕನ್ನಡದ ಭಾಗಗಳಲ್ಲದೆ ಕೇರಳ-ತಮಿಳುನಾಡಿನ ಬಹುಭಾಗ ಆತನ ರಾಜ್ಯಕ್ಕೆ ಒಳಪಟ್ಟಿತ್ತು. ಅಂದರೆ ಸ್ವಾತಂತ್ರ್ಯಪೂರ್ವದ ರಾಜ್ಯದ ಕಲ್ಪನೆಗೂ ಇಂದಿನ ಆಧುನಿಕ ರಾಜ್ಯದ ಕಲ್ಪನೆಗೂ ಅಜಗಜಾಂತರ. ಅಂದಿನ ರಾಜ್ಯ ಅದರ ಗಡಿಗಳು ರಾಜ್ಯದ ಆರ್ಥಿಕ-ಸೈನಿಕ ಶಕ್ತಿ ಸಾಮರ್ಥ್ಯವನ್ನು ಒಳಗೊಂಡಿತ್ತು. ರಾಜಕೀಯ ಬಲಾಬಲಕ್ಕೆ ಅನುಗುಣವಾಗಿ ಮೇರೆಗಳು ಬದಲಾಗುತ್ತಿದ್ದವು. ಅಂದಿನ ರಾಜಕೀಯ ಆಕ್ರಮಣಗಳಿಗೆ ರಾಜ್ಯ ವಿಸ್ತರಣೆಗೆ ಭಾಷೆ ಕಾರಣವಾಗಿರಲಿಲ್ಲ.

ಭೌಗೋಳಿಕ ನೆಲೆ

ಇನ್ನು ಕನ್ನಡಿಗರ ವಾಸದ ನೆಲೆಗಳನ್ನು ಗಮನಿಸಿದರೆ ಅದೂ ಸಹ ನಿರಂತರ ಬದಲಾವಣೆಗೆ ಒಳಗಾಗಿದೆ. ಇಂತಹ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳ ಬೇಕಾಗುತ್ತದೆ. ಆನಂತರ ಕ್ರಿ.ಶ 15ನೆಯ ಶತಮಾನದಲ್ಲಿ ವಿಜಯನಗರ ಕಾಲದಲ್ಲಿ ಆಂಧ್ರರು ಕನ್ನಡ ನಾಡಿನ ಕಡೆಗೆ ಹರಿದುಬಂದರು. ವಿಜಯನಗರ ಕಾಲದಲ್ಲಿ ಆಂಧ್ರರು ಸಾಮ್ರಾಜ್ಯದ ಆಸರೆಗಾಗಿ ಅವಕಾಶವನ್ನು ಅರಸಿ ಬಂದಿದ್ದರೆ, ವಿಜಯನಗರ ಪತನಾ ನಂತರ ಬುಡಕಟ್ಟು ಜನರ ವಲಸೆ ನಿರಂತರವಾಗಿ ಕಾಣಬರುತ್ತದೆ. ಕರ್ನಾಟಕದ ಹಳ್ಳಿಗಳಲ್ಲಿ ಹರಡಿ ಹೋಗಿರುವ ಹಲವಾರು ಬುಡಕಟ್ಟು ಜನರು ಆಂಧ್ರ ಮೂಲದವರಾಗಿದ್ದಾರೆ.

ತಮಿಳರ ಕರ್ನಾಟಕ ವಲಸೆಗೆ ಅವರದೇ ಆದ ಜಾಡುಗಳಿವೆ. ಹಲವು ಪಾಳೆಯಗಾರರ ಕಥೆಗಳಲ್ಲಿ ತಮ್ಮ ಮೂಲವನ್ನು ಉತ್ತರದಲ್ಲಿ ಹುಡುಕಿದರೆ, ಕೆಲವರು ದಕ್ಷಿಣ ದೇಶದಿಂದ ಬಂದುದಾಗಿ ಹೇಳಿಕೊಳ್ಳುತ್ತಾರೆ. ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಬಂದ ಉಲ್ಲೇಖ ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ. ರಾಜ ಸ್ವತಃ ಜೈನ ಧರ್ಮದಿಂದ ವೈಷ್ಣವ ಧರ್ಮವನ್ನು ಸ್ವೀಕರಿಸಿದಾಗ ವೈಷ್ಣವರು ಸಾಕಷ್ಟು ಸಂಖ್ಯೆಯಲ್ಲಿ ಕರ್ನಾಟಕಕ್ಕೆ ಬಂದು ಆಶ್ರಯ ಪಡೆದುಕೊಂಡರು. ಬ್ರಿಟಿಷರು ಮೈಸೂರು ಸಂಸ್ಥಾನವನ್ನು ವಶಪಡಿಸಿಕೊಂಡಾಗ, ಬ್ರಿಟೀಷ್ ಪ್ರಾಂತ್ಯವಾಗಿದ್ದ ಮದರಾಸಿನಿಂದ ಅಧಿಕಾರಿಗಳಾಗಿ ತಮಿಳರು ಮೈಸೂರು ಪ್ರಾಂತ್ಯಕ್ಕೆ ಬರತೊಡಗಿದರು. ಈ ಎರಡೂ ಸಂದರ್ಭದಲ್ಲಿ ಮೇಲ್ವರ್ಗದ ತಮಿಳರು ಕರ್ನಾಟಕದೆಡೆಗೆ ವಲಸೆ ಬಂದರೆ ಆಧುನಿಕ ಕಾಲದ ಚಿತ್ರಣವೇ ಬೇರೆ. ಬೆಂಗಳೂರು ಕೈಗಾರಿಕಾ ನಗರವಾಗಿ ಬೆಳೆದಂತೆ ತಾಂತ್ರಿಕ ಹಿನ್ನೆಲೆಯ ವರ್ಗ ಹಾಗೂ ಕೂಲಿ ಕಾರ್ಮಿಕರಿಬ್ಬರೂ ವಲಸೆ ಬರತೊಡಗಿದರು. ಹಾಗೆಯೇ ಇತರ ಕೈಗಾರಿಕಾ ಪ್ರದೇಶಗಳಾದ ಕೆ.ಜಿ.ಎಫ್, ಹರಿಹರ ಹಾಗೂ ಕಾಫಿ ತೋಟಗಳಿಗೆ ಕೂಡ.

ಸ್ವಾತಂತ್ರ್ಯಾ ನಂತರದಲ್ಲಿ ಕನ್ನಡಿಗರು ಮುಂಬೈ, ಮದರಾಸಿಗೆ ವಲಸೆ ಹೋದರೆ, 80ರ ದಶಕದಿಂದ ವಿದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ನೆರೆನಾಡಿನಿಂದ ವಲಸೆ ಬರುತ್ತಿರುವವರಲ್ಲಿ ಕೇರಳದ ಜನರೂ ಮುಖ್ಯರೆ. ಕರ್ನಾಟಕ ಕೇರಳದ ಗಡಿಯಲ್ಲಿ ಕಾಫಿ ತೋಟಗಳನ್ನು ಕೊಳ್ಳುವ ಮೂಲಕ ಕರ್ನಾಟಕದ ಕಡೆ ವಿಸ್ತರಿಸಿದರೆ, ಶಿಕ್ಷಣ ಹಾಗೂ ಉದ್ಯೋಗಕ್ಕಾಗಿ ಬೆಂಗಳೂರಿನ ಕಡೆ ಬರುವ ಪ್ರಕ್ರಿಯೆ ನಿರಂತರವಾಗಿ ಸಾಗಿದೆ. ಆದರೆ ಕರ್ನಾಟಕದಿಂದ ಕೇರಳದ ಕಡೆ ಸಾಗುವ ಜನರ ಪ್ರಮಾಣ ಬಹು ಕಡಿಮೆ. ಆಂಧ್ರದ ಕಡೆ ವಲಸೆ ಹೋಗುತ್ತಿರುವ ಉತ್ತರ ಕರ್ನಾಟಕದ ಜನರ ಸಂಖ್ಯೆ ಹೆಚ್ಚಿದೆ.

ಇಷ್ಟೆಲ್ಲಾ ವಿವರಣೆಯನ್ನು ನೀಡುವ ಮೂಲಕ ಜನ ನಿರಂತರವಾಗಿ ಒಂದು ಪ್ರದೇಶದಿಂದ ಮತ್ತೊಂದಕ್ಕೆ ವಲಸೆ ಹೋಗುತ್ತಿದ್ದಾರೆ. ಅವರ ವಲಸೆ ಹೋಗುವ ಕಾರಣಗಳು ಬಹುಮುಖ್ಯವಾಗಿ ಉದ್ಯೋಗಾವಕಾಶವೇ ಆಗಿದ್ದರೂ, ಅದೊಂದೇ ಕಾರಣವೂ ಅಲ್ಲ ಎಂಬುದನ್ನು ಸಮರ್ಥಿಸಬೇಕಾಗಿದೆ. ಸ್ವಾತಂತ್ರ್ಯ? ನಂತರವೂ ವಲಸೆ ಮುಂದುವರಿದಿದ್ದರೂ ಮಿತವಾಗಿದೆ. ಭಾಷಾವಾರು ರಾಜ್ಯಗಳ ರಚನೆ ನೆಲದೊಡನೆ ಗುರುತಿಸಿಕೊಳ್ಳುವ ಹೊಸ ಐಡೆಂಟಿಟಿಗಳನ್ನು ಕೊಡುತ್ತಾ ಬಂದಿದೆ. ಕನ್ನಡಿಗರು ವಾಸಿಸಿದ ನೆಲೆಯನ್ನು ಆಧರಿಸಿ ಭೂಪಟಗಳನ್ನು ರಚಿಸಿದರೆ ಕಾಲಕಾಲಕ್ಕೆ ಹೇಗೆ ಭಿನ್ನವಾಗಿತ್ತೆಂದು ಅರಿಯಬಹುದು.

ಕಾಲಕಾಲಕ್ಕೆ ಜನ ವಲಸೆ ಹೋಗುವ ಕಾರಣಗಳು ಬದಲಾಗುತ್ತವೆ. ಜಾಗತೀಕರಣ ಜನರ ಚಲನೆಯನ್ನು ಹೆಚ್ಚಿಸಿದೆ. ವಲಸೆಯ ಪ್ರಕ್ರಿಯೆ 'ಗಡಿ'ಯ ಕಲ್ಪನೆಗಿರುವ ದೊಡ್ಡ ಸವಾಲೇ ಸರಿ.

(ಮುಂದುವರಿಯುವುದು)

ಸಂಪಾದಕೀಯ

ಜನರ ಮರೆತ ಜನನಾಯಕರು !

ಮೊನ್ನೆ ವಿಧಾನಸಭೆಯ ಮೊಗಸಾಲೆಯಲ್ಲಿಯೇ ರಾಜ್ಯಪಾಲರಿಗೆ ಅಹವಾಲು ಸಲ್ಲಿಸಲೆಂದು ಬಂದಿದ್ದ ಮಹಿಳೆಯೊಬ್ಬಳು ತೀವ್ರಗೊಂಡ ಅಸ್ವಮಾದಿಂದಾಗಿ ಸತ್ತು ಹೋದದ್ದು ಅತ್ಯಂತ ಧಾರುಣ ಘಟನೆ. ಹಾಗೆಯೇ ಅಂತಹುದ್ದೇ ಅಹವಾಲು ಸಲ್ಲಿಸಬೇಕಿದ್ದ ಯುವಕನೊಬ್ಬ ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿ ಸಾವು -ಬದುಕಿನ ನಡುವೆ ಹೋರಾಡುತ್ತಿದ್ದಾನೆ. ಬದುಕಲು ಒಂದು ನೆಲೆ, ಉದ್ಯೋಗವನ್ನರಿಸಿ ಇಂತಹ ದರ್ಶನ ಭಾಗ್ಯ ಪಡೆದು, ಏನೂ ಆಗದೇ ನಿರಾಶನಾಗಿ ಹೀಗೆ ಸ್ವಹತ್ಯೆಗೆ ಮುಂದಾದದ್ದು ನಾಲ್ಕನೇ ಬಾರಿ ಎಂಬುದಂತೂ ಇಂದಿನ ವ್ಯವಸ್ಥೆಯ ಪೊಳ್ಳುತನವನ್ನೂ, ಆಳುವವರ ವಂಚನೆಯ ಮಾತುಗಳನ್ನು ಬಯಲುಗೊಳಿಸುತ್ತವೆ. ನೂರಾರು ಕಿ.ಮೀಗಳನ್ನು ಹೇಗೋ ಕ್ರಮಿಸಿ. ಅಹವಾಲು ಹಿಡಿದು ಇಲ್ಲಿಯವರೆಗೂ ಯಾಕೆ ಜನಸಂಗುಳಿ ಬರುತ್ತಿದೆ. ಸಮಸ್ಯೆಗಳೇನು ಎಂಬುದರತ್ತ ಕಿಂಚಿತ್ತೂ ಚಿಂತಿಸದ ಆಳುವವರ ನಿರ್ಲಕ್ಷ್ಯ, ಹಾಗೂ ಭಂಡತನಗಳು ಅಮಾನುಷತೆಯ ಪ್ರತೀಕ. ಅಲ್ಲಿ ತೋರುವ 'ಕಾಳಜಿ' ಗಳು ಪ್ರಚಾರ ಪ್ರಿಯತೆಯ ದ್ಯೋತಕ. ಅಲ್ಲಿ ಸತ್ತ ಮಹಿಳೆಯ ಕುಟುಂಬಕ್ಕೆ ಹತ್ತು ಸಾವಿರ ರೂಪಾಯಿಗಳ ಚೆಕ್ ನೀಡಿ ಹೊರದಬ್ಬಿದ ಅಧಿಕಾರಶಾಹಿಯ ಕ್ರಮ ಅದಕ್ಕೊಂದು ಉದಾಹರಣೆ.


ಸಂದರ್ಭ ಸಾಧಕರ ಸರ್ಕಾರ ಪತನದ ಬಳಿಕದ ಅನಿವಾರ್ಯವಾಗಿ ಹೇರಲಾದ ರಾಷ್ಟ್ರಪತಿ ಆಡಳಿತದಲ್ಲಿ ರಾಜ್ಯಪಾಲರು ಇಡೀ ರಾಜ್ಯದ 'ಜನರ ಕಣ್ಣೀರು ತೊಡೆದು' ಹಾಕಲು ಸಂಕಲ್ಪಿಸಿದಂತಿದೆ! ಜನತಾ ದರ್ಶನಕ್ಕೆ ಜನರು ಹರಿದು ಬರುತ್ತಿರುವುದರಿಂದ ಪುಳಕಿತರಾಗಿ ಆಯಾ ಜಿಲ್ಲೆಗಳಲ್ಲಿಯೂ ಅಧಿಕಾರಿಗಳೂ ಇಂತಹುದ್ದೇ ಸ್ಕೀಮನ್ನು ಜಾರಿಗೆ ತರಲು ಯೋಚಿಸಿದ್ದಾರೆ. ಆದರೆ ಅವರು ಒಂದು ಪ್ರಶ್ನೆಯನ್ನು ಕೇಳಿಕೊಳ್ಳುತ್ತಿಲ್ಲ.... 'ಜನರೇಕೆ ಹೀಗೆ' ರಾಜಧಾನಿಗೆ ಬಂದು ದುಂಡಾಗಿ ಕಾಯುತ್ತಿದ್ದಾರೆ. ಸರ್ಕಾರದ ಆಡಳಿತ ಯಂತ್ರದ ಹರವು-ಶಕ್ತಿಯನ್ನು ಸಮರ್ಥವಾಗಿ ಬಳಸಿ ಅಲ್ಲಲ್ಲೇ ಪ್ರಶ್ನೆಗಳನ್ನು ಇತ್ಯರ್ಥಗೊಳಿಸಲಾಗದೇ ಎಲ್ಲವನ್ನೂ ಕೇಂದ್ರೀಕರಿಸಿಕೊಳ್ಳುವ ವಿಕೇಂದ್ರೀಕರಣ ನಿರೀಕ್ಷಿತ ಫಲಿತಾಂಶವಾಗಲೀ, ಜನರಿಗೆ ಪರಿಹಾರವನ್ನು ತರುವುದಿಲ್ಲ ಎಂಬುದನ್ನು ಯೋಚಿಸಬೇಕು. ಆಡಳಿತ ಯಂತ್ರವನ್ನು ಎಲ್ಲಾ ಹಂತಗಳಲ್ಲಿಯೂ ಚುರುಕುಗೊಳಿಸಬೇಕು. ಅಂತಹ ಕಾಳಜಿಯೂ ಇರಬೇಕು. ಇದಿಲ್ಲದೇ ನಡೆಸುವ 'ದರ್ಶನಗಳು' ಸಾರ್ವಜನಿಕ 'ಶೋ'ಗಳಾಗಿ ಬಿಡುತ್ತವೆ.

ರಾಜ್ಯದ ಜನತೆ ಗಂಭೀರವಾದ ಸಮಸ್ಯೆಗಳನ್ನು, ಸವಾಲುಗಳನ್ನು ಎದುರಿಸುತ್ತಿದ್ದಾರೆ. ಅತಿವೃಷ್ಟಿಯಿಂದಾದ ನೆರೆಹಾವಳಿಯಿಂದ ಇದ್ದು ಬದ್ದ ಆಸ್ತಿ, ಆಶ್ರಯ ಕಳೆದುಕೊಂಡಿದ್ದಾರೆ. ಬೆಳೆಯೂ ನಾಶವಾಗಿದೆ. ಕೃಷಿಯೂ ಹಾಳಾಗಿದೆ, ಸಂತ್ರಸ್ತರೀಗ ನಿರಾಶ್ರಿತರು. ಇದನ್ನು ಪರಿಶೀಲಿಸಿ ಪರಿಹಾರ ಕೊಡಲೆಂದು ನಾಲ್ಕು ಕೇಂದ್ರದ ತಂಡಗಳು ಬಂದು ಹೋದರೂ, ರಾಜ್ಯ ಸರ್ಕಾರ ಅಂದಿನ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳು ವೈಮಾನಿಕ ಸಮೀಕ್ಷೆ ನಡೆಸಿ ನಷ್ಟ ಅಂದಾಜು ಮಾಡಿ, ಪರಿಹಾರದ ಯೋಜನೆ ರೂಪಿಸಿದರೂ ವಾಸ್ತವದಲ್ಲಿ ಸಂತ್ರಸ್ತರಿಗೆ ಪರಿಹಾರ ಸಿಗದೇ ಪರಿತಾಪದಲ್ಲೇ ದಿನ ನೂಕುತ್ತಿದ್ದಾರೆ. ಈಗಲೂ ಅಷ್ಟಿಷ್ಟು ಇದ್ದ ಭತ್ತ, ಜೋಳ, ಸೂರ್ಯಕಾಂತಿ, ಕಾಫಿ, ಮೆಣಸು ಬರೆ ಎಳೆಯುತ್ತಿರುವಂತೆ ತೂಫಾನಿನ ಮಳೆಗೆ ನೆಲಕಚ್ಚಿದೆ. ಮೇಲಾಗಿ ಕೃಷಿ ಬಿಕ್ಕಟ್ಟು. ಸಾಲದ ಬಾಧೆಯಿಂದ ರೈತರು ಆತ್ಮಹತ್ಯೆ ಸರಣಿಯ ಕುಣಿಕೆಯಲ್ಲಿ ಸಿಕ್ಕಿಕೊಂಡು ಬಿಟ್ಟಿದ್ದಾರೆ. ಜನಸಾಮಾನ್ಯರಿಗೆ, ಕೂಲಿಕಾರರಿಗೆ ರೇಷನ್ ವಿತರಣೆ ಸಮರ್ಪಕವಿಲ್ಲ. ಕೆಲಸವೂ ಇಲ್ಲ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಸರ್ಕಾರದ ಇಚ್ಛಾಶಕ್ತಿಯ ಕೊರತೆ ಹಾಗೂ ವರ್ಗ ನೀತಿ ತಾರತಮ್ಯದ ಹಿನ್ನೆಲೆಯಲ್ಲಿ ಕೇಳುವವರೇ ಇಲ್ಲದೇ ನಿಷ್ಪ್ರಯೋಜಕವಾಗಿದೆ. ಆತ್ಮವಿಶ್ವಾಸವೇ ಹೊರಟು ಹೋಗಿ ಕಂಗಾಲಾಗಿರುವ ಜನತೆಯನ್ನು ಕೇಳುವವರೇ ಇಲ್ಲ. ಇಂತಹ ಸನ್ನಿವೇಶದಲ್ಲಿ ಸರ್ಕಾರ ಕೂಡಲೇ ನೆರವಿಗೆ ಧಾವಿಸಬೇಕು. ರಾಜ್ಯದಿಂದಲೂ ಕೇಂದ್ರದಿಂದಲೂ ಹಣ ಬಿಡುಗಡೆಮಾಡಿ ಬದುಕು ಉಳಿಸಬೇಕು. ಮೊಗಸಾಲೆಯಲ್ಲಿ 'ದರ್ಶನ ಭಾಗ್ಯ ಕರುಣಿಸುವ', ರಾಜಕೀಯ ಕಾರಣಗಳಿಗಾಗಿ ದೆಹಲಿಯಾತ್ರೆ ಕೈಗೊಳ್ಳುವ ರಾಜ್ಯಪಾಲರು ರಾಜ್ಯದ ಪ್ರಥಮ ಪ್ರಜೆಯೂ ಆಗಿದ್ದು ಇದನ್ನು ಪ್ರಥಮ ಆದ್ಯತೆಯಾಗಿ ಪರಿಗಣಿಸುತ್ತಿಲ್ಲವೇಕೆ?

ಇನ್ನು ಅಧಿಕಾರದ ಹವಣಿಕೆಯಲ್ಲೇ ಇರುವ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷಗಳಿಗೆ ಇವ್ಯಾವೂ ಪ್ರಶ್ನೆಗಳಾಗಿಯೇ ಕಾಣದಿರುವುದು ಅವರ ಕಾಳಜಿ ಎಂತಹದ್ದು ಎಂಬುದನ್ನು ತೋರಿಸುತ್ತದೆ. ಹಾಸನದ ಮಳಲಿಯೆಂಬಲ್ಲಿ ಕೆರೆ ಒಡೆದು ಬೆಳೆ ನಾಶವಾದ ವರದಿ ಇದೆ. ಕೊಡಗಿನಲ್ಲಿ ಸುರಿಯುತ್ತಲೇ ಇರುವ ಮಳೆಗೆ ಭತ್ತ, ಮೆಣಸು, ಏಲಕ್ಕಿ, ಕಾಫಿ, ಹಾಳಾಗಿ ಆಶೆ ಕಮರಿಸಿದೆ. ಉತ್ತರ ಕರ್ನಾಟಕದಲ್ಲಿ ನೆರೆ ಹಾವಳಿಯ ರುದ್ರ ನರ್ತನದ ಪರಿಣಾಮ ಈಗಲೂ ಘೋರ. ಮಂಡ್ಯದಲ್ಲಿ ದೂರು ನೀಡಲು ಪೋಲೀಸ್ ಠಾಣೆಗೆ ಹೋಗಿದ್ದ ಮಹಿಳೆಯ ಮೇಲೆ ಎ.ಎಸ್.ಐ. ಅತ್ಯಾಚಾರಕ್ಕೆ ಯತ್ನಿಸಿದ್ದಾನೆ. ರಾಯಚೂರಿನ ಸಂಸತ್ ಸದಸ್ಯರ ಮಗನ ಅಕ್ರಮ ಸಂಬಂಧಗಳು ಮತ್ತು ಅಂತಹ ಸರಣಿ ಅತ್ಯಾಚಾರಗಳ ಬಳಿಕವೂ ಮೀಸೆ ತಿರುವುತ್ತಿದ್ದಾನೆ. ಹಾಸನ, ದಾವಣಗೆರೆಯಲ್ಲಿ ರೈತರು ಆತ್ಮಹತ್ಯೆಗೀಡಾಗಿದ್ದಾರೆ. ಅನೇಕ ಕಡೆ ಕಬ್ಬಿಗೆ ಬೆಲೆ, ಬಾಕಿ ಕೇಳುತ್ತಿದ್ದಾರೆ. ರಾಮಸೇತು, ಬಾಬಾಬುಡನ್‌ಗಿರಿ ವಿವಾದವೆತ್ತಿ ಸಂಘ ಪರಿವಾರ ಕೋಮು ವಿಭಜನೆಗೆ ದಣಿವರಿಯದೇ ಕೆಲಸ ಮಾಡುತ್ತಿದೆ. ಆಡಳಿತದಲ್ಲಿ ಭ್ರಷ್ಟ, ಸ್ವಜನಪಕ್ಷಪಾತ ವಿಜೃಂಭಿಸಿದೆ. ಹೀಗಿರುವಾಗಲೂ ನಮ್ಮ ಜನಪ್ರತಿನಿಧಿಗಳೆನಿಸಿಕೊಂಡಿರುವವರಿಗೆ ಇವ್ಯಾವೂ ಕಾಣುತ್ತಿಲ್ಲವೇ? ಈಗಲೂ ಅವರು ಶಾಸಕರು, ಸಂಸದರುಗಳಾಗಿದ್ದಾರೆ. ಸರ್ಕಾರ ರಚಿಸುವ ಒಳ-ಹೊರ ವ್ಯವಹಾರಗಳಲ್ಲೇ ಮುಳುಗಿರುವ ಇವರಿಗೆ ಜನರತ್ತ ಗಮನಹರಿಸಲು ಸಮಯವಿಲ್ಲವೇ? ಇದು ಒಂದು ದಿನವೂ ಮುಂದುವರಿಯಬಾರದ ದುಸ್ಥಿತಿ.

ಸಮಯ : ಮಧ್ಯಾಹ್ನ 11.30

ಈ ದೊಂಬರಾಟಕ್ಕೆ ಯಾವ ನೀತಿ ? ಎಲ್ಲಿ ಮಿತಿ?



ಈ ವ್ಯಾರ

■ ಎಸ್.ವೈ.ಗುರುಶಾಂತ್

ರಾಜಕೀಯ ದೊಂಬರಾಟ ನಿಂತಿಲ್ಲ. ಅಷ್ಟು ಸುಲಭವಾಗಿ ನಿಂತು ಬಿಡುವುದು ಎಂದು ಭಾವಿಸಲಾಗುವುದಿಲ್ಲ. ಅದೀಗ ದೆಹಲಿಗೆ ವರ್ಗಾವಣೆಯಾಗಿದೆ. ದೊಂಬರಾಟದ ಪಾತ್ರಗಳು ಸಹ ದೆಹಲಿಯಲ್ಲಿ ಬೀಡು ಬಿಡುತ್ತಿದ್ದಾರೆ. ಕೆಲವರು ಹೋಗಿ ಬರುತ್ತಾರೆ. ಬಿಜೆಪಿ, ಕಾಂಗ್ರೆಸ್, ಮತ್ತು ಜೆಡಿ(ಎಸ್) ಪಕ್ಷಗಳು ತಾವು ಯಾವುದೇ ರೀತಿಯ ಸರ್ಕಾರದ ರಚನೆಯ ಪರವಾಗಿಲ್ಲ, ಚುನಾವಣೆಯ ಹಾದಿಯೇ ತಮ್ಮ ಆಯ್ಕೆಯೆಂದು ಹೊರಗೆ ಶಂಖ ಊದುತ್ತಿದ್ದರೂ ತೆರೆಮರೆಯಲ್ಲಿ ಅಧಿಕಾರದ ಸುಲಭವಾಗಿ ಸಿಕ್ಕಿಬಿಟ್ಟರೆ ಅವಕಾಶ ಯಾಕೆ ತಪ್ಪಿಸಿಕೊಳ್ಳಬೇಕು ಎಂದು ಕೆಲವು ಪ್ರಮುಖರು ಜೊಲ್ಲು ಸುರಿಸುತ್ತಿದ್ದಾರೆ. ಅಲ್ಲಿಲ್ಲಿಂದ ಹೊರಟ ವಾಸನೆ ಹಿಡಿದು ತಿರುಗುತ್ತಿದ್ದಾರೆ.

ಸರ್ಕಾರ ರಚನೆಗೆ ಈಗ ದುಂಬಾಲು ಬೀಳುತ್ತಿರುವುದು ಜಾತ್ಯಾತೀತ ಜನತಾದಳದ ಶಾಸಕರ ಪ್ರಮುಖ ಬಣ. ತಮ್ಮ ಈ ಅಹವಾಲನ್ನು ಮನ್ನಿಸಬೇಕೆಂದು ಕಾಂಗ್ರೆಸ್‌ನ ಬಾಗಿಲಿಗೆ ಎಡತಾಕುತ್ತಿದ್ದಾರೆ. ಇದರ ಸಾರಥ್ಯವನ್ನು ಹಿರಿಯ ಮುಖಂಡ ಎಂ.ಪಿ., ಪ್ರಕಾಶರಿಗೆ ವಹಿಸಿದ್ದಾರೆ. 'ಶಾಸಕರ ಈ ಪ್ರಬಲ ಇಚ್ಛೆಯಂತೆ' ಅವರು ಎರಡು ಬಾರಿ ದೆಹಲಿಯಾತ್ರೆ ಕೈಗೊಂಡಿದ್ದಾರೆ. ಕಾಂಗ್ರೆಸ್‌ನ 'ಅನುಗ್ರಹ'ಕ್ಕಾಗಿ ಕಾದಿದ್ದಾರೆ. ಪ್ರಮುಖ ನಾಯಕರೊಂದಿಗೆ ಮಾತುಕತೆಗಳೂ ನಡೆದಿವೆ. ಸರ್ಕಾರ ರಚಿಸುವ ಪರವಾಗಿ ಆ ನಾಯಕರು ಇದ್ದಾರೆಂದು ವರದಿ. ಅದಕ್ಕೆಂದೇ ಪ್ರಕಾಶರ ರಾಯಭಾರಿತ್ವಕ್ಕೆ, ಸರ್ಕಾರ ರಚನೆಗೆ ಸಿದ್ಧವಿರುವ ಶಾಸಕರ ಪಟ್ಟಿಯನ್ನು ಕೇಳಿದ್ದಾರೆ. ಸದ್ಯ ಸರ್ಕಾರ ರಚನೆಗೆ ಕಾಂಗ್ರೆಸ್‌ನ 66 ಶಾಸಕರಲ್ಲದೇ ಇನ್ನು ಕನಿಷ್ಠ 47 ಶಾಸಕರು ಜೊತೆಗೂಡಬೇಕು. ಅಂದರೆ 112 ಆಗುತ್ತದೆ. ಸಜ್ಜನಿಕೆ ಮತ್ತು ರಾಜೀ ಮನೋಭಾವದ ವ್ಯಕ್ತಿತ್ವದ ಪ್ರಕಾಶ್‌ರ 'ಬಂಡಾಯ' ವೆಂದು ಹಿಗ್ಗಿ ತೋರಿಸುವ ಇಂತಹ ಸರ್ಕಸ್ಸಿನ ನಡುವೆ ಕರ್ನಾಟಕದ ಉಸ್ತುವಾರಿ ಹೊತ್ತಿರುವ ಕಾಂಗ್ರೆಸ್‌ನ ಪೃಥ್ವಿರಾಜ್ ಚವ್ಹಾಣ್ ಸರ್ಕಾರ ರಚನೆ ಅಸಾಧ್ಯವೆಂದೇ ಹೇಳುತ್ತಿದ್ದಾರೆ. ಅಧಿಕಾರವಿಲ್ಲದೇ ಬದುಕುವುದೇ ಅಸಾಧ್ಯವೆಂಬಂತೆ ಆಡುತ್ತಿರುವ ಜೆಡಿ(ಎಸ್) ಶಾಸಕರ ಮನೋಸ್ಥಿತಿ, ಅದು ಜೆಡಿ(ಎಸ್) ನಾಯಕತ್ವದ ಮೇಲೆ ಉಂಟು ಮಾಡಿರುವ ಒತ್ತಡವನ್ನು ಬಲ್ಲ ಅವರು ದೌರ್ಬಲ್ಯ, ಚಡಪಡಿಕೆ ಇನ್ನೂ ಹೆಚ್ಚಾಗಲಿ ಎಂದೂ ಹಾಗಾದರೆ ತಮ್ಮ ಮಾತಿಗೇ ಮಣಿ ಹಾಕಲೇಬೇಕಾಗುತ್ತೆಂದೂ ಭಾವಿಸಿದಂತೆ. ಕಾಂಗ್ರೆಸ್ ಜೊತೆಗಿನ ಮೈತ್ರಿಗೆ ಹೆಚ್ಚು ಹಾತೊರೆಯುವಂತಾದರೆ ಜೆಡಿ(ಎಸ್) ಪಕ್ಷದೊಳಗೆ ವಿಭಜನೆ, ಬಿರುಕು, ಭಿನ್ನಾಭಿಪ್ರಾಯದ ಬಿಸಿ ಹೆಚ್ಚುವುದು ಕಾಂಗ್ರೆಸ್‌ಗೆ ಲಾಭ ಎಂಬುದು ಅವರ ಲೆಕ್ಕಾಚಾರ. ಹೀಗಾದರೂ ಪರವಾಗಿಲ್ಲ, ನಮಗೇನು ಎಂಬಂತದೆ ಶಾಸಕರ ಒಂದು ಬಣ. ಪಕ್ಷ ಮುಳುಗಿದರೂ, ಅಧಿಕಾರ, ಆಮಿಷಗಳು ಸಿಕ್ಕರೆ ಸಾಕು ಎಂಬ ನಿಲುವು ಈ 'ಜನಪ್ರತಿನಿಧಿ' ಗಳದ್ದು ಸಂದರ್ಭ ಸಾಧಕತೆಗೆ ಸಾಟಿ ಇಲ್ಲದ್ದು ಎಂಬುದಕ್ಕೆ ಉದಾಹರಣೆ.

ಯಾಕೆಂದರೆ ಜೆಡಿ(ಎಸ್) ಪಕ್ಷದ ನಾಯಕರಾದ ದೇವೇಗೌಡರು, ರಾಜ್ಯಾಧ್ಯಕ್ಷ ಮೆರಾಜುದ್ದೀನ್ ಪಾಟೀಲರು ಈ ಸಂದರ್ಭದಲ್ಲಿ ಚುನಾವಣೆಗೆ ಹೋಗೋದೇ ಸರಿಯಾದುದು, ಅದಕ್ಕೆ ಸಿದ್ಧವಾಗಿ ಎಂದು ಸಾರಿ ಸಾರಿ ಹೇಳುತ್ತಿದ್ದಾರೆ. ಇದಕ್ಕೆ ಜೆಡಿ(ಎಸ್)ನ ಶಾಸಕಾಂಗ ಪಕ್ಷದ ನಾಯಕರೂ, ಮಾಜಿ ಮುಖ್ಯಮಂತ್ರಿಗಳೂ ಆಗಿರುವ ಕುಮಾರಸ್ವಾಮಿಯೂ ಅರಮನಸ್ಸಿನಿಂದ ಧ್ವನಿಗೂಡಿಸಿದ್ದಾರೆ. ಆದರೆ ಬಹುತೇಕ ಶಾಸಕರು ಇದನ್ನು ಕೇಳಲು ಸಿದ್ಧರಿಲ್ಲ. ಬಿಜೆಪಿ-ಕಾಂಗ್ರೆಸ್ ಪಕ್ಷಗಳಿಂದ ಅನುಭವಿಸಿದ್ದು ಸಾಕು ಸಾಕು ಎಂಬ ಅಂಶದತ್ತ ಗಮನವೇ ಇಲ್ಲ. ರಾಜ್ಯದ ಹಿತ, ಜನತೆಯ ಹಿತವೆಂಬುದು ಅವರಿಗೆ ಕಾಲು ಕಸ. ಒಂದೊಮ್ಮೆ ಸರ್ಕಾರ ರಚನೆ, ಅಧಿಕಾರದಲ್ಲಿರುವಾಗಲೇ, ಜೆಡಿ(ಎಸ್)ನ್ನು ಒಡೆದು ಅಪೋಶನ ಮಾಡಲು ಕಾಂಗ್ರೆಸ್ ನಡೆಸಿದ ಪ್ರಯತ್ನ. ಮತ್ತು ನಂತರ ಸರ್ಕಾರದ ಪತನದಿಂದ ಪಾಠ ಕಲಿಯಲು ಸಿದ್ಧರಿಲ್ಲ ಮಾತ್ರವಲ್ಲ ಅಂತಹ ಸ್ಥಿತಿಯಲ್ಲಿ ಅಧಿಕಾರ ದಾಹಕ್ಕಾಗಿ ತಾವು

ಪುಟ 6 ಕ್ಕೆ

ಸಮಯ : ಮಧ್ಯಾಹ್ನ 12.45

ಒಂದು ಬರಸಿಡಿಲ ಸುದ್ದಿ.... !!

ಇನ್ನೇನು ಪತ್ರಿಕೆ ಮುದ್ರಣಕ್ಕೆ ಹೋಗಲು ಕೊನೆಯ ಪ್ರಿಂಟ್ ಔಟ್‌ಗೆ ಹೋಗಬೇಕು. ಅಷ್ಟರಲ್ಲಿಯೇ ಅಘಾತಕಾರಿ ಸುದ್ದಿಯೊಂದು ಟಿ.ವಿ.ಗಳಲ್ಲಿ ಭಿತ್ತರಗೊಳ್ಳತೊಡಗಿದೆ. ಜಾತ್ಯಾತೀತ ಜನತಾದಳದ 41 ಶಾಸಕರು ಸರ್ಕಾರ ರಚಿಸಲು ಬಿಜೆಪಿಗೆ ಬೆಂಬಲಿಸುವ ನಿರ್ಧಾರದ ಪತ್ರ ರಾಜ್ಯಪಾಲರಿಗೆ ತಲುಪಿದೆ ಎಂದು. ಯಡಿಯೂರಪ್ಪ ರೆಡಿಯೂರಪ್ಪರಾಗಿ ರಾಜ್ಯಪಾಲರ ಮನೆ ಬಾಗಿಲಲ್ಲೇ ಬಿಡಾರ ಹೂಡಿದ್ದಾರೆಂದು. ಈ ಪತ್ರ ಕೊಟ್ಟವರು ಬೇರಾರೂ ಅಲ್ಲ. 20 ತಿಂಗಳ ಅಧಿಕಾರವಧಿ ಮುಗಿದ ಬಳಿಕ ಬಿಜೆಪಿಯ ಇತಿಹಾಸ - ಪುರಾಣದ ಬಗ್ಗೆ ದಿಢೀರನೇ ನೆನಪು ಮಾಡಿಕೊಂಡು ಬೈಯ್ಯಾಡಿದ ಕುಮಾರಸ್ವಾಮಿಯೇ. ಬಿಜೆಪಿಗೆ ಅಧಿಕಾರ ಕೊಟ್ಟರೆ ಕರ್ನಾಟಕವನ್ನು ಜನಾಂಗೀಯ ಹತ್ಯಾಕಾಂಡದ ಗುಜರಾತ್ ರಾಜ್ಯವನ್ನಾಗಿ ಮಾಡಿಬಿಡುತ್ತಾರೆ ಎಂದು ಅಬ್ಬರಿಸಿದ್ದ ರಾಜ್ಯ ಘಟಕದ ಅಧ್ಯಕ್ಷ ಮೆರಾಜುದ್ದೀನ್ ಪಟೇಲರೇ! ಇಂತಹ ಮನೆಮುರುಕ ಕ್ರಮಗಳ ಬಗ್ಗೆ ದೇವೇಗೌಡರು ಇನ್ನೇನನ್ನು ಮಾತನಾಡಿಲ್ಲ ಎಂಬುದೂ ಭಿತ್ತರವಾಗುತ್ತಲೇ ಇರುವ ಸುದ್ದಿಗಳು. ಇಂತಹ ಅಧಿಕಾರ



ಆಹಾ!! ಏನು ಸಂತೋಷ, ಏನು ಸಂಭ್ರಮ

ದಾಹದ, ಸಂದರ್ಭಸಾಧಕ ಕೃತ್ಯಗಳನ್ನು ಅತ್ಯಂತ ಸಹಜವೆಂಬಂತೆ, ಸಾಧುವೆಂಬಂತೆ ಸಮರ್ಥಿಸಿಕೊಳ್ಳುತ್ತಿದ್ದಾರೆ ಕುಮಾರಸ್ವಾಮಿ. ಭಲೇ ಕುಮಾರ 20 ತಿಂಗಳಲ್ಲೇ ಎಷ್ಟೊಂದು ವರಸೆಗಳನ್ನು ಕಲಿತುಬಿಟ್ಟದ್ದೀಯಾ ಎಂದು ಜನ ಮೂಗು ಮುರಿದು ಮೂದಲಿಸುವಂತೆ..

ರಾಜ್ಯಪಾಲರೇನೋ ಬಿಜೆಪಿಯನ್ನು ಬೆಂಬಲಿಸುವ ಪ್ರತಿಯೊಬ್ಬ ಶಾಸಕನೂ ಅಫಿಡವಿಟ್ ಪ್ರಮಾಣ ಪತ್ರವನ್ನು ಪ್ರತ್ಯೇಕವಾಗಿ ನೀಡಬೇಕೆಂದಿದ್ದಾರೆ. ನಾಟಕದ ಕೊನೆಯಂಕ ಒಂದು ರೀತಿಯಲ್ಲಿ ನಿಶ್ಚಿತ. ನಿನ್ನೆಯೇ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಇಬ್ಬರು ಪ್ರಮುಖರು ಕುಮಾರ ಸ್ವಾಮಿಯವರೊಂದಿಗೆ ದೀರ್ಘ ಮಾತನಾಡಿದರು ಎಂಬ ಒಳ ಸುದ್ದಿ ಹೀಗೆಲ್ಲಾ ತಿರುವು ಪಡೆಯುವುದು ಎಂಬ ಒಂದು ಅನುಮಾನದ ಎಳೆ ಉರುಳಿನಂತೆ ತೂಗಾಡುತ್ತಲೇ ಇತ್ತಲ್ಲ.

ಇದು ಒಂದು ಕರಾಳ ನಿರ್ಧಾರ. ಕರ್ನಾಟಕದ ಸೌಹಾರ್ದತೆ, ಶಾಂತಿ, ಪ್ರಗತಿಯನ್ನು, ಸಹಬಾಳ್ವೆಯನ್ನು ಹೊಸಕಿಹಾಕಲು ರಹದಾರಿ ಕೊಟ್ಟ ನಿರ್ಧಾರ. ಇಂದು ನಾಡಿನ ಸಂಸ್ಕೃತಿ, ಜನತೆಯ ಬದುಕನ್ನು ಪ್ರೀತಿಸುವ, ಕೋಮುವಾದವನ್ನು ವಿರೋಧಿಸುವ ಎಲ್ಲರೂ ಸಿಡಿದೇಳಬೇಕು. ಅರಮನೆಯ ಪಿತೂರಿಗಳಿಂದ ಅಧಿಕಾರದ ಅಟ್ಟವೇರುವುದರಲ್ಲಿ ನೈತಿಕತೆಯ ಲವಲೇಶವಾದರೂ ಕರ್ನಾಟಕವನ್ನು ಬಲಿತೆಗೆದು ಕೊಳ್ಳಲು ಕೋಮುವಾದಿಗಳ ನೇಣಿನ ಕುಣಿಕೆ ಹಿಡಿದು ಬರುತ್ತಿದ್ದಾರೆ. ಇಂತಹ ವಂಚಕರ ಮೈತ್ರಿಗೆ ಧಿಕ್ಕಾರವಿರಲಿ. ಹೆಜ್ಜೆ ಹೆಜ್ಜೆಗೂ ಸಂಘರ್ಷ ನಡೆಸಬೇಕಾದ ಅಗತ್ಯ ಇದೀಗ ಒದಗಿಬಂದಿದೆ. ಕೋಮುವಾದಿಗಳ ಬಗೆಗೆ ಎಷ್ಟು ಎಚ್ಚರ ವಹಿಸಿದರೂ ಕಡಿಮೆಯೇ.

ಗುಲ್ಬರ್ಗಾದ ಡಾ. ಮೀನಾಕ್ಷಿ ಬಾಳಿಯವರು 'ರಂಜನೆ, ಬೋಧನೆ, ಪ್ರಚೋದನೆ ಲಂಕೇಶ್' ಪತ್ರಿಕೆಯಲ್ಲಿ ಪ್ರಕಟಿಸಲಾಗಿರುವ ಆಕ್ಷೇಪಾರ್ಹವಾದ ಬರಹವೊಂದರ ಸಂಬಂಧದಲ್ಲಿ ಆ ಪತ್ರಿಕೆಗೆ ಬರೆದ ಪತ್ರವನ್ನು ಯಥಾವತ್ತಾಗಿ ಇಲ್ಲಿ ಪ್ರಕಟಿಸಲಾಗಿದೆ. ಅದಕ್ಕೆ ಹೆಚ್ಚಿನ ವಿವರಣೆ ಅಗತ್ಯವಿಲ್ಲವೆಂದು ಭಾವಿಸುತ್ತೇವೆ. ಆ ಲೇಖನದಲ್ಲಿ ಮೀನಾಕ್ಷಿಬಾಳಿ, ಕೆ.ನೀಲಾರವರ ಫೋಟೋಗಳನ್ನು ಬಳಸಿಕೊಳ್ಳಲಾಗಿದೆ. ಔಚಿತ್ಯ, ಅನೌಚಿತ್ಯವನ್ನು ನೀವೇ ತೀರ್ಮಾನಿಸಿ.

ಅವಿವೇಕದ ಪರಮಾವಧಿಯ ಹಿಂದಿರುವುದೇನು ಗೌರಿ ಮೇಡಂ?

ಮೇಡಂ, ಲಂಕೇಶ ಪತ್ರಿಕೆಯ ಅಕ್ಟೋಬರ್ 31, 2007ರ ವಾರ ಸಂಚಿಕೆಯಲ್ಲಿ "ನಾಗಲಿಂಗನ ತಾಯ್ಗಂಡ ಗಿರಿಯೂ ಕಲಬುರ್ಗಿಯ ಜನವಾದಿ ಮಹಿಳೆಯರೂ" ಎಂಬ ಲೇಖನ ಪ್ರಕಟವಾಗಿದ್ದು, ಅದು ತನ್ನ ಉದ್ದೇಶಿತ ಅರ್ಥವನ್ನು ಬಿಟ್ಟುಕೊಡುವಲ್ಲಿ ಸೋಲುತ್ತದೆ. ವರದಿಗಾರರ ನಿಲುವು ಸಕಾರಾತ್ಮಕವೇ ಇರಬಹುದು. ಆದರೆ ನಾಗಲಿಂಗಸ್ವಾಮಿ ಎಂಬ ಶುದ್ಧ ತರಲೆಯ ವಿಷಯವನ್ನು ವರದಿ ಮಾಡುವ ಸಂದರ್ಭದಲ್ಲಿ ಜನವಾದಿಯ ಹೆಸರನ್ನು ಉದ್ದೇಶವಿಲ್ಲದೆ ಎಳೆದುತಂದದ್ದು ಅನಾವಶ್ಯಕ ಮತ್ತು ಓದುಗರಲ್ಲಿ ತಪ್ಪಭಿಪ್ರಾಯ ಮೂಡುವಂತಾಗಿದೆ. ವಿಷಯಕ್ಕೆ ನೇರವಾಗಿ ಸಂಬಂಧಪಡದವರ ಹೆಸರು ಅಥವಾ ಫೋಟೋಗಳನ್ನು ಬಳಸಿಕೊಳ್ಳುವುದು ಪತ್ರಿಕಾಧರ್ಮದ ಉಲ್ಲಂಘನೆಯಾಗುತ್ತದೆ. ಜನವಾದಿಯಂಥಹ ಜವಾಬ್ದಾರಿಯುತ ಮಹಿಳಾಪರ ಸಂಘಟನೆಯ ಹೆಸರನ್ನು ಬಳಸಿಕೊಳ್ಳುವಾಗ ಒಂದು ಪುಟ್ಟ ಚರ್ಚೆ, ಮಾತುಕತೆ ಏನಾದರೂ ಮಾಡಬೇಕಲ್ಲವೇ? ಅಷ್ಟಕ್ಕೂ ಶೀರ್ಷಿಕೆ ಮತ್ತು ಕಾರಣವಿಲ್ಲದೆ ಪ್ರಕಟವಾದ ಫೋಟೋಗಳು ಓದುಗರಲ್ಲಿ ಗೊಂದಲವನ್ನು ಮೂಡಿಸುವಂತಿವೆ. ಈಗಾಗಲೇ ಜನವಾದಿಯ ವಿವಿಧ ಜಿಲ್ಲೆಯ ಸದಸ್ಯರು ದೂರವಾಣಿಯ ಮೂಲಕ ಇದೇನು? ಹೀಗೇಕೆ? ಎಂದು ಪ್ರಶ್ನಿಸುತ್ತಿದ್ದಾರೆ. ಓದುಗರಿಂದಲೂ ಹಲವಾರು ಗೊಂದಲಕಾರಿ ಪ್ರಶ್ನೆಗಳು ಬರುತ್ತಿವೆ.

ಯಾವುದೇ ಮಹಿಳೆಯರ ಮೇಲೆ ಅನ್ಯಾಯ, ಅತ್ಯಾಚಾರವಾದಾಗ ಜನವಾದಿಯ ಗಮನಕ್ಕೆ ಬಂದರೆ ಸಾಕು, ಸಂಘಟನೆಯು ತಕ್ಷಣ ಖಂಡಿಸುತ್ತದೆ ಮತ್ತು ನ್ಯಾಯದಪರ ಧ್ವನಿ ಎತ್ತುತ್ತದೆ. ಆದರೆ ಸಂಘಟನೆಯ ಗಮನಕ್ಕೆ ಬರದ ವಿಷಯವನ್ನು ಕುರಿತು ವರದಿಗಾರರು ತಮ್ಮ ಮನಬಂದಂತೆ ಬರೆಯುವುದೆಂದರೆ ಇದೊಂದು ಬೇಜವಾಬ್ದಾರಿತನ ಮತ್ತು ಅವಿವೇಕದ ಪರಮಾವಧಿ. ಅಷ್ಟಕ್ಕೂ ವರದಿಗಾರ ವಿಶ್ವಾರಾಧ್ಯ ಸತ್ಯಂಪೇಟೆ ಒಂದೆರಡು ದಿನಗಳ ಹಿಂದೆ ದರಿದ್ರಸ್ವಾಮಿಯ ಕುರಿತು ದೂರವಾಣಿಯಲ್ಲಿ ಪ್ರಸ್ತಾಪಿಸಿದಾಗ 'ಆಯ್ತು, ನೀವು ಬನ್ನಿ ಒಂದು ಸಲ ತನಿಖೆ ಮಾಡೋಣ. ವಿಷಯ ಏನಿದೆಯೋ ಜನವಾದಿ ತಿಳಿದುಕೊಳ್ಳಲು ಪ್ರಯತ್ನಿಸುತ್ತದೆ' ಎಂದು ಹೇಳಲಾಗಿತ್ತು. ಆದರೆ ವಿಶ್ವಾರಾಧ್ಯ ಮುಂದಿನ ಕ್ರಮಕ್ಕಾಗಿ ನಮ್ಮನ್ನು ಸಂಪರ್ಕಿಸದೆ ಇದ್ದಕ್ಕಿದ್ದಂತೆ ಜನವಾದಿ ಸಂಘಟನೆಯ ಹೆಸರು ಬಳಸಿಕೊಂಡು ಲೇಖನ ಬರೆದಿರುವುದು ತೀರ ಬಾಲಿಶತನವೆನಿಸುತ್ತದೆ. ವಿಶ್ವಾರಾಧ್ಯ ಸತ್ಯಂಪೇಟೆ ಯಾವತ್ತೂ ನಮ್ಮೊಂದಿಗೆ ಇರುವವರೆ. ಅವರು ನಮಗೆ ಆತ್ಮೀಯರು ಹೌದು. ಆದರೆ ಸದರಿ ಲೇಖನದಲ್ಲಿ ಮಾತ್ರ ಅವರು ಕಾರಣವಿಲ್ಲದೆ ಸಂಘಟನೆಯ ಹೆಸರು ಮತ್ತು ವೈಯಕ್ತಿಕ ಫೋಟೊಗಳನ್ನು ಬಳಸಿಕೊಂಡು ಬೇಜವಾಬ್ದಾರಿತನ ಮೆರೆದಿದ್ದಾರೆ. ವರದಿಗಾರರು ಏನೇ ಬರೆಯಲಿ. ಸಂಪಾದಕರಾದ ತಾವು ವರದಿಗಳನ್ನು ಕೂಲಂಕುಷವಾಗಿ ಗಮನಿಸಿ ಮಂಡಿತವಾದ ವಿಷಯಕ್ಕೂ ಬಳಸಿಕೊಳ್ಳುವ ಫೋಟೋಗಳಿಗೂ ಪರಸ್ಪರ ಸಂಬಂಧ ಇದೆಯೇ? ಇಲ್ಲವೇ? ಎಂಬುದನ್ನು ಗಮನಿಸಬಾರದೇ? ತೀರ ಇಷ್ಟು ಹಗುರವಾಗಿರುವ ವರದಿಗಳನ್ನು ಪ್ರಕಟಿಸುವುದೆಂದರೇನು? 'ಲಂಕೇಶ್‌ಗೆ' ಕನ್ನಡ ಪತ್ರಿಕಾರಂಗದಲ್ಲಿ ಬಹುದೊಡ್ಡ ಜವಾಬ್ದಾರಿ ಮತ್ತು ಐತಿಹಾಸಿಕ ಮಹತ್ವವಿದೆ ಎಂಬುದನ್ನು ಮರೆಯದಿರೋಣ.

ಒಟ್ಟು ನಾನು ತಮಗೆ ಒತ್ತಾಯಿಸುವುದೇನೆಂದರೆ ಈ ಕುರಿತು ತಮ್ಮ ಪತ್ರಿಕೆಯಲ್ಲಿ ಸ್ಪಷ್ಟೀಕರಣ ನೀಡಿ ಓದುಗರಲ್ಲುಂಟಾದ ಗೊಂದಲವನ್ನು ನಿವಾರಿಸಬೇಕು. ಸದರಿ ಲೇಖನಕ್ಕೂ ಜನವಾದಿ ಸಂಘಟನೆಗೂ ಯಾವುದೇ ಔಚಿತ್ಯಪೂರ್ಣ ಸಂಬಂಧ ಇಲ್ಲದಿರುವುದನ್ನು ಮನವರಿಕೆ ಮಾಡಿಕೊಡಬೇಕು. ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಜನಪರ ಸಂಘಟನೆಗಳ ಮೇಲಿರುವ ನೈತಿಕ ಹೊಣೆಗಾರಿಕೆಯನ್ನು, ಸಾಂದರ್ಭಿಕ ಮಿತಿಗಳನ್ನು ನೀವು ಅರ್ಥ ಮಾಡಿಕೊಳ್ಳಬಲ್ಲಿರಿ ಎಂದು ಆಶಿಸುತ್ತೇವೆ.

ಡಾ. ಮೀನಾಕ್ಷಿ ಬಾಳಿ
ಜನವಾದಿ ಮಹಿಳಾ ಸಂಘಟನೆ, ಗುಲ್ಬರ್ಗಾ
ಜಿಲ್ಲಾ ಘಟಕ

ಮುರಿದುಬಿದ್ದಿದ್ದ ಮೈತ್ರಿ ಮತ್ತೆ ಒಗ್ಗೂಡಿಕೆ

ಬಿಜೆಪಿ-ಜೆಡಿಎಸ್ ಸಂದರ್ಭಸಾಧಕತನಕ್ಕೆ ಸಿಪಿಐ(ಎಂ) ಖಂಡನೆ

ತೀರಾ ಅವಹೇಳನಕಾರಿಯಾಗಿ ಒಬ್ಬರಿಗೊಬ್ಬರು ದೂಷಿಸಿ ಸರಕಾರವನ್ನು ಉರುಳಿಸಿ, ಈಗ ಅಧಿಕಾರ ದಾಹಕ್ಕಾಗಿ ಪುನ: ಮೈತ್ರಿ ಮಾಡಿಕೊಂಡ ಬಿಜೆಪಿ-ಜೆಡಿ(ಎಸ್) ನ ಕ್ರಮವನ್ನು ಸಂದರ್ಭ ಸಾಧಕತನದ ಉತ್ತುಂಗ ಎಂದು ಸಿಪಿಐ(ಎಂ) ಬಣ್ಣಿಸಿದೆ. ಸರಕಾರ ರಚಿಸುವುದನ್ನು ಖಡಾ ಖಂಡಿತವಾಗಿ ವಿರೋಧಿಸಿದೆ. ಜಾತ್ಯಾತೀತತೆಯಲ್ಲಿ ನಂಬಿಕೆಯುಳ್ಳ ಶಾಸಕರೆಲ್ಲರೂ ಸರಕಾರ ರಚನೆಯನ್ನು ಧಿಕ್ಕರಿಸಬೇಕು ಎಂದು ಮನವಿ ಮಾಡಿದೆ.

ಈಗಾಗಲೇ 20 ತಿಂಗಳುಗಳ ಕಾಲ ಕೋಮುವಾದಿಗಳೊಂದಿಗೆ ಅಧಿಕಾರ ಹಂಚಿಕೊಂಡು ಈಗ ಮುಖ್ಯ ಮಂತ್ರಿ ಪದವಿಯೊಂದಿಗೆ ಪ್ರಮುಖ ಪಾತ್ರವನ್ನು ವಹಿಸಲು ಜೆಡಿ(ಎಸ್) ಅವಕಾಶ ಮಾಡಿಕೊಡುತ್ತಿದೆ. ಇದು ರಾಜ್ಯದ ಹಿತಕ್ಕೆ ಅತ್ಯಂತ ಮಾರಕ.

ಅಧಿಕಾರ ಕಳೆದು ಕೊಂಡು ಹತಾಶರಾಗಿದ್ದ ಬಿಜೆಪಿ ಧರ್ಮಯುದ್ಧದ ಹೆಸರಿನಲ್ಲಿ ರಾಜ್ಯದಾದ್ಯಂತ ಜೆಡಿ(ಎಸ್) ವಿರುದ್ಧ ಪ್ರತಿಭಟನೆ ನಡೆಸಿತು. ಕುಮಾರಸ್ವಾಮಿಯವರನ್ನು ವಚನ ಭ್ರಷ್ಟ ಎಂದು ಹೀಯಾಳಿಸಿತು. ಇದೇ ಸಂದರ್ಭದಲ್ಲಿ ಚಿಕ್ಕಮಗಳೂರಿನಲ್ಲಿ ಬಿಜೆಪಿ ಮುಖಂಡ ಅನಂತಕುಮಾರ್‌ರವರು,?ಬಿಜೆಪಿ ಅಧಿಕಾರಕ್ಕೆ ಬಂದರೆ ಬಾಬಾಬುಡಾನ್‌ಗಿರಿಯನ್ನು ದತ್ತಪೀಠ ಮಾಡಲಾಗುವುದು? ಎಂದು ಹೇಳಿದ್ದರು. ಕರ್ನಾಟಕದಲ್ಲಿ ಮುಂದೆ ಎಂತಹ ಯೋಜನೆಯನ್ನು ಬಿಜೆಪಿ ರೂಪಿಸಲಿದೆ ಎಂಬುದನ್ನು ಇದು ಸೂಚಿಸುತ್ತದೆ. ಈ ಹಿಂದೆಯೂ ಅನಂತಕುಮಾರ್ ಮತ್ತು ಬಿಜೆಪಿಯ ಇತರೆ ಮುಖಂಡರು ಕರ್ನಾಟಕವನ್ನು ಗುಜರಾತ್ ಮಾಡುವುದಾಗಿ ಘೋಷಿಸಿದ್ದರು.

ಈ ಅವದಿಯಲ್ಲಿ ಜೆಡಿ(ಎಸ್) ಪ್ರಮುಖ ದಿನ ಪತ್ರಿಕೆಗಳಲ್ಲಿ ಜಾಹಿರಾತು ನೀಡಿ ಕೋಮುವಾದಿ ಬಿಜೆಪಿ ಮತ್ತು ಸಂಘ ಪರಿವಾರವನ್ನು ಕಟು ಶಬ್ದಗಳಿಂದ ಟೀಕಿಸಿತ್ತು. ಆದರೂ ಪುನ: ಬಿಜೆಪಿ-ಜೆಡಿಎಸ್ ಮೈತ್ರಿ ಮಾಡಿಕೊಂಡು ಸರಕಾರ ನಡೆಸಲು ಮುಂದೆ ಹೋಗಿರುವುದು ಸಂದರ್ಭಸಾಧಕತನದ ಪರಮಾವಧಿಯಾಗಿದೆ.

ತನಗೆ ಸಿಕ್ಕಿದ ಅಧಿಕಾರದ ಅವಧಿಯನ್ನು ಕೋಮುವಾದಿ ಅಜೆಂಡಾಗಳನ್ನು ಜಾರಿ ಮಾಡಲು, ಈಗಾಗಲೇ ನುಸುಳಿದ ಆಡಳಿತ ಯಂತ್ರದಲ್ಲಿ ತನ್ನ ಹಿಡಿತವನ್ನು ಬಿಗಿಗೊಳಿಸಲು ಬಿಜೆಪಿ ಮತ್ತು ಸಂಘ ಪರಿವಾರ ಪ್ರಯತ್ನಿಸುತ್ತದೆ. ಆದ್ದರಿಂದ ಮುಂದೆ ಬರುವ ಅಪಾಯಕಾರಿ ಸನ್ನಿವೇಶವನ್ನು ಜಾತ್ಯಾತೀತ ಶಕ್ತಿಗಳು ಒಗ್ಗೂಡಿ ಎದುರಿಸಬೇಕಾಗುತ್ತದೆ ಎಂದು ಸಿಪಿಐ(ಎಂ) ಎಲ್ಲಾ ಜಾತ್ಯಾತೀತ ಶಕ್ತಿಗಳಿಗೆ ಮನವಿ ಮಾಡಿದೆ.

ದಕ್ಷಿಣ ಭಾರತದಲ್ಲೇ ಪ್ರಪ್ರಥಮ ಬಾರಿಗೆ ಕೋಮುವಾದಿ ಬಿಜೆಪಿಗೆ ಮುಖ್ಯಮಂತ್ರಿ ಪದವಿ ಹಾಗೂ ಇನ್ನೊಮ್ಮೆ ಅಧಿಕಾರದ ಸೂತ್ರ ಸಿಗುತ್ತಿರುವುದು ಅಪಾಯಕಾರಿ. ಈ ಸನ್ನಿವೇಶದಲ್ಲಿ ಜಾತ್ಯಾತೀತ ಪಕ್ಷವಾದ ಕಾಂಗ್ರೆಸ್ ಜವಾಬ್ದಾರಿಯುತ ವರ್ತನೆ ತೋರಲಿಲ್ಲ ಎಂದು ಸಿಪಿಐ(ಎಂ) ಟೀಕಿಸಿದೆ. ○

ಗಂಧದ ಕಡ್ಡಿ ಹಚ್ಚಿ

ಇತ್ತೀಚೆಗೆ ಕನ್ನಡ ಸಿನಿಮಾಗಳ ಸಂಖ್ಯೆ ವಿಪರೀತ ಜಾಸ್ತಿಯಾಗಿದೆ. ಕನ್ನಡದಲ್ಲಿ ಕತೆಗಳ ಕೊರತೆ ಅಂತ ಪರಭಾಷೆಗಳಿಂದ ಭಟ್ಟಿ ಇಳಿಸ್ತಿದ್ದಾರೆ. ಕತೆ, ನಟ, ನಟಿ, ನಿರ್ದೇಶಕ, ತಂತ್ರಜ್ಞರು, ಕೆಲಸಗಾರರು, ಸಂಗೀತ ನಿರ್ದೇಶಕ, ಹಾಡುಗಾರ ಎಲ್ಲರನ್ನೂ ಬೇರೆ ಕಡೆಯಿಂದ ಕರೆತರಬಹುದು. ಆದರೆ ಕನ್ನಡ ಹಾಡು ಬರೆಯಲು, ಕನ್ನಡ ಸಂಭಾಷಣೆ ಬರೆಯಲು? ಏನ್ಮಾಡ್ತಾರೆ ಪಾಪ ಕನ್ನಡದವರೇ ಬೇಕಲ್ಲ.

'ಕರುಳಿಗೆ ಕತ್ತರಿ' ಸಿನಿಮಾ ನಿರ್ದೇಶಕರು ತಮ್ಮ ಗೆಳೆಯನ ಮೂಲಕ ನನಗೆ ಹೇಳಿ ಕಳುಹಿಸಿದರು. ಹೋಗಿ ಅವರ ಮುಂದೆ ನಿಂತೆ.

'ಏನ್ರೀ ಕನ್ನಡ ಬರ್ಯಕ್ಕೆ ಬರುತ್ತೇನ್ರೀ?' ಅಂತ ಕೇಳಿದರು.

'ಹ್ಞೂಂ ಸರ್' ಎಂದೆ.

'ನೋಡ್ರಿ ನಮ್ಮದು ಡಿಫರೆಂಟ್ ಸಿನಿಮಾ. ವಿಲನ್ ಡೈಲಾಗು. ವಿಲನ್ ಜೊತೆ ಹೀರೋ ಡೈಲಾಗು ಎಲ್ಲಾ ಮಾಮೂಲು. ಅವರಿಗೆ ಬಾಯಿ ಪಾಠ ಆಗಿರುತ್ತೆ. ಅದೆಲ್ಲ ಬೇಡ. ಒಂದು ಸೀನ್ ಬರುತ್ತೆ. ಗಂಡ ಹೆಂಡತಿಗೆ ಕೈ ಕೊಟ್ ಬಿಡ್ತಾನೆ. ಆಗ ಹೆಂಡತಿ ಕರುಳಿಗೇ ಕತ್ತರಿ ಹಾಕಿದ ಹಾಗೆ ಆಗುವ ಸಂದರ್ಭ. ಇಂಥ ಸಂದರ್ಭಕ್ಕೆ ಸ್ವಲ್ಪ ಡೈಲಾಗ್ ಬರ್ಕೊಡ್ತಿರಾ ಅಂದ್ರು ನಿರ್ದೇಶಕರು.

'ಆಯ್ತು ಸಾರ್' ಅಂತ ಹೇಳಿ ಬರೆಯಲಾರಂಭಿಸಿದೆ.

ಹೆಂಡತಿ: ಆ ದೇವರೋ ಕನಸಿನಲ್ಲಿ ಬಂದು ಇವರು ನನಗೆ ಮೋಸ ಮಾಡುತ್ತಾರೆ ಎಂದು ಹೇಳಿದರೂ ನಾನು ನಂಬುವುದಿಲ್ಲ ಎಂದು ಪ್ರಮಾಣ ಮಾಡಿ ಹೇಳಿದ್ದೆ. ಇಪ್ಪತ್ತು ತಿಂಗಳು ನಿಮಗೆ ಪೂರ್ಣ ಸಹಕಾರ ಕೊಟ್ಟೆ. ಆದರೂ ನನಗೆ ಯಾಕೆ ಈ ಶಿಕ್ಷೆ ನೀಡಿದ್ದೀರಿ? ದೇವರು ಇದ್ದರೆ ಇವರಿಗೂ ಇವರ ಅಪ್ಪನಿಗೂ ಶಿಕ್ಷೆಯಾಗಲಿ, ಕೊಲೆ ಮಾಡಿದ ವ್ಯಕ್ತಿ ನ್ಯಾಯಾಲಯದ ಮುಂದೆ ಹೋಗಿ ನಾನು ತಪ್ಪು ಮಾಡಿದ್ದೇನೆ ಕ್ಷಮಿಸಿ ಎಂದು ಹೇಳಿದರೆ ಕ್ಷಮಿಸಲು ಹೇಗೆ ಸಾಧ್ಯವಿಲ್ಲವೋ ಅದೇ ರೀತಿ ಇವರನ್ನು ಯಾರೂ ಕ್ಷಮಿಸಬಾರದು.

ನನ್ನ ರಕ್ತ ಕುದಿಯುತ್ತಿದೆ. ಕರುಳು ಕಿತ್ತು ಬರುತ್ತಿದೆ. ಕಣ್ಣಲ್ಲಿ ರಕ್ತ ಹರಿಯುತ್ತಿದೆ. ಇಡೀ ರಾತ್ರಿ ದೇವರನ್ನು ಸ್ಮರಿಸಿ ಕಣ್ಣೀರು ಹರಿಸಿದ್ದೇನೆ. ನಿದ್ದೆ ಮಾಡಿಲ್ಲ. ಹಗಲಿರಳು ದುಡಿದಿದ್ದೇನೆ. ಇದನ್ನು ನಿಮಗೆ ಸಹಿಸಲು ಸಾಧ್ಯವಾಗಲಿಲ್ಲ ಅಲ್ಲವೇ? ಹೇ ವಿಧಿಯೇ ಇದೇನು ನಿನ್ನ ಲೀಲೆ?

ಮಹಾಜನಗಳೇ, ನನ್ನ ಕಣ್ಣೀರಿನ ಕರ್ಮಕತೆಯನ್ನು ಕುಂತಲ್ಲಿ ನಿಂತಲ್ಲಿ ಎಲ್ಲರಿಗೂ ಹೇಳಿ. ನನಗೆ ಒಳ್ಳೆಯದಾಗಲೆಂದು ನಿತ್ಯ ದೇವರ ಮುಂದೆ ಗಂಧದ ಕಡ್ಡಿ ಹಚ್ಚಿ ಹೂ ಹಾಕಿ. ನನಗೆ ಅನ್ಯಾಯವಾಗಿದೆ. ನಾನು ಚೆನ್ನಾಗಿ ಬಾಳಬೇಕು ಎಂಬ ಭಾವನೆ ನಿಮ್ಮದಾಗಿದ್ದರೆ ನಿತ್ಯ ದೇವರಿಗೆ ಪ್ರಾರ್ಥಿಸಿ ಪೂಜೆ ಮಾಡಿ ಯಾವ ತಪ್ಪನ್ನು ಮಾಡಿದ್ದಕ್ಕಾಗಿ ನನಗೆ ಈ ಶಿಕ್ಷೆ? ಹೇ ದೇವಾ...

ಹೀಗೆ ಬರೆದು ನಿರ್ದೇಶಕರ ಕೈಗೆ ನೀಡಿದೆ.

ಓದುತ್ತಾ ಓದುತ್ತಾ ನಿರ್ದೇಶಕರ ಮುಖ ಕೆಂಪಾಗುತ್ತಾ ಹೋಯಿತು. ಓಹೋ ಒಳ್ಳೆ ಪರಿಣಾಮಕಾರಿಯಾಗಿದೆ ಎಂದು ಕೊಂಡು ಒಳಗೊಳಗೇ ಖುಷಿ ಪಡುತ್ತಿದ್ದೆ. ಆಗ ನಿರ್ದೇಶಕರು 'ಎಲ್ಲಿಂದ ಹಿಡ್ಕೊಂಬಂದ್ಯಲಾ ಈ ವಯ್ಯನ್ನ'? ಎಂದು ಕೋಪದಿಂದ ಕೇಳಿದರು.

'ಯಾಕ್ಸಾರ್ ಸಕತ್ತಾಗಿಲ್ವ ಡೈಲಾಗು'? ಎಂದೆ.

'ಥೂ ನಿನ್ನ ಮಕಕ್ಕಿಷ್ಟು. ದಿನಾ ಪೇಪರಲ್ಲಿ ಬರೋ ಯಡೂರಪ್ಪನ ಪ್ರಲಾಪ ಕಾಪಿ ಮಾಡ್ಬಿಟ್ಟು ಸಿನಿಮಾ ಡೈಲಾಗು ಅಂತೀಯಾ?' ಎಂದು ಚೆನ್ನಾಗಿ ಉಗಿದರು.


'ಆದ್ರೂ ಡೈಲಾಗ್ಸ್ ಚೆನ್ನಾಗಿದೆ ಅಲ್ವಸಾರ್? ಜನಗಳ ಮೇಲೆ ಪರಿಣಾಮ ಆಗಬೋದು ಅಲ್ವಾ? ಎಂದೆ.

'ಅಲ್ಲರೀ ಹಾಡು, ಟ್ಯೂನು, ಕತೆ, ಫೈಟು, ಎಲ್ಲಾ ಅಲ್ಲಲ್ಲಿಂದ ಕದ್ದು ಸಿನ್ಮಾ ಮಾಡ್ತಿದೀವಿ. ಏನೋ ಒಂಚೂರು ಒರಿಜಿನಲ್ ಡೈಲಾಗ್ ಇರ್ಲಿ ಅಂತ ಅಂದ್ಕೊಂಡಿದ್ವಿ. ಅದಕ್ಕೂ ಈ ಡೈಲಾಗ್ ಹಾಕಿಬಿಟ್ರೆ ಸಿನ್ಮಾಯಕ್ಕುಟ್ಹೋಗುತ್ತೆ' ಅಂದ್ರು ಡೈರೆಕ್ಟರ‍್ರು.

'ಯಾಕ್ ಸಾರ್?' ಎಂದೆ

'ಅಲ್ಲರೀ ಇದೇ ಪ್ರಲಾಪನ ದಿನಾ ಟೀವಿಲಿ ಕೇಳ್ತಿರ‍್ತಾರೆ. ಪೇಪರಲ್ಲಿ ಓದ್ ತಿರ‍್ತಾರೆ ಕೇಳಿ ಕೇಳಿ ಓದಿ ಓದೀ ಜನಕ್ಕೆ ಅಲರ್ಜಿ ಬಂದಿರುತ್ತೆ, ವಾಕರಿಕೆ ಬಂದಿರುತ್ತೆ. ಸಿನ್ಮಾದಲ್ಲೂ ಇದನ್ನೇ ಕೇಳಿಸಿದ್ರೆ ಅಲ್ಲೇ ವಾಂತಿ ಮಾಡ್ಕೊಂಬಿಡ್ತಾರೆ ಅಷ್ಟೇ' ಎಂದರು. 'ನೋಡಪ್ಪ ಈ ವಯ್ಯನ್ನ ಕಳುಸ್‌ಬಿಡು, ಇವ್ನೂ ನಮ್‌ಥರ ಕಾಪಿ ಮಾಡೋನೆಯ. ಬೇರೆ ಯಾರದ್ರು ಒರಿಜಿನಲ್ ಡೈಲಾಗ್ ಬರ್ಯೋರು ಇದ್ರೆ ಕರ್ಕೊಂಬಾ' ಅಂತ ನನ್ನ ಗೆಳೆಯನಿಗೆ ಹೇಳಿ ನನ್ನನ್ನ ಸಾಗ ಹಾಕಿದರು.

ವಿ.ಎಸ್.



ದೇವೇಗೌಡರನ್ನು ಯಾರು ನಂಬುತ್ತಾರೆ?

ಈ ಲೇಖನ ಸಿದ್ಧವಾದ ಬೆನ್ನ ಹಿಂದೆಯೇ ಜೆಡಿ(ಎಸ್) ಶಾಸಕರ ಬೆಂಬಲದೊಂದಿಗೆ ಬಿಜೆಪಿ ನೇತೃತ್ವದ ಸರ್ಕಾರ ರಚನೆಗೆ ತಾಲೀಮು ನಡೆದಿದೆ. ಈ ಬಾರಿ ಸ್ವತಃ ದೇವೇಗೌಡರೇ ಬಿಜೆಪಿ ರಾಷ್ಟ್ರಾಧ್ಯಕ್ಷ ರಾಜನಾಥ ಸಿಂಗ್ ಜೊತೆ ಮಾತನಾಡಿ ಈ ಮರುಮೈತ್ರಿ ಕುದುರಿದೆ. ಮೊನ್ನೆ ತಾನೆ 'ನಾನು ಸೆಕ್ಯುಲರ್ ಸಿದ್ಧಾಂತಕ್ಕೆ ಬದ್ಧನಾಗಿದ್ದೇನೆ' ಎಂದಿದ್ದ 'ದೇವೇಗೌಡರ ಸೆಕ್ಯುಲರಿಸಂ'ನ ಹೂರಣ ಹೊರಬಿದ್ದಿದೆ. ಲೇಖನದ ಪ್ರಸ್ತುತತೆಯ ಕಾರಣಕ್ಕಾಗಿ ಅದನ್ನು ಬದಲಾಯಿಸದೇ ಹಾಗೇ ಪ್ರಕಟಿಸಲಾಗಿದೆ.

ನಿತ್ಯಾನಂದಸ್ವಾಮಿ

ಹತ್ತು ವರ್ಷಗಳ ಹಿಂದೆ, ಶ್ರೀಮಾನ್ ಎಚ್.ಡಿ.ದೇವೇಗೌಡರು ದೇಶದ ಪ್ರಧಾನ ಮಂತ್ರಿಯಾದಾಗ ಕರ್ನಾಟಕದ ಜನತೆ ಪಕ್ಷ ಭೇದವಿಲ್ಲದೆ ಖುಷಿ ಪಟ್ಟಿತ್ತು. ಒಂದೇ ವರ್ಷದ ಒಳಗಾಗಿ ದೇವೇಗೌಡರ ಸರ್ಕಾರಕ್ಕೆ ಕಾಂಗ್ರೆಸ್ ತನ್ನ ಬೆಂಬಲವನ್ನು ಹಿಂತೆಗೆದುಕೊಂಡಾಗಲೂ ಅವರು ಧೃತಿಗೆಡದೆ ಅಧಿಕಾರ ಪೀಠದಿಂದ ಕೆಳಗಿಳಿದು ಹೋದದ್ದು ಇಡೀ ದೇಶದ ಗಮನ ಸೆಳೆದಿತ್ತು. ಆದರೆ ಇಂದು ದೇವೇಗೌಡರು ಜನರ ಕಣ್ಣಿಗೆ ಅತ್ಯಂತ ತುಚ್ಛರಾಗಿ ಕಾಣುವಂತಾಗಿದ್ದಾರೆ. ಅವರೊಬ್ಬ ಸಮಯ ಸಾಧಕ, ಅಧಿಕಾರ ಲಾಲಸಿ, ಪುತ್ರ ವ್ಯಾಮೋಹಿ, ಸರ್ವಾಧಿಕಾರಿ, ಕಪಟಿ ಹೀಗೆ ಒಬ್ಬೊಬ್ಬರಿಗೆ ಒಂದೊಂದು ತರ ಕಾಣುವಂತಾಗಿದ್ದಾರೆ. ಒಟ್ಟಾರೆಯಾಗಿ ಅವರು ಕರ್ನಾಟಕ ಕಂಡ ಅತ್ಯಂತ ವಿವಾದಗ್ರಸ್ತ ರಾಜಕಾರಣಿಯಾಗಿ ಹೊರಹೊಮ್ಮುವಂತಾಗಿದ್ದಾರೆ.

ದೇವೇಗೌಡರನ್ನು ಇಂದು ಯಾರು ನಂಬುತ್ತಾರೆ?

ಕಾಂಗ್ರೆಸಿಗರು ಅವರನ್ನು ನಂಬುವುದಿಲ್ಲ. 'ನಮ್ಮ ಬೆನ್ನಿಗೆ ಚೂರಿ ಹಾಕಿದವರು ಇವರು' ಅನ್ನುತ್ತಾರೆ ಅವರು. ಕೇಂದ್ರದಲ್ಲಿ ಇವರ ಸರ್ಕಾರಕ್ಕೆ ಕೊಟ್ಟ ಬೆಂಬಲವನ್ನು ವಾಪಸ್ ತೆಗೆದುಕೊಂಡದಕ್ಕಾಗಿ ಕರ್ನಾಟಕದಲ್ಲಿ ಗೌಡರು ತಮ್ಮ ಮಗನ ಮೂಲಕ ಸೇಡು ತೀರಿಸಿಕೊಂಡಿದ್ದಾರೆ ಎಂದು ಕಾಂಗ್ರೆಸಿಗರು ಆರೋಪಿಸುತ್ತಾರೆ.

ಬಿಜೆಪಿಯವರಂತೂ ದೇವೇಗೌಡ ಮತ್ತು ಅವರ ಮಗ ಕುಮಾರಸ್ವಾಮಿ 'ವಚನ ಭ್ರಷ್ಟ' ರೆಂದು ಬೀದಿ ಬೀದಿಗಳಲ್ಲಿ ರೋಧಿಸುತ್ತಿದ್ದಾರೆ. ಇವರು ಕಣ್ಣೀರು ಹಾಕುತ್ತಿರುವುದನ್ನು ಕಂಡು ವರುಣನೂ ಕರಗ ತೊಡಗಿದ್ದು ಅವರ 'ಧರ್ಮಯುದ್ಧ'ಕ್ಕೆ ತೆರೆ ಎಳೆಯಲು ರವಾಗಿದ್ದಾನೆ!

ಇನ್ನು ಯಾರಿದ್ದಾರೆ ದೇವೇಗೌಡರಿಗೆ ಸಹಾನುಭೂತಿ ವ್ಯಕ್ತಪಡಿಸುವವರು? ಅವರನ್ನು ದೇಶದ ಪ್ರಧಾನಿ ಹುದ್ದೆಗೆ ಏರಿಸಲು ಕಾರಣರಾಗಿದ್ದ ಎಡಪಕ್ಷಗಳ ನಂಬಿಕೆಯನ್ನು ಅವರು ಕಳೆದುಕೊಂಡಿದ್ದಾರೆ. 'ಅವರು ಯಾವ ಹೊತ್ತಿಗೆ ಯಾರ ಜೊತೆ ಕೈ ಜೋಡಿಸುತ್ತಾರೆ ಎಂಬುದನ್ನು ತಿಳಿಯುವುದು ಸಾಧ್ಯವೇ ಇಲ್ಲ' ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ ಹೇಳಿದ್ದು ಗಮನಾರ್ಹವಾಗಿದೆ.

ಗೌಡರು ಇಂದು ಏಕಾಂಗಿಯಾಗಿದ್ದಾರೆ. ಅವರ ಮಕ್ಕಳೇ ಅವರನ್ನು ನಂಬದ ಸ್ಥಿತಿ ಬಂದರೆ ಆಶ್ಚರ್ಯಪಡಬೇಕಾಗಿಲ್ಲ. 20 ತಿಂಗಳ ಹಿಂದೆ, ಕುಮಾರಸ್ವಾಮಿಯವರು ದೇವೇಗೌಡರನ್ನು ಸಂಪೂರ್ಣ ಕತ್ತಲೆಯಲ್ಲಿಟ್ಟು ಬಿಜೆಪಿಯೊಂದಿಗೆ ಕೈ ಜೋಡಿಸಿದ್ದು ನಿಜವಾಗಿದ್ದರೆ ಈಗ ಮತ್ತೆ ಚುನಾವಣೆಗೆ ಹೋಗೋಣ' ಎಂಬ ತಂದೆಯ ಮಾತನ್ನು ಧಿಕ್ಕರಿಸಿ ಕಾಂಗ್ರೆಸ್‌ನೊಂದಿಗೋ ಅಥವಾ ಬಿಜೆಪಿಯೊಂದಿಗೋ ಮತ್ತೆ ಆತ ಕೈ ಜೋಡಿಸುವುದಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಇಂತಹ .ಪರಿಸ್ಥಿತಿ ಯಾವ ರಾಜಕಾರಣಿಗೂ ಬರಬಾರದು.

ದೇವೇಗೌಡರು ತಪ್ಪಿದ್ದೆಲ್ಲಿ ?

ದೇವೇಗೌಡರಿಗೆ ತಾವು ತಪ್ಪಿದ್ದೆಲ್ಲಿ ಎಂಬುದನ್ನು ಕಂಡುಕೊಳ್ಳಲು ಮತ್ತು ಅದನ್ನು ಬಹಿರಂಗವಾಗಿ ಒಪ್ಪಿಕೊಳ್ಳಲು ಇನ್ನೂ ಸ್ವಲ್ಪ ಸಮಯ ಬೇಕಾಗಬಹುದು. ಆದರೆ ಅದನ್ನು ಒಪ್ಪಿಕೊಳ್ಳದೆ ಅವರಿಗೆ ರಾಜಕೀಯ ಭವಿಷ್ಯವಿಲ್ಲ. ಬಿಜೆಪಿ ಜೊತೆಯಲ್ಲಿ ಸರ್ಕಾರ ರಚಿಸಿದ್ದೇ ದೊಡ್ಡ ತಪ್ಪು. ಕೋಮುವಾದಿ ಬಿಜೆಪಿಯನ್ನು ಅಧಿಕಾರದಿಂದ ದೂರ ಇಡುವ ಉದ್ದೇಶದಿಂದ ಕಾಂಗ್ರೆಸ್ ಜೊತೆ ಕೂಡಿಕೊಂಡು ಸರ್ಕಾರ ರಚಿಸಲು ಸಾಧ್ಯವಾದದ್ದು ಸರಿಯಾದ ಕ್ರಮವೇ ಆಗಿತ್ತು. ಕಾಂಗ್ರೆಸಿಗರ ಕುಟಿಲ ನೀತಿ ದೇವೇಗೌಡರಿಗೆ ತಿಳಿಯದ ವಿಷಯ ವೇನಾಗಿರಲಿಲ್ಲ. ಒಪ್ಪಂದಕ್ಕೆ ತಕ್ಕಂತೆ ಕಾಂಗ್ರೆಸ್ಸಿನ ಮೇಲೆ ಅಧಿಕಾರ ಹಂಚಿಕೆಗಾಗಿ ಒತ್ತಡ ಹೇರುತ್ತಾ, ಜನರ ಪ್ರಶ್ನೆಗಳಿಗೆ ಹೆಚ್ಚೆಚ್ಚು ಸ್ಪಂದಿಸುತ್ತಾ ಸಮ್ಮಿಶ್ರ ಸರ್ಕಾರವನ್ನು ಮುನ್ನಡೆಸಲು ದೇವೇಗೌಡರು ಮಾರ್ಗದರ್ಶನ ನೀಡಬೇಕಾಗಿತ್ತು. ತನ್ನ ಮಗ ಕುಮಾರಸ್ವಾಮಿಗೆ ಹಾಗೂ ಆತನ ಹಿಡಿತದಲ್ಲಿದ್ದ ಜೆಡಿ(ಎಸ್) ಶಾಸಕರಿಗೆ ಜಾತ್ಯಾತೀತ ಮೌಲ್ಯಗಳ ಪ್ರಾಮುಖ್ಯತೆಯ ಬಗ್ಗೆ, ಬಿಜೆಪಿ, ಸಂಘಪರಿವಾರದವರ ಅಪಾಯದ ಬಗ್ಗೆ ತಿಳುವಳಿಕೆ ನೀಡಿ ಗಟ್ಟಿಗೊಳಿಸುವ ಕೆಲಸಕ್ಕೂ ಗಮನ ನೀಡಬೇಕಾಗಿತ್ತು. ಕೋಮುಗಲಭೆಗಳು ನಡೆಯದಂತೆ, ಗಲಭೆ ಕೋರರಿಗೆ ಯಾವ ಕಾರಣಕ್ಕೂ ರಕ್ಷಣೆ ನೀಡದಂತೆ ಜೆಡಿ(ಎಸ್) ಶಾಸಕರನ್ನು ಸೈದ್ಧಾಂತಿಕವಾಗಿ ಸಜ್ಜುಗೊಳಿಸಲು ಸಾಧ್ಯವಾಗಬೇಕಾಗಿತ್ತು. ಅಧಿಕಾರಕ್ಕಿಂತಲೂ ಜನತೆಯ ಐಕ್ಯತೆಯೇ ಮುಖ್ಯ ಎಂದು ಅವರು ಮನಗಾಣುವಂತೆ ಮಾಡ ಬೇಕಾಗಿತ್ತು. ಮೂಲಭೂತವಾಗಿ ಆಗಬೇಕಾಗಿದ್ದ ಈ ಕೆಲಸವನ್ನು ಮಾಡದಿರುವುದರಿಂದಲೇ ಯಾವ ಆತಂಕವೂ ಇಲ್ಲದೇ ಕುಮಾರಸ್ವಾಮಿ ಬಿಜೆಪಿಯ ಸೆರಗು ಹಿಡಿದುಕೊಂಡು ಹೋದ ಮಾತ್ರವಲ್ಲ 'ಸೆಕ್ಯೂಲರ್' ಎಂಬ ಪದದ ಅರ್ಥವೇ ನನಗೆ ಗೊತ್ತಿಲ್ಲ ಎಂದು ಹೇಳಲು ಹೇಸಲಿಲ್ಲ.

> **"ಮೈತ್ರಿ ಮುರಿದು ಬಿಜೆಪಿಗೆ ಸರ್ಕಾರ ರಚಿಸದಂತಾಗಿದ್ದು ಸ್ವಾಗತಾರ್ಹ. ಆದರೆ ಜೆಡಿ(ಎಸ್) - ಅದರ ನಾಯಕರಾದ ದೇವೇಗೌಡರು ಮುಂದೆ ಎಲ್ಲಿ ನಿಲ್ಲುತ್ತಾರೆ ಕಾದುನೋಡಬೇಕು."**
>
> ***- ಸೀತಾರಾಂ ಯೆಚೂರಿ***
> ಕಳೆದ ವಾರ ಬೆಂಗಳೂರಿನ ಮಾಧ್ಯಮ ಗೋಷ್ಠಿಯಲ್ಲಿ

ದೇವೇಗೌಡರಾದರೂ 'ಸೆಕ್ಯೂಲರ್' ಎಂಬ ಪದದ ಅರ್ಥವನ್ನೂ .ಅದರ ಮಹತ್ವವನ್ನು ಒಪ್ಪಿಕೊಂಡದ್ದು ಇತ್ತೀಚೆಗಷ್ಟೇ. ಅವರ ಸುದೀರ್ಘ ರಾಜಕೀಯ ಜೀವನದಲ್ಲಿ 'ಸೆಕ್ಯೂಲರ್ ವಾದ' ಅವರ ಹತ್ತಿರವೇ ಸುಳಿದಿರಲಿಲ್ಲ. .ಬಿಜೆಪಿಯನ್ನು ಹೊರಗಿಟ್ಟು ಕಾಂಗ್ರೆಸ್ ಬೆಂಬಲದ ಒಂದು 'ಸೆಕ್ಯೂಲರ್' ಸರ್ಕಾರವನ್ನು ಕೇಂದ್ರದಲ್ಲಿ ಅಸ್ತಿತ್ವಕ್ಕೆ ತರುವ ಸಂದರ್ಭದಲ್ಲಿ 13 ಪಕ್ಷಗಳ ಸಂಯುಕ್ತ ರಂಗದ ಆ ಸರ್ಕಾರಕ್ಕೆ ದೇವೇಗೌಡರೇ ಪ್ರಧಾನಮಂತ್ರಿ ಯಾಗುವ ಅವಕಾಶ ಒದಗಿಬಂದಾಗ ಅಷ್ಟೇ 'ಸೆಕ್ಯೂಲರ್‌ವಾದ' ಗೌಡರನ್ನು ಆಕರ್ಷಿಸಿತ್ತು. ಅಂದಿನಿಂದ ಅವರು ಅದನ್ನು ಪ್ರತಿಪಾದಿಸುತ್ತಾ ಬಂದಿದ್ದಾರೆ ಎನ್ನುವುದನ್ನು ಒಪ್ಪಿಕೊಳ್ಳಬಹುದಾದರೂ ಅವರ ಪ್ರವೃತ್ತಿಗೆ ಅದು ಅಷ್ಟೊಂದು ಸರಿಯಾಗಿ ಹೊಂದಿಕೊಳ್ಳವಂತಿರಲಿಲ್ಲ. ಜೋತಿಷ್ಯದ ಮೇಲೆ ಅವರಿಗಿರುವ ನಂಬಿಕೆ, ಮಠಾಧಿಪತಿಗಳೊಂದಿಗೆ ಅವರ ಒಡನಾಟ, ಯಜ್ಞ ಯಾಗಗಳಲ್ಲಿ ಅವರ ಆಸಕ್ತಿ ಮೊದಲಾದ ಪ್ರವೃತ್ತಿಗಳು, ಅವರು 'ಸೆಕ್ಯೂಲರ್' ಮನೋವೃತ್ತಿ ಯನ್ನು ದೃಢವಾಗಿ ಮೈಗೂಡಿಸಿಕೊಳ್ಳಲು ಬಿಡಲಿಲ್ಲ ಎಂದು ಅನಿಸುತ್ತದೆ. ಇಂತಹ ದೌರ್ಬಲ್ಯ ದಿಂದಾಗಿಯೇ, ಕುಮಾರಸ್ವಾಮಿ ಬಿಜೆಪಿಯೊಂದಿಗೆ ಕೈ ಜೋಡಿಸಿದಾಗ, ಸ್ವಲ್ಪ ಕಾಲ ನೊಂದುಕೊಂಡರೂ, ಕೊನೆಗೆ ಕುಮಾರಸ್ವಾಮಿ ಅವರ ಬಿಜೆಪಿಯೊಂದಿಗಿನ ತತ್ವರಹಿತ ಮೈತ್ರಿಯನ್ನು ಅವರು ಬೆಂಬಲಿಸುವಂತಾದರು. ಕಾಂಗ್ರೆಸ್ ಕುತಂತ್ರದಿಂದ ಪಕ್ಷವನ್ನು ಉಳಿಸಿಕೊಳ್ಳಲು ಮಗ ಕುಮಾರಸ್ವಾಮಿ ಮಾಡಿದ್ದು ಸರಿಯಾಗಿದೆ ಎಂಬ ನಿಲುವಿಗೆ ಗೌಡರು ಇನ್ನೂ ಅಂಟಿಕೊಂಡಂತ್ತೇ ಕಾಣುತ್ತದೆ.

ಗೌಡರು ವಚನ ಭ್ರಷ್ಟರೇ?

ಬಿಜೆಪಿಗೆ ಕೊನೆಗೂ ಮುಖ್ಯಮಂತ್ರಿ ಸ್ಥಾನವನ್ನು ಕೊಡದಿರುವುದು ದೇವೇಗೌಡರು ಮಾಡಿರುವ ಒಂದು ಒಳ್ಳೆಯ ಕೆಲಸ. ಹಾಗೆ ಮಾಡುವುದಕ್ಕೆ ಗೌಡರಿಗೆ ಅವರದೇ ಆದ ಕಾರಣಗಳಿರಬಹುದು. ಆದರೆ ರಾಜ್ಯದ ಜನತೆಯ ದೂರಗಾಮಿ ಹಿತದೃಷ್ಟಿಯಿಂದ ಅವರ ಈ ಕ್ರಮ ಸ್ವಾಗತಾರ್ಹವಾಗಿದೆ. ದುಷ್ಟರಿಗೆ ವಚನ ಕೊಡುವುದೇ ತಪ್ಪು. ದುಷ್ಟರಿಗೆ ಕೊಟ್ಟ ವಚನವನ್ನು ಪಾಲಿಸುವುದು ಇನ್ನೂ ದೊಡ್ಡ ತಪ್ಪು. ಒಬ್ಬ ವಿಧ್ವಂಸಕನಿಗೆ ಯಾವುದೋ ಒತ್ತಡಕ್ಕೆ ಮಣಿದು ಮಾತು ಕೊಡಬಹುದು. ವಿಧ್ವಂಸಕನಿಗೆ ಕೊಟ್ಟ ಮಾತನ್ನು ನಡೆಸಿಕೊಡುವುದು ಅಪರಾಧವಾಗುತ್ತದೆ.

ಬಿಜೆಪಿ ಜನರ ನೆಮ್ಮದಿಯನ್ನು ಹಾಳು ಮಾಡುವ ವಿಧ್ವಂಸಕ ಪಕ್ಷವಾಗಿದೆ. ಅದರ ಜೊತೆಯಲ್ಲಿ ಕೈ ಜೋಡಿಸುವುದೇ ತಪ್ಪು. ಮಾಡಿದ ತಪ್ಪನ್ನು ಸರಿಪಡಿಸುವುದೆಂದರೆ ಅದರ ಜೊತೆ ಮಾಡಿಕೊಂಡ ಒಪ್ಪಂದವನ್ನು ಮುರಿಯುವುದು. ಗೌಡರು ಅದನ್ನು ಮಾಡಿದ್ದಾರೆ. ಇದೊಂದು ನೈತಿಕತೆಯ ಪ್ರಶ್ನೆ ಇಲ್ಲ. ಎಲ್ಲಕ್ಕಿಂತಲೂ ಜನತೆಯ ಹಿತವೇ ಪ್ರಧಾನ. 'ಬಿಜೆಪಿಗೆ ಅಧಿಕಾರ ಹಸ್ತಾಂತರ ಮಾಡಲಿಲ್ಲ' ಎಂಬ ಆರೋಪದಲ್ಲಿ ಹುರುಳಿಲ್ಲ. ಕಳೆದ 20 ತಿಂಗಳುಗಳಿಂದ ಬಿಜೆಪಿ ಅಧಿಕಾರದಲ್ಲಿದ್ದು, ಅಧಿಕಾರದ ಎಲ್ಲಾ ಲಾಭವನ್ನು ಅದು ಪಡೆದಿದೆ. ಅದು ತನ್ನ ದುಷ್ಟ ಗುರಿ ಸಾಧನೆಗೆ ರಾಜ್ಯಾಧಿಕಾರವನ್ನು ಹೇಗೆ ಬಳಸಿಕೊಳ್ಳುತ್ತದೆ ಎಂಬುದು ಗುಜರಾತ್‌ನಲ್ಲಿ ಸಾಬೀತಾಗಿದೆ. ಮುಖ್ಯಮಂತ್ರಿ ನರೇಂದ್ರ ಮೋದಿ ನಡೆಸಿದ ನರಮೇಧದ ಭಯಾನಕ ಸತ್ಯಗಳು, ಈಗಲೂ ಹೊರಬರುತ್ತಲೇ ಇವೆ. 'ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆ' ಎಂದು ಹೇಳುತ್ತಿರುವವರ ಕೈಗೆ ಇಪ್ಪತ್ತು ತಿಂಗಳು ಅಧಿಕಾರ ಕೊಟ್ಟಿದ್ದೇ ಅಕ್ಷಮ್ಯ ಅಪರಾಧ. ಈ ಅವಧಿಯಲ್ಲಿ ಅವರು ರಾಜ್ಯದುದ್ದಕ್ಕೂ ನಡೆಸಿದ ಗಲಭೆ ಗಳು, ಹರಿಸಿದ ಅಮಾಯಕರ ರಕ್ತ, ಬಲಿ ತೆಗೆದುಕೊಂಡ ಜೀವಗಳು! ಅದೆಷ್ಟೋ ! ಇವರ ಕೈಗೆ ಮತ್ತೆ ಒಂದು ಕಡೆ ಮುಖ್ಯಮಂತ್ರಿ, ಗೃಹ ಮಂತ್ರಿ ಅಧಿಕಾರ, ಇನ್ನೊಂದು ಕಡೆ ಗಣಿ ಧಣಿಗಳ ಹಣದ ಹೊಳೆ! ಎರಡೂ ಸೇರಿದರೆ ಬೆಂಕಿಗೆ ತುಪ್ಪ ಸುರಿದಂತೆ! ಕರ್ನಾಟಕ ಗುಜರಾತ್‌ನಂತೆ ಹೊತ್ತಿ ಉರಿಯದೆ ಇರುತ್ತಿತ್ತೇ? ಯಡಿಯೂರಪ್ಪನಿಗೆ ಕೊಟ್ಟ ವಚನ ಪಾಲಿಸುವುದಕ್ಕಿಂತ ಜನತೆಗೆ ಕೊಟ್ಟ ವಚನವನ್ನು ಪಾಲಿಸುವುದೇ ಮುಖ್ಯವೆಂದು ಗೌಡರು ನಿರ್ಧರಿಸಿದ್ದು ಸರಿಯಾಗಿದೆ. 'ನಾವು ಸೆಕ್ಯುಲರ್ ವಾದಕ್ಕೆ ಬದ್ಧರಾಗಿರುತ್ತೇವೆ' ಎಂದು ಚುನಾವಣೆಗಳಲ್ಲಿ ಇವರು ಜನತೆಗೆ ವಚನ ಕೊಟ್ಟ ಕಾರಣದಿಂದಾಗಿಯೇ 2004ರ ಚುನಾವಣೆಯಲ್ಲಿ ಇವರ ಶಾಸಕರ ಸಂಖ್ಯೆ 4 ರಿಂದ 59ಕ್ಕೆ ಏರಿತ್ತು. ಇತ್ತೀಚಿಗೆ ನಡೆದ ಪೌರ ಚುನಾವಣೆಗಳ ಫಲಿತಾಂಶವೂ ಸಹ ಸ್ವತಃ ಗೌಡರಿಗೆ ಅಚ್ಚರಿಯನ್ನುಂಟುಮಾಡಿದೆ. ರಾಜ್ಯದ ಜನತೆ 'ಸೆಕ್ಯುಲರ್'ವಾದವನ್ನು ಬೆಂಬಲಿಸಲು ಹೆಚ್ಚೆಚ್ಚು ಮುಂದೆ ಬರುತ್ತಿದ್ದಾರೆ ಎನ್ನುವುದು ಇದರಿಂದ ಸಾಬೀತಾಗಿದೆ. ಜೆಡಿ(ಎಸ್)ನ್ನು ಬೆಂಬಲಿಸುತ್ತಿರುವ ಈ ಜನತೆಯ ನಿರೀಕ್ಷೆಗಳನ್ನು ಪೂರ್ಣಗೊಳಿಸುವುದು ಮುಖ್ಯವಾಗಿದೆ ಎಂಬುದನ್ನು ಗೌಡರು ಹಾಗೂ ಜೆಡಿ(ಎಸ್) ಶಾಸಕರು ಮರೆಯಬಾರದು.

26.10.2007

ಗೌಡರ ಮುಂದಿನ ದಾರಿ ?

'ಫ್ರಂಟ್ ಲೈನ್' ನಿಯತಕಾಲಿಕಕ್ಕೆ ದೇವೇಗೌಡರು ಇತ್ತೀಚೆಗೆ ನೀಡಿದ ಸಂದರ್ಶನದಲ್ಲಿ 'ನಾನು ನನ್ನ ಸೆಕ್ಯುಲರ್ ಸಿದ್ಧಾಂತಕ್ಕೆ ಬದ್ಧನಾಗಿದ್ದೇನೆ' ಎಂದು ಸ್ಪಷ್ಟಪಡಿಸಿದ್ದಾರೆ. ನಾನು ಸೆಕ್ಯುಲರ್ ಎಂದು ಹೇಳುವುದು ಸುಲಭ. ಆದರೆ ಅದಕ್ಕೆ ತಕ್ಕಂತೆ ನಡೆದುಕೊಳ್ಳುವುದು ಅಷ್ಟು ಸುಲಭವಲ್ಲ. ಗೌಡರು ಅಂತಹ ಇನ್ನೊಂದು ಪರೀಕ್ಷೆಯನ್ನು ಹತ್ತಿರದಲ್ಲೇ ಎದುರಿಸಬೇಕಾಗಿ ಬರಬಹುದು. ಜೆಡಿ(ಎಸ್) ಶಾಸಕರು ಮತ್ತೊಮ್ಮೆ ಬಿಜೆಪಿ ಜೊತೆ ಕೈ ಜೋಡಿಸಲು ಒತ್ತಡ ತರಬಹುದು. ಗೌಡರು ಇಂತಹ ಸವಾಲುಗಳನ್ನು ಮುಂದೆ ಹೇಗೆ ಎದುರಿಸುತ್ತಾರೆ ಎಂಬುದು ಮುಖ್ಯ. ಎಂತಹ ಪ್ರಸಂಗ ಎದುರಾದರೂ ಕೋಮುವಾದಿ ಶಕ್ತಿಗಳೊಂದಿಗೆ ರಾಜಿಮಾಡಿಕೊಳ್ಳುವ ತಪ್ಪನ್ನು ಇನ್ನೊಮ್ಮೆ ಗೌಡರು ಮಾಡಬಾರದು.

'ರಾಜಕೀಯದಲ್ಲಿ ನಾನು ಕಷ್ಟಕ್ಕೀಡಾದರೂ, ನನ್ನ ರಾಜಕೀಯ ಭವಿಷ್ಯಕ್ಕೆ ಧಕ್ಕೆಯಾದರೂ ಸಹ ನನ್ನ ಸಿದ್ಧಾಂತವನ್ನು ನಾನು ತ್ಯಜಿಸುವುದಿಲ್ಲ' ಎಂದು ದೇವೇಗೌಡರು ಹೇಳಿದ್ದಾರೆ. (ಫ್ರಂಟ್ ಲೈನ್, ನವೆಂಬರ್ 2, 2007) ರಾಜ್ಯದ ಮುನ್ನಡೆಯನ್ನು ಬಯಸುವ ಪ್ರಜಾಸತ್ತಾತ್ಮಕ ಶಕ್ತಿಗಳು ಗೌಡರಿಂದ ಇದನ್ನೇ ನಿರೀಕ್ಷಿಸುತ್ತವೆ. ಆ ಮೂಲಕ ಮಾತ್ರ ಗೌಡರು ಕಳೆದುಕೊಂಡ ಜನರ ವಿಶ್ವಾಸವನ್ನು ಮರಳಿ ಪಡೆಯಬಹುದು.

ಕಾಂಗ್ರೆಸ್ ಪಕ್ಷವಾಗಲಿ, ಬಿಜೆಪಿಯಾಗಲಿ ರಾಜ್ಯದಲ್ಲಿ ಮೂರನೇ ಪರ್ಯಾಯವೊಂದರ ಬೆಳವಣಿಗೆಯನ್ನು ಬಯಸುವುದಿಲ್ಲ ಸಹಿಸುವುದಿಲ್ಲ. ಪರ್ಯಾಯ ನೀತಿಗಳಿಗಾಗಿ ಜನ ಚಳುವಳಿಗಳನ್ನು ಕಟ್ಟುವ ಮೂಲಕವಷ್ಟೇ ರಾಜ್ಯದಲ್ಲಿ ಒಂದು ಜನಪರವಾದ, ಪ್ರಜಾಸತ್ತಾತ್ಮಕವಾದ ಪರ್ಯಾಯವನ್ನು ಕಟ್ಟಲು ಸಾಧ್ಯ. ಇದು ಗೌಡರ ಮುಂದಿನ ದಾರಿಯಾದೀತೆ?

ಕೆ.ಆರ್.ಪುರಂನಲ್ಲಿ ನಾಯಿಗಳ ಕಡಿತವೇ ಕಡಿತ

ಬೆಂಗಳೂರಿನಲ್ಲೀಗ ನಿತ್ಯವೂ ನಾಯಿ ಕಡಿತದ ಸುದ್ದಿಗಳು. ಆದರೆ ತಡೆಯುವ ಕ್ರಮಗಳೆಲ್ಲಿ?

ಬೆಂಗಳೂರಿನ ಕೆ.ಆರ್. ಪುರಂ ವ್ಯಾಪ್ತಿಗೆ ಬರುವ ರಾಮಮೂರ್ತಿಯವರ ಬಡಾವಣೆಯ ಬಿಎಸ್‌ವಿ ರೆಡ್ಡಿ ಬಡಾವಣೆಯಲ್ಲಿ ದಿಡೀರ್ ಎಂದು ಬೆಳಿಗ್ಗೆ 9.30ಕ್ಕೆ ಪ್ರಶಾಂತ ಎಂಬ 7 ವರ್ಷದ ಮಗುವಿಗೆ ಬೀದಿನಾಯಿ ಕಚ್ಚಿದೆ. ತಕ್ಷಣ ಸ್ಥಳೀಯರು ಮಹಾನಗರ ಪಾಲಿಕೆಗೆ ದೂರವಾಣಿ ಮೂಲಕ ಸುದ್ದಿ ನೀಡಿರುತ್ತಾರೆ. ತಕ್ಷಣ ಪ್ರತಿಕ್ರಿಯಿಸಿದ ಅಧಿಕಾರಿಗಳು ನಾಯಿಯ ಭಾವಚಿತ್ರವನ್ನು ತೆಗೆದುಕೊಳ್ಳು ಬರುತ್ತೇವೆಂದು ಬೇಜವಾಬ್ದಾರಿ ಉತ್ತರ ನೀಡಿರುತ್ತಾರೆ. ಇದಾದ ನಂತರ ದೀಪಿಕಾ ಎಂಬ 6 ವರ್ಷದ ಮಗುವಿಗೆ ಕಚ್ಚಿದೆ. ಅವರ ತಾಯಿ ಚಿಕಿತ್ಸೆ ಕೊಡಿಸಿ ಮಗುವನ್ನು ಮನೆಗೆ ಕರೆದುಕೊಂಡು ಹೋಗುವಾಗ ಮತ್ತೆ ಮಗುವಿನ ಮೇಲೆ ನಾಯಿ ಬೀಳಲು ಬಂದಿದೆ. ತಕ್ಷಣ ಮಗುವನ್ನು ತಾಯಿ ಪಕ್ಕಕ್ಕೆ ಎಳೆದುಕೊಂಡಾಗ ತಾಯಿ ಶೋಭಾಳ ಕಾಲಿಗೆ ಜೋರಾಗಿ ಕಚ್ಚಿದೆ. ಇದಾದ ನಂತರ ಒಬ್ಬರ ನಂತರ ಒಬ್ಬರು ಎಂಬಂತೆ. ಕಿರಣ 5 ವರ್ಷ, ಸಮಿವುಲ್ಲಾ 5 ವರ್ಷ, ದಿವ್ಯ 4 ವರ್ಷ, ಕ್ರೇನ್ 7 ವರ್ಷ ಇವರಿಗೆ ಕಚ್ಚಿ ಗಾಯಮಾಡಿದೆ. ಪ್ರಶಾಂತ್ ಅನ್ನುವ ಮಗುವಿನ ಕಣ್ಣಿಗೆ ಕಚ್ಚಿದೆ. ಕ್ರೇನ್ ಎಂಬ ಹುಡುಗನಿಗೆ ಸಿಕ್ಕಾಪಟ್ಟೆ ಎಳೆದಾಡಿ ಕಚ್ಚಿದೆ. ಮಗುವನ್ನು ಯಾವ ಆಸ್ಪತ್ರೆಯಲ್ಲಿ ದಾಖಲಿಸಿದ್ದಾರೆ



ಎಂಬ ಮಾಹಿತಿಯಿಲ್ಲ. ಇದನ್ನು ಗಮನಿಸಿದ ಸ್ಥಳೀಯ ಯುವಕ ತನ್ನ ಪ್ರಾಣದ ಅಂಜಿಕೆಯನ್ನು ಬಿಟ್ಟು ನಾಯಿಯನ್ನು ಹೊಡೆದು ಸಾಯಿಸಿರುತ್ತಾನೆ. ಆತ ಸಾಯಿಸದೆ ಹೋಗಿದ್ದರೆ ಇನ್ನೆಷ್ಟು ಜನರಿಗೆ ಕಚ್ಚುತ್ತಿತ್ತೊ ಅನ್ನುವುದನ್ನು ಊಹಿಸಲಾಗುವುದಿಲ್ಲ. ನಾಯಿ ಸಾಯಿಸಿದ ಕೂಡಲೇ ಪಾಲಿಕೆಗೆ ಬಂದು ಸತ್ತ ನಾಯಿಯನ್ನು ತೆಗೆದುಕೊಂಡು ಹೋಗಿ ಎಂದು ಸುದ್ದಿ ತಿಳಿಸಿದರೆ ಗಾಡಿಯಿಲ್ಲ ಅನ್ನುವ ಮಾತನ್ನು ಆಡಿರುತ್ತಾರೆ. ನಂತರ ಸ್ಥಳೀಯರೇ ಅದನ್ನು ತೆಗೆದು ಹೊರಗೆ ಬಿಸಾಕಿ, ಮಹಾನಗರ ಪಾಲಿಕೆಯ ಅಧಿಕಾರಿಗಳ ಬೇಜವಾಬ್ದಾರಿತನದ ಬಗ್ಗೆ ಮಾಧ್ಯಮಗಳಿಗೆ ಸುದ್ದಿ ಮುಟ್ಟಿಸಿದ ಕೂಡಲೇ ಸುದ್ದಿ ಬಿತ್ತರವಾಗುತ್ತಲೇ ರಾತ್ರಿ 12 ಗಂಟೆಗೆ ಸ್ಥಳಕ್ಕೆ ಭೇಟಿ ನೀಡಿ ಆಶ್ವಾಸನೆಯನ್ನು ನೀಡಲು ಶುರುಮಾಡಿರುತ್ತಾರೆ. ಜನವಾದಿ ಮಹಿಳಾ ಸಂಘಟನೆಯ ಮುಖಂಡರು ಮಂಜುಳ, ಪದ್ಮ ಪ್ರಮಿಳಾ, ಕೆಂಪಮ್ಮ ಮುನಿಯಮ್ಮ ಸಿಪಿಐ(ಎಂ)ನ ಮುಖಂಡರುಗಳಾದ ರಮೇಶ್, ಗೌರಮ್ಮ ರಾಮಚಂದ್ರರವರು ನಾಯಿಯಿಂದ ಕಡಿತಕ್ಕೆ ಒಳಗಾದ ಮಕ್ಕಳ ಮನೆಗೆ ಭೇಟಿ ಕೊಟ್ಟರೆ ಅವರ ನೋವು ಮುಗಿಲುಮುಟ್ಟುತ್ತಿತ್ತು. ಕೂಲಿ ಮಾಡುವ ಜನರು ಕೂಲಿಗೆ ಹೋದರೆ ಮಾತ್ರ ಬದುಕು, ಇಲ್ಲದಿದ್ದರೆ ಇಲ್ಲ. ಅವರಿಗೆ ಚಿಕಿತ್ಸೆ ಪಡೆಯಲು ಹಣವಿಲ್ಲ. ಅಕ್ಕಪಕ್ಕದ ಜನರು 50ರಿಂದ 100 ರೂ.ಗಳನ್ನು ಕೊಟ್ಟು ಸಹಕರಿಸಿರುತ್ತಾರೆ. ಶೋಭಾ ಎನ್ನುವ ಮಹಿಳೆ ಮನೆಕೆಲಸಕ್ಕೆ ಒಂದು ದಿನ ಹೋಗದಿದ್ದರೆ ಬಯ್ಯುತ್ತಾರೆ ಅನ್ನುವ ಆತಂಕ ಆ ಮಹಿಳೆಗೆ ಕನ್ನಡ ಪ್ರಭಾ ಪತ್ರಿಕೆ ಪತ್ರಕರ್ತರಾದ ಮಾದೇಗೌಡರವರು ಅವರ ಪರಿಸ್ಥಿತಿಯನ್ನು ಗಮನಿಸಿ ಕೆಲಸಕ್ಕೆ ಹೋಗಬೇಡಮ್ಮ ಗಾಯ, ಕೀವು ತುಂಬಿ ತೊಂದರೆಯಾಗುತ್ತೆ ಎಂದು ಹೇಳಿ 500 ರೂ. ಸಹಾಯವನ್ನು ಮಾಡಿರುತ್ತಾರೆ. ಮಹಾನಗರ ಪಾಲಿಕೆಯ ಸರಿಯಾದ ಸಮಯಕ್ಕೆ ಸ್ಪಂದಿಸಿದ್ದರೆ ಸುಮಾರು ಜನರಿಗೆ ನಾಯಿ ಕಚ್ಚುವುದನ್ನು ತಪ್ಪಿಸಬಹುದಾಗಿತ್ತು. ಈ ಘಟನೆಗೆ ನೇರ ಹೊಣೆ ಮಹಾನಗರ ಪಾಲಿಕೆ ಮಹದೇವಪುರದವರೇ ಹೊರಬೇಕಾಗುತ್ತದೆ. ನಮ್ಮ ಸಂಘಟನೆಯ ವತಿಯಿಂದ ಅಧಿಕಾರಿಗಳ ಜೊತೆ ಗಲಾಟೆ ಮಾಡಿ ಗಾಯಾಳುಗಳಿಗೆ ಉಚಿತವಾಗಿ ಚಿಕಿತ್ಸೆ ನೀಡುವಂತೆ ಮಾಡಲಾಯಿತು. ಮತ್ತೆ ಅವರಿಗೆ ಪರಿಹಾರ ನೀಡಬೇಕೆಂದು ಒತ್ತಾಯಿಸಲಾಯಿತು. ಇದಕ್ಕೆ ಅಧಿಕಾರಿಗಳು ಮೇಲಿನ ಅಧಿಕಾರಿಗಳ ಜೊತೆ ಸಂಪರ್ಕಿಸಿ ತಿಳಿಸುವುದಾಗಿ ಹೇಳಿರುತ್ತಾರೆ. ನಾಯಿಗಳನ್ನು ಹಿಡಿಯುವುದಿಲ್ಲ, ಸ್ವಚ್ಛತೆಯಿಲ್ಲ, ಕಸದ ರಾಶಿ ತುಂಬಿ ತುಳುಕುತ್ತಿರುತ್ತದೆ. ಇದನ್ನು ತೆಗೆದಿಲ್ಲ. ಈಗ ಗಲಾಟೆಯಾದ ಕೂಡಲೇ 2 ಲಾರಿ ಕಸ ತೆಗೆದು ಔಷದಿ ಸಿಂಪಡಿಸಿರುತ್ತಾರೆ ಎಂದು ಸ್ಥಳೀಯರು ಬೇಸರದಿಂದ ನುಡಿಯುತ್ತಾರೆ.

ಈ ಸಮಸ್ಯೆ ಬಗೆಹರಿಯುವವರೆಗೆ ಜನವಾದಿ ನಿರಂತರವಾಗಿ ನಮ್ಮ ಜೊತೆಯಲ್ಲಿರಬೇಕೆಂದು ಸ್ಥಳೀಯ ಹೆಣ್ಣುಮಕ್ಕಳ ಅಹವಾಲು. ಆದರೆ ಮಹಾನಗರಪಾಲಿಕೆ ಅಧಿಕಾರಿಗಳಿಗೆ ಮಾತ್ರ ಚೆನ್ನಾಗಿ ಮಾನ ಮರ್ಯಾದೆ ತೆಗೆದು ಕಳುಹಿಸಿರುತ್ತಾರೆ. ಇದು ಅಕ್ಕಪಕ್ಕದ ಪ್ರದೇಶಗಳಲ್ಲಿ ಸಹ ಇದೇ ವಾತಾವರಣ ಇರುವುದರಿಂದ ಸಂಬಂಧಿಸಿದ ಅಧಿಕಾರಿಗಳು ಗಮನಹರಿಸುವ ಮೂಲಕ ಇಂತಹ ಘಟನೆಗಳನ್ನು ತಡೆಯಲು ಸಾಧ್ಯವಾಗಬೇಕೆಂದು ಜನವಾದಿ ಮಹಿಳಾ ಸಂಘಟನೆಯ ಒತ್ತಾಯಿಸಿದೆ.


- ಗೌರಮ್ಮ

ಗಾಂಧಿ ಜಯಂತಿಯಂದೇ ದಲಿತ ಯುವತಿಯ ಮೇಲೆ ಅತ್ಯಾಚಾರ

ದಿನಾಂಕ 2 ಅಕ್ಟೋಬರ್ 2007, ಅದು ಮಹಾತ್ಮಾಗಾಂಧಿಯವರ ಜಯಂತಿಯ ದಿನ. ಹಲವು ರೀತಿಯಲ್ಲಿ ಮಹಿಳಾಪರ ಚಿಂತಿಸಿದ ಗಾಂಧಿ ಜಯಂತಿಯಂದೇ ದಲಿತ ವಿಧವೆಯ ಮೇಲೆ ನಾಲ್ಕು ಜನ ದಲಿತ ಯುವಕರಿಂದಲೇ ಸಾಮೂಹಿಕ ಅತ್ಯಾಚಾರವು ಬೀದರ್ ಜಿಲ್ಲೆಯ ಭಾಲ್ಕಿಯಲ್ಲಿ ನಡೆದಿದೆ. ಈ ಘಟನೆಯನ್ನು ಖಂಡಿಸಿದ ಜನವಾದಿ ಮಹಿಳಾ ಸಂಘಟನೆಯು ವಿಜಯಲಕ್ಷ್ಮಿಯವರ ನೇತೃತ್ವದಲ್ಲಿ ಮಹಿಳೆಯ ಬೆಂಬಲಕ್ಕೆ ನಿಂತಿದೆ. ತಕ್ಷಣ ನಿಯೋಗವೊಂದು ಪೊಲೀಸ್ ವರಿಷ್ಠಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳಿಗೆ ಭೇಟಿಯಾಗಿ ವಾರದೊಳಗಾಗಿ ಆರೋಪಿಗಳನ್ನು ಬಂಧಿಸದಿದ್ದರೆ ಹೋರಾಟಕ್ಕಿಳಿಯುವುದಾಗಿ ಹೇಳಿದೆ. ಇಬ್ಬರನ್ನು ಮಾತ್ರ ಈ ಹೊತ್ತಿನವರೆಗೆ ಬಂಧಿಸಲಾಗಿದೆ. ಇತ್ತ ಜನವಾದಿಯೂ ಹೋರಾಟಕ್ಕೆ ಅಣಿಯಾಗುತ್ತಿದೆ. ಹಾಗೆಯೇ ಜನವಾದಿಯ ನಿಯೋಗವೊಂದು ನೊಂದ ಮಹಿಳೆಗೆ ಭೇಟಿಯಾಗಿ ಸಾಂತ್ವನ ಹೇಳಿದೆ ಮತ್ತು ಧೈರ್ಯ ತುಂಬಿದೆ ಮತ್ತು ಊರಿನ ಜನವೂ ಮಹಿಳೆಯ ಬೆಂಬಲಕ್ಕೆ ನಿಂತಿದ್ದಾರೆ.

ಘಟನೆಯ ವಿವರ

ಎರಡು ಚಿಕ್ಕ ಮಕ್ಕಳ ತಾಯಿಯಾದ ಈ ನೊಂದ ಮಹಿಳೆಯು ಕಳೆದ ಎರಡು ವರ್ಷದ ಹಿಂದೆ ಗಂಡನನ್ನು ಕಳೆದುಕೊಂಡು ಅತಿ ದುಃಖದಿಂದ ಜೀವನ ಸಾಗಿಸುತ್ತಿದ್ದಾಳೆ. ಹಿರೆಮಠ ಸಂಸ್ಥಾನದಲ್ಲಿ ಅಡುಗೆ ಕಾಯಕಮಾಡುವ ಈಕೆ ದಿನಾಂಕ 2 ಅಕ್ಟೋಬರ್ 2007ರಂದು ಕೆಲಸ ಮುಗಿಸಿ ಮನೆಗೆ ಬರುವಾಗ ನಾಲ್ಕು ಜನ ಯುವಕರು (ಅದು ನಿರ್ಜನ ಪ್ರದೇಶ) ಅವಳನ್ನು ಎಳೆದುಕೊಂಡು ಹೋಗಿ ಸಾಮೂಹಿಕ ಅತ್ಯಾಚಾರವೆಸಗಿ ಮಾರಣಾಂತಿಕ ಹಲ್ಲೆಯೂ ಮಾಡಿ ಪರಾರಿಯಾಗಿದ್ದಾರೆ. ವಿಷಯ ತಿಳಿದ ಅವಳ ಸಂಬಂಧಿಕರು ತಕ್ಷಣ ಅವಳನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ಘಟನೆಯ ಸುದ್ದಿ ತಿಳಿದಿದ್ದೇ ತಡ ವಿಜಯಲಕ್ಷ್ಮಿ ಮತ್ತು ಜನವಾದಿ ಗೆಳತಿಯರು ಆಸ್ಪತ್ರೆಗೆ ಧಾವಿಸಿದರು. ಪೊಲೀಸ್ ಸ್ಟೇಷನ್‌ಗೆ ಕರೆದೊಯ್ದು ಕೇಸು ದಾಖಲಿಸಿದರು. ಎಫ್‌ಐಆರ್ ಆಗಿ ಅವಳನ್ನು ಆಸ್ಪತ್ರೆಗೆ ಸೇರಿಸಲಾಯಿತು. ತೀವ್ರ ಧಾಳಿಯಿಂದ



ಮಾನಸಿಕವಾಗಿಯೂ ದೈಹಿಕವಾಗಿಯೂ ಜರ್ಝರಿತಳಾದ ಮಹಿಳೆಯು ಬಾಧಿಸುವ ನೋವಿನಲ್ಲಿಯೂ ಪಟ್ಟು ಹಿಡಿದಿದ್ದೇನೆಂದರೆ ಆರೋಪಿಗಳಿಗೆ ಉಗ್ರ ಶಿಕ್ಷೆಯಾಗಬೇಕು ಎಂದು.

ಆದರೆ ದುರಂತವೆಂದರೆ, ದಲಿತ ಸಂಘಟನೆಯ ಕೆಲ ಮುಖಂಡರು ಆರೋಪಿಗಳ ಬೆನ್ನಿಗೆ ನಿಂತು ನೊಂದ ದಲಿತ ಮಹಿಳೆಗೆ ಹಣದ ಆಮಿಷ ತೋರಿ ಕೇಸು ವಾಪಸು ಪಡೆಯಲು ಒತ್ತಡ ಹಾಕಿದ್ದಾರೆ. ಜನವಾದಿಯ ಗೆಳತಿಯರು ಈ ಪ್ರಕರಣ ಕೈ ಬಿಡಬೇಕೆಂದೂ ಧಮಕಿ ಹಾಕಿದ್ದಾರೆ. ಇದ್ಯಾವುದಕ್ಕೂ ಬಗ್ಗದ ಜನವಾದಿ ಮತ್ತು ನೊಂದ ಮಹಿಳೆಯು ನ್ಯಾಯ ಪಡೆದೇ ಪಡೆಯುವ ಹಠ ಹೊತ್ತು ಗಟ್ಟಿಯಾಗಿ ನಿಂತಿದ್ದರಿಂದ ಇಬ್ಬರು ಆರೋಪಿಗಳು ಬಂಧಿಸಲ್ಪಟ್ಟಿದ್ದಾರೆ. ಇನ್ನೂ ಉಳಿದಿಬ್ಬರನ್ನು ಬಂಧಿಸದಿದ್ದರೆ ಸಂಘಟನೆ ಹೋರಾಡಲು ಸಿದ್ದ ಎಂದು ಜಿಲ್ಲಾ ಕಾರ್ಯದರ್ಶಿ ಭಾರತಿ ಮತ್ತು ಅಧ್ಯಕ್ಷತೆ ಅಂಬೂಬಾಯಿ, ಪಾರ್ವತಿ ಈಗಾಗಲೇ ಪ್ರಕಟಿಸಿದ್ದಾರೆ.

ಹೊಣೆಗೇಡಿ ಪಟ್ಟಿಯಲ್ಲಿ ಭಾಲ್ಕಿ ಮಠದ ಸ್ವಾಮಿಯು ಸೇರುತ್ತಾರೆ. ಏಕೆಂದರೆ ತಮ್ಮ ಮಠದಲ್ಲಿ ಅಡಿಗೆ ಮಾಡುವ ದಲಿತ ಮಹಿಳೆಯ ಮೇಲೆ ಅತ್ಯಾಚಾರ ನಡೆದಿರುವುದನ್ನು ಗೊತ್ತಾದ ಮೇಲೂ ಈತ ಪ್ರಕರಣ ಖಂಡಿಸಲಿಲ್ಲ ಮತ್ತು ಮಹಿಳೆಗೆ ಸಣ್ಣ ಸಾಂತ್ವನವೂ ಹೇಳಲಿಲ್ಲ. ಬಸವಣ್ಣನವರ ವಚನಗಳೇ ಮಠದ ಮೂಲ ಸಿದ್ಧಾಂತವೆಂದು ಸಾರಿದವರು. ವಾಸ್ತವದಲ್ಲಿ ವಚನ ಸಿದ್ಧಾಂತದ ವಿರುದ್ಧ ನಡೆಯುವುದು ಸರಿಯೇ ಎಂದು ಜನ ಪ್ರಶ್ನಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಮಠದ ಶಾಲೆಯಲ್ಲಿಯೇ ಓದುತ್ತಿರುವ ಮಹಿಳೆಯರ ಮಗನಿಗೆ ಪರೀಕ್ಷೆ ಬರೆಯಲು ಅವಕಾಶ ಕೊಡದಿರುವುದು ಟೀಕೆಗೆ ಒಳಗಾಗಿದೆ.

ಯಾವುದೇ ರಾಜಕೀಯ ಒತ್ತಡಕ್ಕೆ ಒಳಗಾಗದೆ ಪೊಲೀಸ್ ಇಲಾಖೆಯು ತಕ್ಷಣ ಇನ್ನುಳಿದ ಆರೋಪಿಗಳನ್ನು ಬಂಧಿಸಲು ಆಗ್ರಹಿಸಿದ ಜನವಾದಿಯು ನೊಂದ ಮಹಿಳೆಗೆ ಸರಕಾರವು ಕೆಲಸ ಕೊಟ್ಟು ಭವಿಷ್ಯದಲ್ಲಿ ನೆಮ್ಮದಿಯಿಂದ ಜೀವಿಸಲು ಸಾಧ್ಯಮಾಡಬೇಕೆಂದು ಮತ್ತು ಅವಳಿಗೆ ರಕ್ಷಣೆ ಕೊಡಬೇಕೆಂದೂ ಒತ್ತಾಯಿಸಿದೆ.

ವರದಿ : ಮೀನಾ

ಯಾವ ನೀತಿ ? ಎಲ್ಲಿ ಮಿತಿ?

ಪುಟ 3 ರಿಂದ

ವಿರೋಧಿಸುತ್ತಿದ್ದ ಕೋಮುವಾದಿ ಬಿಜೆಪಿಯೊಂದಿಗೆ ಕೈ ಜೋಡಿಸಿ ಸರ್ಕಾರ ರಚಿಸಿ ಅದು ತಂದೊಡ್ಡಿದ ಅನಾಹುತಗಳು, ರಾಜ್ಯದ ಜನತೆಗೆ ಒಡ್ಡಿದ ಗಂಡಾಂತರಗಳನ್ನು ಅದರ ಪತನದಿಂದ ತಿಳಿದುಕೊಳ್ಳಲೂ ಸಿದ್ದರಿಲ್ಲ. ಹೀಗೆ ಕಾಂಗ್ರೆಸ್ ಬಿಜೆಪಿಗಳ ಸತತ ದಾಳಿಗೆ ಅವರ ಪಕ್ಷ ಜೆಡಿ(ಎಸ್) ಒಳಗಾಗುತ್ತಿದ್ದರೂ ಅದು ಲೆಕ್ಕಕ್ಕೆ ಇಲ್ಲ ಅಂದರೆ ಜೆಡಿ(ಎಸ್) ತಲುಪಿರುವ ತಾತ್ವಿಕ, ಸಂಘಟನಾತ್ಮಕ ದುಃಸ್ಥಿತಿಗೆ ಬೇರೆ ಉದಾಹರಣೆ ಬೇಕೇ? ಈ ಎಲ್ಲಾ ಸಂಗತಿಗಳು ಜೆಡಿ(ಎಸ್)ನೊಳಗೆ ಅವಕಾಶವಾದ ಎಷ್ಟು ಬೆಳೆದಿದೆ ಎಂಬುದನ್ನು ಎತ್ತಿ ತೋರಿಸುತ್ತದೆ. ಎಂತಹದ್ದೇ ಒಂದು ಸರ್ಕಾರ, ಎಂತಹದ್ದೇ ಒಂದು ಅಧಿಕಾರ ಸಿಕ್ಕಿದರೆ ಸಾಕು, ಅದರಿಂದಲೇ ರಾಜ್ಯವನ್ನು ಮನಬಂದಂತೆ ಲೂಟಿ ಮಾಡುತ್ತಾ, ಹೋಗಬಹುದು ಎಂಬ ಗಣಿ ಉದ್ಯಮಿಗಳಂತಹ ರಾಜಕೀಯ ಬಂಡವಾಳಗಾರರ ಮೇಲುಗೈ ಕಾಣುತ್ತಿದೆ. ಹೇಗಾದರೂ ಮಾಡಿ ಚುನಾವಣೆ ತಡೆಯಬೇಕೆಂಬ 'ಶಾಸಕೋತ್ತಮರ' ಕೋರಿಕೆಯಲ್ಲಿ ಏನು ತಾತ್ವಿಕತೆ ನೀತಿ ನಿಷ್ಠತೆ ಇದೆ? ಈ ಮಹಾಶಯರುಗಳೆ ಹೇಳುವಂತೆ ಕಾಂಗ್ರೆಸ್ ಜೊತೆ ಸೇರಲು ತಾತ್ವಿ[illegible] ಆಧಾರವಿಲ್ಲ, ಹಾಗೇ ಬಿಜೆಪಿಯೊಂದಿಗೆ ಸೇರ ಬೇಕೆಂಬುವವರಿಗೂ ಇಲ್ಲ. ಇದು ಜೆಡಿ(ಎಸ್)ನ ಸ್ವರೂಪ ಹೇಗಾಗಿದೆ ಎಂಬುದಕ್ಕೆ ಸಾಕ್ಷಿ ಮಾಡಿದ್ದುಣ್ಣೋ ಮಹರಾಯ ಎಂಬಂತಹ ದುಸ್ಥಿತಿ.

ಇಂತಹ ದೊಂಬರಾಟ, ಸಂದರ್ಭ ಸಾಧಕತೆ ರಾಜ್ಯದ ಜನತೆಗೆ ಬೇಕಿಲ್ಲ, ಯಾರಿಗೂ ಅಂತಹ ವಿಶ್ವಾಸಾರ್ಹತೆಯೂ ಉಳಿದಿಲ್ಲ ಈಗ ಬೇಕಿರುವುದು ಹೊಸ ಜನಾದೇಶ, ಅಂದರೆ ಚುನಾವಣೆ ಎಂಬುದನ್ನು ಮತ್ತೆ ಮತ್ತೆ ಪುರುಚ್ಚರಿಸುವ ನಮ್ಮ ನಿಲುವು ನಿಚ್ಚಳವಾಗಿ ಕಾಣುತ್ತದೆ.

- 27.10.2007, ಬೆಳಿಗ್ಗೆ 11.[illegible]

ದುಷ್ಕರ್ಮಿಗಳಿಂದಲೇ ಹೊರಬಿದ್ದಿರುವ ಗುಜರಾತ್ ಹತ್ಯಾಕಾಂಡದ ಘೋರ ಸತ್ಯಗಳು

ಇಡೀ ದೇಶಕ್ಕೆ ದೇಶವನ್ನೇ ಅಘಾತಕ್ಕೆ ಗುರಿ ಮಾಡಿದ ನಿಬ್ಬೆರಗಾಗಿಸಿದ, 2002 ರಲ್ಲಿ ಗುಜರಾತ್‌ನಲ್ಲಿ ನಡೆದ ಮುಸ್ಲಿಂ ಸಮುದಾಯದ ಜನಾಂಗೀಯ ಹತ್ಯಾಕಾಂಡದ ನಗ್ನ ಸತ್ಯಗಳನ್ನು ದುಷ್ಕೃತ್ಯ ಎಸಗಿದ ಆರೋಪಿಗಳು ಹೇಳಿಕೊಂಡಿದ್ದಾರೆ. ಇದರಿಂದ ಗುಜರಾತ್ ಮುಖ್ಯಮಂತ್ರಿ ನರೇಂದ್ರಮೋದಿ ಮತ್ತು ಅವರ ನೇತೃತ್ವದ ಸರ್ಕಾರ ನಡೆಸಿದ ಯೋಜಿತ ನರಮೇಧ ಬಯಲಿಗೆ ಬಂದಿದೆ. ಅಮೇರಿಕ ಸರ್ಕಾರ ನರೇಂದ್ರ ಮೋದಿಗೆ ವೀಸಾ ನಿರಾಕರಿಸಿದಾಗ ವಿಕೃತವಾಗಿ ವರ್ತಿಸಿದ ಸಂಘಪರಿವಾರದವರು ಈಗ ಉತ್ತರ ನೀಡಬೇಕಾಗಿದೆ.



ಮುರಳಿಕೃಷ್ಣ

ಗುಜರಾತ್ ಹತ್ಯಾಕಾಂಡದ ಸಂದರ್ಭದಲ್ಲಿ ಅವರು ನಡೆಸಿದ ದುಷ್ಕೃತ್ಯಗಳನ್ನು ಅವರ ಮಾತಿನಿಂದಲೇ ಕೇಳಿದಾಗ ಮನಸ್ಸಿನಲ್ಲಿ ರಾಕ್ಷಸರ ಕಲ್ಪನೆ ಮೂಡುತ್ತದೆ. ಹೀಗಿರುವಾಗ ಅನುಭವಿಸಿದ ಅಮಾಯಕ ಜನರ ಪರಿಸ್ಥಿತಿಯನ್ನು ಒಮ್ಮೆ ಸ್ಮರಿಸಿಕೊಳ್ಳಿ.

ಮುಸ್ಲಿಮರು ಒನ್‌ಡೇ ಮ್ಯಾಚ್ ಆಡಿದರು, ನಾವು ಅರವತ್ತು ದಿನ ಆಡುತ್ತೇವೆ ಎಂದು ಗೋಧ್ರಾದಲ್ಲಿ ಸಬರಮತಿ ಎಕ್ಸ್‌ಪ್ರೆಸ್ ರೈಲಿಗೆ ಬೆಂಕಿ ಹಚ್ಚಿದಾಗ ಅದರಲ್ಲಿದ್ದ ವಿಶ್ವ ಹಿಂದೂ ಪರಿಷತ್‌ನ ಮುಖಂಡ ರಾಜೇಂದ್ರ ವ್ಯಾಸ್ ಪ್ರತಿಕ್ರಿಯಿಸಿದ್ದಾನೆ. ಅಂದರೆ ಇಡೀ ಎರಡು ತಿಂಗಳು ಕಾಲ ಮುಸ್ಲಿಮರನ್ನು ಯೋಜಿತವಾಗಿ ಯಾವ ರೀತಿ ಚೆಂಡಾಡಿರಬಹುದು ಎಂಬುದನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ.

ನರೋಧಾದ ಪಾಟಿಯಾ ಪ್ರದೇಶದಲ್ಲಿ ಒಂದೇ ದಿನ 800 ಮುಸ್ಲಿಮರನ್ನು ಕೊಂದೆವು. ಈ ದೇಹಗಳೆಲ್ಲಾ ಒಂದೆಡೆ ಇದ್ದರೆ ಪರಿಸ್ಥಿತಿ ನಿಭಾಯಿಸುವುದು ಕಷ್ಟ. ಹಾಗಾಗಿ ಅಹಮದಾಬಾದ್ ಸುತ್ತಮುತ್ತ ಬಿಸಾಕಿ ಎಂದು ಆ ಸಂದರ್ಭದಲ್ಲಿ ಅಲ್ಲಿದ್ದ ಪೋಲೀಸ್ ಕಮೀಷನರ್ ಪಿ.ಸಿ.ಪಾಂಡೆ ಸೂಚಿಸಿದರು ಎಂದು ಹತ್ಯಾಕಾಂಡದ ಆರೋಪಿಗಳಲ್ಲಿ ಒಬ್ಬನಾದ ಭಜರಂಗದಳದ ಬಾಬು ಭಜರಂಗಿ ಹೇಳಿದ್ದಾನೆ. ಮುಸ್ಲಿಮರನ್ನು ಹತ್ಯೆ ಮಾಡಿದ ನಾನೊಬ್ಬ 'ರಾಣಾ ಪ್ರತಾಪ್' ಎಂದು ತನ್ನಿಂತಾನೆ ಭಾವಿಸಿಕೊಂಡನಂತೆ ಎಂದು ರಾಜರೋಷವಾಗಿ ಹೇಳಿದ್ದಾನೆ.

ಸಬರಮತಿ ರೈಲಿಗೆ ಬೆಂಕಿ ಹಚ್ಚಿದ ಪ್ರಕರಣದ ಸಂಜೆ ಆರೋಪಿಗಳಿಗೆ 140 ಲೀಟರ್ ಪೆಟ್ರೋಲ್ ವಿತರಿಸಿದೆ ಎಂದು ಸಮೀಪದ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುತ್ತಿರುವ ಗೊಧ್ರಾ ಪ್ರಕರಣದಲ್ಲಿ ಪ್ರಮುಖ ಸಾಕ್ಷಿಯಾಗಿರುವ ರಣಜಿತ್‌ಸಿಂಗ್ ಪಟೇಲ್ ಹೇಳಿದ್ದಾನೆ. ಇಷ್ಟೇ ಅಲ್ಲ ಮುಸ್ಲಿಂ ಸಮುದಾಯದಲ್ಲಿದ್ದ, ವಾಣಿಜ್ಯ ವಹಿವಾಟಿನಲ್ಲಿ ತೊಡಗಿಸಿಕೊಂಡಿದ್ದ ಹಲವಾರು ಪ್ರಮುಖರ ಭಾವಚಿತ್ರಗಳನ್ನು ರಣಜಿತ್‌ಸಿಂಗ್‌ಗೆ ನೀಡಿ ಅವರೇ ಬೆಂಕಿ ಹಚ್ಚಿದ್ದಾಗಿ ಸಾಕ್ಷಿ ಹೇಳಬೇಕೆಂದು ಒತ್ತಾಯಿಸಿ ಈ ಪ್ರಕರಣವನ್ನು ತನಿಖೆ ನಡೆಸುತ್ತಿದ್ದ ಮುಖ್ಯ ತನಿಖಾಧಿಕಾರಿ 50,000 ರೂ. ಪಾವತಿಸಿದ್ದಾನೆ. ಸಂಘಪರಿವಾರದವರಿಗೆ ಪ್ರತಿಯಾಗಿ ಯಾರೂ ಸಹ ಬಿಸಿನೆಸ್‌ನಲ್ಲಿ ತೊಡಗಿಸಿಕೊಂಡು ಲಾಭ ಮಾಡಬಾರದೆಂಬುದು ಇವರ ಒಂದು ಪ್ರಮುಖ ಉದ್ದೇಶವಾಗಿದೆ. ಘುಹಾರಾಷ್ಟ್ರ, ಕರ್ನಾಟಕ ಮತ್ತಿತರ ರಾಜ್ಯಗಳಲ್ಲಿ ಎರಡು ಮೂರು ಸ್ಥಳಗಳು ಮಾತ್ರ ಹೆಚ್ಚಿನ ಪ್ರಮಾಣದಲ್ಲಿ ವಾಣಿಜ್ಯ ಕೇಂದ್ರಗಳಾಗಿರುತ್ತವೆ. ಆದರೆ ಗುಜರಾತ್‌ನಲ್ಲಿ ವಡೋದರ, ಅಹಮದಬಾದ್, ಸೂರತ್, ಬರೋಡ ಸೇರಿದಂತೆ ಹಲವಾರು ಪ್ರಮುಖ ವಾಣಿಜ್ಯ ಕೇಂದ್ರಗಳಿವೆ. ಈ ನಗರಗಳಲ್ಲಿ ವಾಸಿಸಿರುವ ಬಹುತೇಕ ಮುಸ್ಲಿಂ ಸಮುದಾಯ ವಾಣಿಜ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದೆ. ಗುಜರಾತ್‌ನಲ್ಲಿನ ಮಾರ್ವಾಡಿಗಳಿಗೆ ಸರಿಸಮನಾಗಿ ಬಿಸಿನೆಸ್ ಮಾಡುತ್ತಾರೆ. ಹಾಗಾಗಿ ಅವರು ಹೆಚ್ಚಿನ ಲಾಭ ಪಡೆಯುತ್ತಿದ್ದು, ಅವರನ್ನು ನಾಶ ಮಾಡದ ಹೊರತು ನಾವು ಹಣ ಲೂಟಿ ಮಾಡಲು ಸಾಧ್ಯವಿಲ್ಲ ಎಂಬ ಉದ್ದೇಶದಿಂದ ಎಲ್ಲ ವರ್ತಕರು ಮತ್ತು ಪ್ರಮುಖ ವ್ಯಕ್ತಿಗಳನ್ನು ಗುರಿ ಮಾಡಿದ್ದಾರೆ. ಬೆಸ್ಟ್ ಬೇಕರಿ ಇದ್ದ ಪ್ರದೇಶದಲ್ಲಿ ಹಿಂದೂಗಳ ಹಲವಾರು ಬೇಕರಿಗಳಿವೆ. ಆ ಎಲ್ಲಾ ಬೇಕರಿಗಳಲ್ಲಿ ನಡೆಯುವ ಒಟ್ಟು ವ್ಯಾಪಾರಕ್ಕಿಂತಲೂ ಹಲವು

ಪುಟ 12 ಕ್ಕೆ

ದೋಹಾ ಸುತ್ತಿನ ಮಾತುಕತೆ ಕೋಟ್ಯಾಂತರ ರೈತರ ಬದುಕಿನ ಪ್ರಶ್ನೆ

ನಮ್ಮ ಪ್ರಧಾನಮಂತ್ರಿಗಳು ಅಮೆರಿಕಾದ ಅಧ್ಯಕ್ಷರೊಂದಿಗೆ ದೂರವಾಣಿ ಸಂಭಾಷಣೆಯಲ್ಲಿ ಪರಮಾಣು ಒಪ್ಪಂದದ ಕಷ್ಟದ ಬಗ್ಗೆ ಮಾತ್ರವಲ್ಲ ಡಬ್ಲ್ಯುಟಿಒ ಮಾತುಕತೆಗಳ ಬಗ್ಗೆಯೂ ಮಾತಾಡಿ ಅದರ ಯಶಸ್ಸಿಗೆ ಭಾರತ ತನ್ನ ಪಾಲನ್ನು ಕೊಡಲು ಸಿದ್ಧ ಎಂದರಂತೆ. ಅವರು ಮಾತಾಡಿದ ಧಾಟಿಯಲ್ಲಿ ರಾಜಿ, ರಿಯಾಯ್ತಿಯ ಸಂದೇಹ ಬಂದಿದ್ದು, ಹೀಗಾದರೆ ಅದು ನಮ್ಮ ಕೋಟ್ಯಂತರ ಜನಗಳ ಬದುಕಿಗೆ ವಿನಾಶಕಾರಿಯಗುತ್ತದೆ ಎಂಬ ಆತಂಕ ಮೂಡುವುದು ಸಹಜ.

ಕಳೆದ ವಾರ ಅಮೆರಿಕಾದ ಅಧ್ಯಕ್ಷ ಬುಶ್ ಭಾರತದ ಪ್ರಧಾನ ಮಂತ್ರಿಗಳೊಂದಿಗೆ ದೂರವಾಣಿಯಲ್ಲಿ ಮಾತನಾಡಿದ್ದು ದೊಡ್ಡ ಸುದ್ದಿಯಾಗಿತ್ತು. ಭಾರತ-ಅಮೆರಿಕ ಪರಮಾಣು ವ್ಯವಹಾರವನ್ನು ಕಾರ್ಯಗತಗೊಳಿಸುವಲ್ಲಿ ಕಷ್ಟಗಳಿವೆ ಎಂದು ನಮ್ಮ ಪ್ರಧಾನಿಗಳು ಅಮೆರಿಕನ್ ಅಧ್ಯಕ್ಷರಿಗೆ ವಿವರಿಸಿದರೆಂಬ ಸುದ್ದಿಯ ಮೇಲೆಯೇ ಎಲ್ಲರ ಗಮನ.

ಈ ಬಗ್ಗೆಯೂ ಮಾತನಾಡಿದರು

ಆದರೆ ಬುಶ್ ಮತ್ತು ಮನಮೋಹನ್ ಸಿಂಗ್ ವಿಶ್ವ ವ್ಯಾಪಾರ ಸಂಘಟನೆ(ಡಬ್ಲ್ಯುಟಿಒ)ಯ ದೋಹಾ ಸುತ್ತಿನ ಮಾತುಕತೆಯ ಬಗ್ಗೆಯೂ ಮಾತಾಡಿದರು ಎಂದು ವಿದೇಶ ವ್ಯವಹಾರಗಳ ಮಂತ್ರಾಲಯದ ಪತ್ರಿಕಾ ಪ್ರಕಟನೆಯಿಂದ ತಿಳಿದು ಬರುತ್ತದೆ. ಅದು ಬೇಗನೆ ಯಶಸ್ವಿಯಾಗಿ ಮುಗಿಯಬೇಕು, ವ್ಯಾಪಾರ ಉದಾರೀಕರಣದಿಂದ ಜಾಗತಿಕ ಆರ್ಥಿಕಕ್ಕೆ ಬಹಳ ಲಾಭವಾಗಿದೆ ಎಂದ ನಮ್ಮ ಪ್ರಧಾನಿಗಳು ದೋಹಾ ಸುತ್ತು ಕೂಡಾ ವ್ಯಾಪಾರಕ್ಕಿರುವ ಬೇಲಿಗಳನ್ನು ತೆಗೆಯುವ ದಾರಿಯಲ್ಲಿ ನಮ್ಮನ್ನು ಮುಂದೊಯ್ಯುತ್ತದೆ ಎಂದು ಆಶಿಸಿದರಂತೆ. ಅಷ್ಟೇ ಅಲ್ಲ, ಈಗ ಇಟ್ಟಿರುವ ಕರಡು ಪಠ್ಯ ಕೃಷಿ ಮತ್ತು ಕೈಗಾರಿಕಾ ಸುಂಕದರಗಳ ಬಗ್ಗೆ ಒಂದು ತೀರ್ಮಾನಕ್ಕೆ ಬರಲು ಆಧಾರವಾಗಬಹುದು, ಈ ಕರಡಿನ ಹೆಚ್ಚಿನ ಅಂಶಗಳು ಭಾರತಕ್ಕೆ ಹಿತಕರವಾಗಿವೆ ಎಂದೂ ಹೇಳಿರುವುದಾಗಿ ವರದಿಯಾಗಿದೆ.

ಏಕೆ ಈ ಬದಲಾವಣೆ

ಈ ಮಾತು ನಿಜಕ್ಕೂ ಅಚ್ಚರಿ ಮೂಡಿಸುವಂತದ್ದು. ದೋಹಾ ಸುತ್ತಿನ ಕೃಷಿ ಕುರಿತ ಮಾತುಕತೆಗಳಲ್ಲಿ ಅಡ್ಡಿ ಬಂದಿರುವುದು ಮುಂದುವರೆದ ದೇಶಗಳಿಂದಲೇ, ಅದರಲ್ಲೂ ಅಮೆರಿಕಾದಿಂದಲೇ ಎಂಬುದನ್ನು ಗಮನಿಸಬೇಕು. ಅಲ್ಲದೆ ಭಾರತ, ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕ ಸೇರಿದಂತೆ ಹನ್ನೊಂದು ದೇಶಗಳ ಗುಂಪು ಈ ಮಾತುಕತೆಗಳಲ್ಲಿ ಇಟ್ಟಿರುವ ಕರಡನ್ನು ಈಗಾಗಲೆ ತಿರಸ್ಕರಿಸಿವೆ. ಆದರೂ ಅದು ತೀರ್ಮಾನಕ್ಕೆ ಆಧಾರವಾಗಬಹುದು ಮತ್ತು ನಮಗೆ 'ಹಿತಕರ'ವಾಗಿದೆ ಎಂದು ನಮ್ಮ ಪ್ರಧಾನ ಮಂತ್ರಿಗಳು ಅಮೆರಿಕಾದ ಅಧ್ಯಕ್ಷರಿಗೆ ಹೇಗೆ ಹೇಳಲು ಸಾಧ್ಯ ಎಂಬುದೇ ಅಚ್ಚರಿಗೆ ಕಾರಣ. ಒಂದು ಉತ್ತಮ ಕರಡು ಪಠ್ಯದಲ್ಲಿ ನೈಜ ಸಂವಾದಕ್ಕೆ, ಮಾತುಕತೆಗೆ ಮತ್ತು ಅಂತಿಮವಾಗಿ ಒಂದು ಒಮ್ಮತಕ್ಕೆ ಬರುವಂತಹ ಸಾಧ್ಯತೆ ಇರಬೇಕು. ಇವು ಯಾವುವೂ ಈ ಕರಡಿನಲ್ಲಿ ಇಲ್ಲ ಎಂದು ಈ ಹನ್ನೊಂದು ದೇಶಗಳು ನೀಡಿದ ಜಂಟಿ ಹೇಳಿಕೆ ಸ್ಪಷ್ಟಪಡಿಸಿತ್ತು. ಇತರ ಅಭಿವೃದ್ಧಿಶೀಲ ದೇಶಗಳ ಅಭಿಪ್ರಾಯವೂ ಇದೇ ಆಗಿತ್ತು. ಆದರೆ ಭಾರತ ಈಗ ಇದ್ದಕ್ಕಿದ್ದಂತೆ ತನ್ನ ನಿಲುವು ಬದಲಿಸಿದೆ ಎಂದು ಅರ್ಥವೇ? ಹಾಗಿದ್ದರೆ ಏಕೆ ಈ ಬದಲಾವಣೆ? ಈ ಕರಡನ್ನೇನೂ ಬದಲಿಸಿಲ್ಲ, ಅಮೆರಿಕಾ ಮತ್ತು ಇತರ ಅಭಿವೃದ್ಧಿ ಹೊಂದಿದ ದೇಶಗಳ ನಿಲುವು ಕೂಡಾ ಬದಲಾಗಿಲ್ಲದಿರುವಾಗ ಈ ಬದಲಾವಣೆ ಏಕೆ?

ಡಬ್ಲ್ಯುಟಿಒದ ಹಿಂದಿನ ಸುತ್ತುಗಳ ಮಾತುಕತೆಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಬಹಳಷ್ಟು ರಿಯಾಯ್ತಿಗಳನ್ನು ನೀಡಿಯಾಗಿದೆ, ಇದೀಗ ಅಭಿವೃದ್ಧಿ ಹೊಂದಿರುವ ದೇಶಗಳ ಸರದಿ, ಅವು ತಮ್ಮ ಕೃಷಿ ಸಬ್ಸಿಡಿಗಳನ್ನು ಇಳಿಸಬೇಕು, ಅವರ ಮಾರುಕಟ್ಟೆಗಳಿಗೆ ಹೆಚ್ಚಿನ ಅವಕಾಶ ನೀಡಬೇಕು. ಆದರೆ ಈಗ ಚರ್ಚೆಗೆ ಇಟ್ಟಿರುವ ಕರಡು ಅಭಿವೃದ್ಧಿಶೀಲ ದೇಶಗಳೇ ಸುಂಕದರಗಳನ್ನು ಇನ್ನಷ್ಟು ಇಳಿಸಬೇಕು ಎಂದು ಹೇಳುತ್ತದೆ, ಆದರೆ ಅದಕ್ಕೆ ಪ್ರತಿಯಾಗಿ ಅಭಿವೃದ್ಧಿ ಹೊಂದಿದ ದೇಶಗಳು ಸುಂಕದರಗಳನ್ನು ಇಳಿಸಬೇಕು ಎಂದೇನೂ ಹೇಳಿಲ್ಲ. ಆದ್ದರಿಂದಲೇ ಇದನ್ನು ಭಾರತವೂ ಸೇರಿದಂತೆ ಹಲವು ದೇಶಗಳು ತಿರಸ್ಕರಿಸಿದವು. ಈ ಕರಡು ಹೇಳಿದ ಸುಂಕದರಗಳ ಇಳಿಕೆಗೆ ಒಪ್ಪಿಕೊಂಡರೆ ನಮ್ಮ ಉದ್ದಿಮೆಗಳನ್ನು ಮುಚ್ಚಿಬಿಡಬೇಕಾಗುತ್ತದೆ. ಹೀಗಿರುವಾಗ ಇದು ಒಟ್ಟಾರೆಯಾಗಿ ಭಾರತಕ್ಕೆ ಹಿತಕರ ಎಂದು ಹೇಗೆ ಹೇಳಲು ಸಾಧ್ಯ?

ಹಳೆಯದರ ವಿಮರ್ಶೆಯೂ ಆಗಬೇಕು

ಹಿಂದಿನ ಸುತ್ತುಗಳ ತೀರ್ಮಾನಗಳ ಪರಾಮರ್ಶೆಯೂ ಆಗಬೇಕಾಗಿದೆ. ವಾಸ್ತವವಾಗಿ ಈ ತೀರ್ಮಾನಗಳಿಂದ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಬಹಳ ಅನ್ಯಾಯವಾಗಿದೆ. ಅವು ಸಂಕಟಕ್ಕೀಡಾಗಿವೆ. ಉದಾಹರಣೆಗೆ ಬೌದ್ಧಿಕ ಆಸ್ತಿ ಹಕ್ಕುಗಳು ದೊಡ್ಡ ಕಂಪನಿಗಳಿಗೆ ಸಿಕ್ಕಿದ್ದರಿಂದ ಜೀವವುಳಿಸುವ ಔಷಧಿಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಕೋಟಿಗಟ್ಟಲೆ ಜನಗಳಿಗೆ ಸಿಗದಂತಾಗಿದೆ. ಅಭಿವೃದ್ಧಿಹೊಂದಿದ ದೇಶಗಳು ವಿವಿಧ ರೀತಿಗಳಲ್ಲಿ ತಮ್ಮ ಕೃಷಿಯನ್ನು ರಕ್ಷಿಸಿಕೊಂಡಿವೆ. ಆದರೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಉತ್ಪಾದಿತ ಸರಕುಗಳ ಮೇಲೆ ಸುಂಕದರಗಳನ್ನು ಇಳಿಸಿ ತಮ್ಮ ಮಾರುಕಟ್ಟೆಯನ್ನು ತೆರೆದಿಡುವಂತೆ ಮಾಡಲಾಗಿದೆ. ಇವೆಲ್ಲದರ ವಿಮರ್ಶೆಯಾಗದಿರುವಾಗ ಈ ಕರಡು ಭಾರತದಂತಹ ದೇಶಗಳಿಗೆ 'ಹಿತಕರ' ಹೇಗಾದೀತು?

ರಾಜಿಗೆ ಸಿದ್ಧವಾದರೆ ವಿನಾಶ

ದೋಹಾ ಸುತ್ತಿನ ಮಾತುಕತೆಗಳ ಯಶಸ್ಸು ಮುಖ್ಯವಾಗಿ ಕೃಷಿಗೆ ಸಂಬಂಧಪಟ್ಟಿದೆ, ಭಾರತದಲ್ಲಿ 65ಕೋಟಿ ಮಂದಿ ಕೃಷಿಯನ್ನು ಅವಲಂಬಿಸಿದ್ದಾರೆ, ಅವರ ಕಷ್ಟಗಳನ್ನು ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ ಎಂದೂ ನಮ್ಮ ಪ್ರಧಾನಿಗಳು ಅಮೆರಿಕಾದ ಅಧ್ಯಕ್ಷರಿಗೆ ಹೇಳಿದರಂತೆ. ಆದರೆ ಭಾರತ ತನ್ನ ನಿಲುವು ಬದಲಿಸಿ ಕೃಷಿಗೆ ಸಂಬಂಧಪಟ್ಟಂತೆ ಯಾವುದೇ ರಾಜಿಗೆ, ರಿಯಾಯ್ತಿಗೆ ಸಿದ್ಧವಾದರೆ ಅದು ನಮ್ಮ ಕೋಟಿಗಟ್ಟಲೆ ಜನಗಳ ಬದುಕಿಗೆ ವಿನಾಶಕಾರಿಯಾಗುತ್ತದೆ. ಆದ್ದರಿಂದ ಅಭಿವೃದ್ಧಿಶೀಲ ದೇಶಗಳ ನಡುವೆ ಮೂಡಿರುವ ಒಟ್ಟಾರೆ ಒಮ್ಮತದ, ಭಾರತವೂ ಸೇರಿದಂತೆ ಹನ್ನೊಂದು ಅಭಿವೃದ್ಧಿಶೀಲ ದೇಶಗಳು ತಳೆದಿರುವ ನಿಲುವಿನ ಆಧಾರದಲ್ಲಿ ಮಾತ್ರವೇ ದೋಹಾ ಸುತ್ತಿನ ಮುಂದಿನ ಮಾತುಕತೆಗಳು ಸಾಧ್ಯ ಎಂದು ದೃಢವಾಗಿ ನಿಲುವು ತಳೆಯಬೇಕು ಎಂಬುದು ಭಾರತದ ಪ್ರಜಪ್ರಭುತ್ವವಾದಿ ಗಳೆಲ್ಲರ ಆಶಯ.

ಯಾವುದೇ ವ್ಯಾಪಾರ-ವ್ಯವಹಾರದಲ್ಲಿ ಕೊಡುವ-ಕೊಳ್ಳುವ ಅಂಶಗಳು ಇದ್ದೇ ಇರುತ್ತವೆ, ಭಾರತ ಹೀಗೆ ತನ್ನ ಪಾಲನ್ನು ಕೊಡಲು ಸಿದ್ಧ ಎಂದು ಪ್ರಧಾನ ಮಂತ್ರಿಗಳು ಅಮೆರಿಕಾದ ಅಧ್ಯಕ್ಷರಿಗೆ ಹೇಳಿದರಂತೆ. ಆದರೆ ನಮ್ಮ ಆತಂಕಗಳ ಬಗ್ಗೆ ಕಾಳಜಿ ವಹಿಸದಿರುವಾಗ ಕೇವಲ ನಮ್ಮ ಪಾಲನ್ನು 'ಕೊಡುವ' ಮಾತಾಡಿದರಷ್ಟೇ ಸಾಲದು, ನಮ್ಮ ಪಾಲನ್ನು 'ಪಡೆಯುವ' ಮಾತೂ ಇರಬೇಕು ಅಲ್ಲವೇ?.

‘ಕೆಲಸ ಕೊಡಾಕ ಆಗದಿದ್ರ ಒಂದು ಗುಟುಕು ವಿಷ ಕೊಡ್ರಿ’

ಉದ್ಯೋಗ ವಂಚಿತರ ಅಳಲು

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ನಮ್ಮ ಆಳುವ ಜನ ಜಾರಿ ಮಾಡುತ್ತಿರುವ ಪರಿ ಎಂಥದ್ದು ಅಂತಾ ಓದಿ ನೋಡಿ

ಮಲ್ಲಯ್ಯ ಜಾಲಹಳ್ಳಿ

‘ನೀನು ಮುದಿಕಿ ಆದಿ. ನಿನ್ನ ಕೆಲಸ ಸೀಗಾದಿಲ್ಲ. ಕೆಲಸ ಇಲ್ಲ ಹೋಗ್’ ಅಂತಾರ್ರಿ ಎಪ್ಪಾ. ಭಂಡ್ ಹೊಟ್ಟಿ ಕಟಗೊಂಡ್ ಎಲ್ಲಿ ಹೋಗಬೇಕ್ ನೀವ್ ಹೇಳ್ರಿ. ಈ ಭೂಮಿ ಮ್ಯಾಲ ಬಡವರು ಬದುಕ ಬಾರದಂದ್ರ ಒಂದು ಗುಟಕು ವಿಷಾ ಕೊಡ್ರಿ. ಶಿವಾ ಶಿವಾಂತ ಕಣ್ ಮುಚ್‌ತೀನ್ರಿ’.... ಇತ್ಯಾದಿ ಹೇಳುತ್ತಾ ಎದುರಿಗಿದ್ದ ಮುದುಕಿ ಕಣ್ಣೀರ ಸುರಿಸುತ್ತಾ ನಿಂತಿತ್ತು. ಆಕಿ ಅಳೋದು ನೋಡಿ ಮಲ್ಲಮ್ಮನ ಕಣ್ಣಾಗ ಸಹ ನೀರು ಬಂತು. ನನಗೆ ಅರಿವಿಲ್ಲದೆ ನನ್ನ ಕಣ್ಣುಗಳಿಂದ ನೀರು ತಂತಾನೆ ಹರಿದು ಹೋದವು.

ವಿಷಯ ಬದಲಿಸಬೇಕಂತ ಎದುರಿಗಿದ್ದ ಮಲ್ಲಮ್ಮನಿಗೆ ‘ನಿಮಗ 74 ರೂಪಾಯಿ ಕೋಡ್ತಾರಲ್ಲ ಸಾಕನಸ್ತದ’ ಎಂದು ಕೇಳಿದೆ. ಅದಕ್ಕಾಕೆ ‘ಕೆಲಸ ನೋಡಿದ್ರ ಭಕ್ಕಳ್ ತಗೋತಾರ್ರಿ. ಈ ಕೆಲಸಕ್ಕ ಕಡೀತ ಶಂಬರನ(ನೂರು ರೂಪಾಯಿ) ಕೊಡಬೇಕ್ರಿ’ ಎಂದಳು. ಅಷ್ಟರಲ್ಲಿ ಹೊತ್ತಾಯ್ತು ಬರ್ರಿ ಎಂದು ಸಂಗಾತಿಗಳು ಕೂಗಿದ್ದರಿಂದ ಜಾಗ ಖಾಲಿ ಮಾಡಬೇಕಾಯ್ತು.

ಈ ಘಟನೆ ನಡೆದದ್ದು 8-10-2007ರ ಮಧ್ಯಾಹ್ನದ ಹೊತ್ತಿನಲ್ಲಿ ಗುಲಬರ್ಗಾ ತಾಲ್ಲೂಕು ಶರಣ್‌ಶಿರಸಗಿ ಗ್ರಾಮದ ಹೊರವಲಯದಲ್ಲಿ ನಡೆಯುತ್ತಿದ್ದ ಉದ್ಯೋಗ ಖಾತ್ರಿ ಕಾಮಗಾರಿ ವೀಕ್ಷಿಸುತ್ತಿದ್ದ ಸಮಯದಲ್ಲಿ. ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಕೃಷಿ ಕೂಲಿಕಾರರ ಸಂಘ ಮತ್ತು ಉಕಾಸ ಒಕ್ಕೂಟ ಗುಲಬರ್ಗಾ ಜಂಟಿಯಾಗಿ ಏರ್ಪಡಿಸಿದ ಉದ್ಯೋಗ ಖಾತ್ರಿ ಯೋಜನೆ ಜಾರಿಗೆ ಸಂಬಂಧಿಸಿ ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮದ ಭಾಗವಾಗಿ ಹಮ್ಮಿಕೊಂಡಿದ್ದ ಪ್ರಾತ್ಯಕ್ಷಿಕೆ ಸಂದರ್ಭದಲ್ಲಿ.

ಎಲ್ಲೆಲ್ಲಾ ಗುಲ್ಬರ್ಗಾ ಕಾಲೋನಿ!

ಅತಿ ಹೆಚ್ಚಿನ ರೀತಿಯಲ್ಲಿ ಬಡತನ ಇರುವ ಹೈದ್ರಾಬಾದ್ ಕರ್ನಾಟಕ ಭಾಗದಲ್ಲೇ ಅತಿ ಹೆಚ್ಚು ಕೂಲಿಕಾರರಿರುವುದು. ಅತಿ ಹೆಚ್ಚು ವಲಸೆ ನಡೆಯುವುದು ಸಹ ಈ ಬೆಂಗಾಡಿನ ಜಿಲ್ಲೆಗಳಲ್ಲಿ. ಬೆಂಗಳೂರು, ಹೈದ್ರಾಬಾದ್, ಮುಂಬಾಯಿ, ಪುಣೆಗಳಲ್ಲಿ ಗುಲ್ಬರ್ಗಾ ಕಾಲೋನಿ ಹೆಸರು ಹೊಂದಿದ ಕೊಳಚೆ ಪ್ರದೇಶಗಳಿಗೆ ಹೋದರೆ ಅಲ್ಲಿ ಸಿಗುವುದು ಹೈದ್ರಾಬಾದ್ ಕರ್ನಾಟಕದ ಕೂಲಿಕಾರರೆ. ಹಸಿವಿನ ಸಾವುಗಳಿಗೆ ಹೆಸರುವಾಸಿಯಾದ ಈ ಪ್ರದೇಶದಲ್ಲಿ ಕೆಲವು ತಿಂಗಳುಗಳ ಹಿಂದೆ ಹಸಿವು ತಾಳದೆ ಇಡೀ ಕುಟುಂಬ ವಿಷ ಕುಡಿದು ಸಾಮೂಹಿಕವಾಗಿ ಸತ್ತದ್ದು ಮುಕ್ತರಾಂಪುರದಲ್ಲಿ. ಅದು ಬರುವುದು ಸಹ ಈ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲೇ. ದೇಶದಲ್ಲಿ ಹಸಿವಿನ ಸಾವುಗಳಾಗಕೂಡದು ಎಂಬ ದೃಢ ನಿಲುವಿನಿಂದ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಮತ್ತು ಅಖಿಲ ಭಾರತ ಕಿಸಾನ್ ಸಭಾ ಸಂಘಗಳು ಕಳೆದ ಹಲವು ವರ್ಷಗಳಿಂದ ಹೋರಾಡುತ್ತಾ ಬಂದಿವೆ.



ಈ ಹೋರಾಟಗಳನ್ನು ಬೆಂಬಲಿಸುತ್ತಾ ಬಂದಿರುವ ಎಡಪಕ್ಷಗಳು ಕಳೆದ ಲೋಕಸಭಾ ಚುನಾವಣೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಸ್ಥಾನಗಳನ್ನು ಗೆದ್ದವು. ಎಡಪಕ್ಷಗಳ ಬೆಂಬಲದಿಂದ ಮಾತ್ರ ಯುಪಿಎ ಅಧಿಕಾರದ ಗದ್ದುಗೆ ಏರಲು ಸಾಧ್ಯ ಎಂಬ ವಾತಾವರಣ ಉಂಟಾದಾಗ ಎಡಪಕ್ಷಗಳ ಒತ್ತಾಯದ ಮೇರೆಗೆ ‘ಸಾಮಾನ್ಯ ಕನಿಷ್ಠ ಕಾರ್ಯಕ್ರಮ’ದ ಅಂಶಗಳಲ್ಲಿ ‘ಉದ್ಯೋಗ ಖಾತ್ರಿ ಯೋಜನೆ’ ಸಹ ಸೇರಿದ್ದು. ಇಂಥದೊಂದು ಅಂಶ ತಮ್ಮ ‘ಸಾಮಾನ್ಯ ಕನಿಷ್ಠ ಕಾರ್ಯಕ್ರಮ’ ದಲ್ಲಿದೆ ಎಂಬುದನ್ನೇ ಮರೆತ ಕಾಂಗ್ರೆಸ್ ನಾಯಕರ ಕಿವಿ ಹಿಂಡಿ ಕಮ್ಯುನಿಸ್ಟ್‌ರು ಈ ಕಾಯ್ದೆ ಪಾಸು ಮಾಡಿಸಿದರು. ‘ಒಲ್ಲದ ಗಂಡನಿಗೆ ಮೃಷ್ಟಾನ್ನದಲ್ಲೂ ಅರಳು’ ಎಂಬಂತೆ ದೇಶದಲ್ಲಿರುವ 600ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಕೇವಲ 200 ಜಿಲ್ಲೆಗಳಲ್ಲಿ ಈ ಯೋಜನೆ ಜಾರಿ ಎಂದು ಘೋಷಿಸಿ 12,750 ಕೋಟಿ ಇದಕ್ಕಾಗಿ ಮೀಸಲು ಎಂದು ಘೋಷಿಸಿತು. ಭಾರತದ ಬಡವರ ಕೂಲಿ ಹೆಚ್ಚಾದರೆ ತನ್ನ ಸುಲಿಗೆಗೆ ಕೊರತೆ ಎಂದು ಭಾವಿಸಿದ ಅಮೇರಿಕದ ಹಿರಿಯಣ್ಣ ತನ್ನ ಜೂನಿಯರ್ ಪಾರ್ಟನರ್‌ಗಳಾದ ಕಾಂಗ್ರೆಸ್ಸಿಗೆ ಯೋಜನೆ ಬಗ್ಗೆ ಹೇಳಿ, ಆದರೆ ಜಾರಿ ಮಾಡಬೇಡಿ’ ಎಂದು ಕಿವಿಮಾತು ಹೇಳಿದ. ಅದಕ್ಕೊಪ್ಪಿದ ಕಾಂಗ್ರೆಸ್ ಅರೆಮನಸ್ಸಿನಿಂದ ಜಾರಿಗೆ ಹೊರಟಿತು. ಹೀಗಾಗಿ ಅಧಿಕಾರಿಗಳು ಯೋಜನೆಯ ಬಗ್ಗೆ ನಿರ್ಲಕ್ಷ್ಯ ತಾಳಿದರು. ಕಾನೂನು ಪಾಸಾದ್ರೂ ಜಾರಿಯಾಗಲಿಲ್ಲ. ಆದರೆ ಈ ಕಾನೂನು ಪಾಸಾಗುವುದನ್ನೇ ಕಾಯುತ್ತಿದ್ದ ರೈತ ಸಂಘ, ಕೂಲಿಕಾರರ ಸಂಘ, ಜನವಾದಿ ಮತ್ತು ಡಿವೈಎಫ್‌ಐಗಳು ಸುಮ್ಮನೆ ಕೂಡಲಿಲ್ಲ. ಬೀದರಿನ ದೇವಾನಂದ ಹೇಳುವಂತೆ ‘ಕೆಲಸ ಬೇಕು ಕೆಲಸ’ ಎಂಬ ಘೋಷಣೆಯ ಅಡಿಯಲ್ಲಿ ಬೀದರ್, ಗುಲ್ಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ಬೇಕಾದಷ್ಟು ಹೋರಾಟಗಳಾಗಿವೆ.

ನಿನಗೆ ವಯಸ್ಸಾಗಿದೆ ಕೆಲಸ ಇಲ್ಲೋಗ?

ಹೋರಾಡಿ ಕೆಲಸ ಗಿಟ್ಟಿಸಿ ಕೆಲಸದ ಜಾಗಕ್ಕೆ ಹೋದ್ರ ಕೆಲಸ ಕೊಡಬಾರದೆಂಬ ಆಲೋಚನೆಯಲ್ಲಿರುವ ಅಧಿಕಾರಿಗಳು 40-50 ವಯಸ್ಸಿನಲ್ಲಿರುವ ಮಹಿಳೆಯರಿಗೆ ‘ನಿನಗೆ ವಯಸ್ಸಾಗಿದೆ ಕೆಲಸ ಇಲ್ಲೋಗ’ ಅನ್ನುವುದು, ಇಂಥ ಸ್ಥಿತಿಯುಲ್ಲೇ ಶರಣ ಶಿರಸಿಗಿ ಗ್ರಾಮದ ಮುದಕಿ ನಮ್ಮ ಮುಂದೆ ಕಣ್ಣೀರು ಹಾಕಿ ಗೋಳು ಹೇಳಿಕೊಂಡದ್ದು. ಅದೇ ದಿನ ಬೆಳಿಗ್ಗೆ 25 ಜನರ ಒಂದು ಗುಂಪಿಗೆ ಸಹ ಕೆಲಸ ನಿರಾಕರಿಸಲಾಗಿತ್ತು. ಈ ಸುದ್ದಿ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಕಿವಿಗೆ ಬೀಳುತ್ತಲೇ ಅಲ್ಲಿದ್ದ ಅಧಿಕಾರಿಗಳನ್ನು ಕರೆದು ವಿಚಾರಿಸಿ ಸುದ್ದಿ ಸತ್ಯ ಎಂದು ಗೊತ್ತಾಗುತ್ತಲೇ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರಲ್ಲದೆ, ಇನ್ನೊಮ್ಮೆ ವಾಪಸ್ ಕಳಿಸಿದರೆ ಕ್ರಮ ಕೈಗೊಳ್ಳಬೇಕಾಗುತ್ತದೆಂದು ಎಚ್ಚರಿಸಿದರು.

ನನ್ನ ಪಕ್ಕದಲ್ಲಿದ್ದ ಚಿಂಚೋಳಿಯ ಕಾಂ:ಭೀಮಶೆಟ್ಟಿ ಎಂಪಳ್ಳಿ ‘ಈ ಅಧಿಕಾರಿಗಳೇ ಹಿಂಗ. ಅದಕ್ ನಾವು ಫಾರಂ ನಂಬರ್ 6 ತುಂಬ್ತಿವಿ. 15 ದಿವಸ ಕಾಯ್ತಿವಿ. ಕೆಲಸ ಕೊಡಲಿಲ್ಲಾಂದ್ರ ನಿರುದ್ಯೋಗ ಭತ್ಯೆ ಕೊಡ್ರಿ ಅಂತ ಹೋರಾಟಕ್ ಇಳಿತೀವಿ. ಆಗ ಈ ಕಳ್ಳರು ಉಲ್ಟಾ. ನಮ್ಮ ಕೈ ಕಾಲು ಹಿಡ್ಕಂಡ ಕೆಲಸ ಕೊಡ್ತಾರ’ ಎಂದು ತಮ್ಮ ಅನುಭವ ವಿವರಿಸಿದರು. ಅಧಿಕಾರಿಗಳು ಚಾಪೆ ಕೆಳಗೆ ತೂರಿದರೆ ನಮ್ಮ ಹೋರಾಟಗಾರರು ರಂಗೋಲಿ ಕೆಳಗೆ ತೂರುತ್ತಾರಲ್ಲ ಅಂತ ಅನಿಸಿ ಖುಷಿಯಾಯಿತು.

ಇಂಥ ವಿಶಿಷ್ಟ ಕಾಯ್ದೆಗೆ ಸಂಬಂಧಿಸಿ ರೈತ, ಕೂಲಿಕಾರರ ಮತ್ತು ಉಕಾಸ ಒಕ್ಕೂಟ ಹಮ್ಮಿಕೊಂಡ ತರಬೇತಿ ಶಿಬಿರವನ್ನು ಕೃಷಿ ಕೂಲಿಕಾರ ಸಂಘದ ರಾಜ್ಯ ಉಪಾಧ್ಯಕ್ಷರಾದ ಕಾಂ: ಜಿ.ಎನ್.ನಾಗರಾಜ್ ಉದ್ಘಾಟಿಸಿದರು. ಬ್ರಿಟಿಷರಿಂದ ಮುಕ್ತವಾದ ಭಾರತದಲ್ಲಿ ಬಡವರು ನೆಮ್ಮದಿಯಿಂದ ಬದುಕಬಹುದಾದ ಅವಕಾಶಗಳು ಬೇಕಾದಷ್ಟಿದ್ದವು. ಅದಕ್ಕಾಗಿಯೇ ಹಿಂದೆ ಎನ್.ಆರ್.ಇ.ಪಿ., ಆರ್‌ಎಲ್‌ಇಜಿಪಿ, ಕೂಲಿಗಾಗಿ ಕಾಳು, ಜವಾಹರ ರೋಜ್‌ಗಾರ್ ಯೋಜನೆ, ಸ್ವರ್ಣ ಜಯಂತಿ ರೋಜಗಾರ್ ಯೋಜನೆ ಹೀಗೆ ಏನೆಲ್ಲಾ ಬಂದರೂ ಸಹ ಅವುಗಳ ಅಧಿಕಾರಿಗಳ ಮತ್ತು ರಾಜಕೀಯ ಮುಖಂಡರ ಭ್ರಷ್ಟಾಚಾರಗಳಿಗೆ ಬಲಿಯಾದವು. ಅವರ ಭಂಡಾರ ತುಂಬಿದವು. ಇದು ಕೂಡ ಹಾಗಾಗಬಾರದೆಂದರೆ ನಾವೇ ಕೂಲಿಕಾರರಿಗೆ ತರಬೇತಿ ಕೊಟ್ಟು ಈ ಯೋಜನೆಯ ಲಾಭ ಪಡೆಯಲು ಹಚ್ಚಬೇಕು’ ಎಂದರು.

ಭೂಮಾಲಕರು ಬಿಡುವುದಿಲ್ಲ

‘ಉದ್ಯೋಗ ಖಾತ್ರಿ ಯೋಜನೆ ಜಾರಿ ಕಾಯ್ದೆ’ ಎಂಬ ವಿಷಯದ ಬಗ್ಗೆ ಮಾತನಾಡಿದ ಮಾನ್ಪಡೆಯವರು ‘ನಮ್ಮ ಗ್ರಾಮೀಣ ಭಾಗದಲ್ಲಿ ಕೂಲಿ ದರ 20-30 ಇದೆ. ಇಲ್ಲಿ 74 ರೂ ಕೂಲಿ ಸಿಗ್ತದೆ. ಹೀಗಾಗಿ ಕೂಲಿಕಾರರೆಲ್ಲ ಇದೆ ಕೆಲಸಕ್ಕೆ ಮುಂದಾಗುತ್ತಿದ್ದಾರೆ. ಭೂ ಮಾಲೀಕರ, ಶ್ರೀಮಂತ ರೈತರ ಹೊಲಗಳಲ್ಲಿ ದುಡಿಯಲು ಕೂಲಿಯಾಳುಗಳು ಸಿಕ್ಕುತ್ತಿಲ್ಲ. ಇವತ್ತು ಪಂಚಾಯತ್‌ಗಳು ಭೂ ಮಾಲಕರ, ಶ್ರೀಮಂತ ರೈತರ, ಲೇವಾದೇವಿಗಾರರ, ಗುತ್ತಿಗೆದಾರರ ಹಿಡಿತದಲ್ಲಿವೆ. ಹೀಗಾಗಿ ಅವರು ಈ ಯೋಜನೆ ಜಾರಿಯಾಗಲು ಬಿಡುತ್ತಿಲ್ಲ. ಹೀಗಾಗಿ ಈ ದುಷ್ಟ ಕೂಟದ ವಿರುದ್ಧ ಬಡ ಜನತೆ ಹೋರಾಟಕ್ಕೆ ಇಳಿಯಬೇಕಾಗಿದೆ.

ಕಳೆದ ವರ್ಷ ಕೂಲಿಕಾರರನ್ನು ಗುರುತಿಸಿ ಕರೆದು ಕೆಲಸ ಕೊಡಬೇಕೆಂದಿತ್ತು. ಆದರೆ ಈಗ ಕೂಲಿಕಾರರು ಕೇಳಿದರೆ ಮಾತ್ರ (ಅರ್ಜಿ ಹಾಕಿದರೆ ಮಾತ್ರ) ಕೆಲಸ ಕೊಡಬೇಕೆಂದು ಮಾರ್ಪಾಟು ಮಾಡಲಾಗಿದೆ. ಈ ಕುತಂತ್ರ ಅರಿತು ಕೆಲಸ ಪಡೆಯುವುದು ಕೂಡ ಒಂದು ದೊಡ್ಡ ಹೋರಾಟವೇ ಆಗಿದೆ. ಇದಕ್ಕೆ ಕೂಲಿಕಾರರನ್ನು ನಾವು ಸಿದ್ಧಗೊಳಿಸಬೇಕು’ ಎಂದರು.



ಸುಲಭಕ್ಕೆ ದಕ್ಕುವುದಿಲ್ಲ


ನಿರಂತರ 15 ದಿನ ಕೆಲಸ ಕೊಡಬೇಕು. ನೆರಳಿನ ವ್ಯವಸ್ಥೆ ಇರಬೇಕು. ಸ್ವಚ್ಛಕುಡಿಯುವ ನೀರನ್ನೇ ಒದಗಿಸಬೇಕು. ಕೆಲಸ ಮಾಡುವ ಹೆಣ್ಣು ಮಕ್ಕಳು, ಮಕ್ಕಳ ಸಹಿತ ಕೆಲಸಕ್ಕೆ ಬಂದಿದ್ದಲ್ಲಿ ಆ ಮಕ್ಕಳ ಸಂಖ್ಯೆ 5 ಅಥವಾ ಅದಕ್ಕಿಂತ ಹೆಚ್ಚಿದ್ದಲ್ಲಿ ಒಬ್ಬ ಕೂಲಿಕಾರ ಮಹಿಳೆ ಮಕ್ಕಳನ್ನು ನೋಡಿಕೊಳ್ಳಬೇಕು. ಆ ಮಕ್ಕಳಿಗಾಗಿ ಹಾಲು, ಹಣ್ಣು, ಬಿಸ್ಕತ್ ವ್ಯವಸ್ಥೆ ಮಾಡಬೇಕು. ಕೆಲಸ ಮಾಡುವಾಗ ಗಾಯ ವಾದರೆ ಚಿಕಿತ್ಸಾ ಸೌಲಭ್ಯ ಒದಗಿಸಬೇಕು. ಒಂದು ವೇಳೆ ಮಡಿದರೆ 25,000 ಪರಿಹಾರ ಕೊಡಬೇಕು ಇತ್ಯಾದಿ ಸೌಲಭ್ಯಗಳನ್ನು ಕಾನೂನಿನಲ್ಲಿ ಸೇರಿಸಲಾಗಿದೆ. ಆದರೆ ಇವಾವುದನ್ನು ಅಧಿಕಾರಿಗಳು ಸುಲಭವಾಗಿ ಒದಗಿಸುವುದಿಲ್ಲ. ಈ ಹಕ್ಕುಗಳನ್ನು ಪಡೆಯಲು ಸಹ ಹೋರಾಟ ಮಾಡಬೇಕಾಗುತ್ತದೆ ಎಂದರು.

ಕೆಲಸ ಮಾಡಿದ 15 ದಿನದೊಳಗಾಗಿ ಕೂಲಿ ಕೊಡಲೇಬೇಕು. ಆದರೆ ಕೊಡುತ್ತಿಲ್ಲ. ಕೂಲಿ ಪಡೆಯಲು ದೇವದುರ್ಗ ತಾಲ್ಲೂಕಿನಲ್ಲಾದಷ್ಟು ಹೋರಾಟಗಳು ಬೇರೆಲ್ಲೂ ಆಗಿರಲಿಕ್ಕಿಲ್ಲ. ಪರಿಸ್ಥಿತಿ ಅಷ್ಟು ಗಂಭೀರ ಆದ್ದರಿಂದ ಕೂಲಿ ಪಡೆಯಲು ಲೇಬರ್ ಆಫೀಸರಿಗೆ ದೂರು ದಾಖಲಿಸಬೇಕು. ಆಗ ಅವರು ಬಡ್ಡಿ ಸಹಿತ ಕೂಲಿ ಹಣ ಕೊಡಿಸುತ್ತಾರೆ ಎಂದರು.

ಮಾಡಲಾಗದ ಕೆಲಸ ಕೊಟ್ಟು...

‘ಉದ್ಯೋಗ ಖಾತ್ರಿ ಯೋಜನೆಯಲ್ಲಿ ಮಹಿಳೆಯರ ಪಾತ್ರ’ ಎಂಬ ವಿಷಯದ ಮೇಲೆ ಮಾತನಾಡಿದ ಜನವಾದಿ ಮಹಿಳಾ ಸಂಘಟನೆಯ ರಾಜ್ಯಾಧ್ಯಕ್ಷರಾದ ಕಾಂ:ಕೆ.ನೀಲಾರವರು ‘ಈ ಯೋಜನೆಯಲ್ಲಿ ಅತಿ ಹೆಚ್ಚು ದುಡಿಯುತ್ತಿರುವವರು ಮಹಿಳೆಯರು. ಆದರೆ ಮಹಿಳೆಯರಿಗೆ ಕೆಲಸ ಕೊಡದೆ ಅನ್ಯಾಯ ಮಾಡಲಾಗುತ್ತಿದೆ. ಗರ್ಭಿಣಿಯರಿಗೆ, ಸ್ವಲ್ಪ ವಯಸ್ಸಾದವರಿಗೆ ಕಠಿಣ ಕೆಲಸಕ್ಕೆ ಹಚ್ಚಿದರೆ ಮಾಡಲಾರರು. ಅಧಿಕಾರಿಗಳು ಈ ಅಂಶ ಬಳಸಿಕೊಂಡು ಮಹಿಳೆಯರಿಗೆ ಮಾಡಲಾಗದ ಕೆಲಸಗಳನ್ನು ಕೊಟ್ಟು ಪರೋಕ್ಷವಾಗಿ ಕೆಲಸ ನಿರಾಕರಿಸುತ್ತಿದ್ದಾರೆ. ಕೆಲಸದಲ್ಲಿ ಈಗ ಬಳಸುತ್ತಿರುವ

ಪುಟ 12 ಕ್ಕೆ



ಚೆ ಎಂಬ ಹೆಸರೇ ಒಂದು ರೋಮಾಂಚನಕಾರಿ ಸ್ಫೂರ್ತಿಯನ್ನು ಪ್ರತಿಬಿಂಬಿಸುವಂತಹದ್ದು. ಅಮೆರಿಕಾದ ಗೂಢಾಚಾರ ಸಂಸ್ಥೆ ಸಿಐಎ ಕೊಂದು ಹಾಕಿದ ಕ್ರಾಂತಿಕಾರಿಯ ಕುರಿತು ಒಂದು ನೆನಪು, ಅವಲೋಕನ ಇಲ್ಲಿದೆ.

ಕೆ.ಮಹಾಂತೇಶ್

ಚೆ ನಿನ್ನ ಮರೆತೆನೆಂದರೂ...... ಮರೆಯಲಿ ಹ್ಯಾಂಗ.....

ಅವನೊಬ್ಬ ಬ್ರಿಟಿಷ್ ಬಂಧೀಖಾನೆಯಲ್ಲಿ ಬಂಧಿಸಲ್ಪಟ್ಟಿದ್ದ ಖೈದಿ! ಆದರೆ, ಆ ಐರಿಶ್‌ನ ರಾಜಕೀಯ ಖೈದಿಗೆ ಬೇಕಾಗಿದ್ದು ಜೈಲಿನ ಸರಳುಗಳಿಂದ ಬಿಡುಗಡೆಯಲ್ಲ!

ಬದಲಾಗಿ 'ಚೆ' ಚಿತ್ರವಿರುವ ಟೀ ಶರ್ಟ್! ಇದು ನನಗೆ ಬೇಕೆಂದು ಅವನು ಜೈಲಾಧಿಕಾರಿಗೆ ಪತ್ರವನ್ನು ಬರೆದ. ಅವನ ಆಶೆ ಪೂರೈಸಲು 'ಚೆ' ನ ಪ್ರೀತಿಗೆ ಸೋತಿದ್ದ ಯುವಕರ ದಂಡೆ ಧಾವಿಸಿತ್ತು, ಸಾಲದೆಂಬಂತೆ 'ಚೆ' ಟೀ ಶರ್ಟ್ ಸಮೇತ ಜೈಲಿನತ್ತ ಮೆರವಣಿಗೆ ಕೂಡಾ ನಡೆಸಿತ್ತು! ಆದರೆ... 'ಚೆ' ಟೀ ಶರ್ಟ್ ಧರಿಸಬೇಕೆಂಬ ಆ ಖೈದಿಯ ಆಸೆ ಮಾತ್ರ ಈಡೇರಿಸಲಿಲ್ಲ. ಯಾಕೆಂದರೆ ಚೆ ಟೀ ಶರ್ಟ್‌ಯೆಂದರೆ ಅವಲ್ಲೊಂದು ರಾಜಕೀಯ ಸಂದೇಶವಿರುತ್ತದೆ ಎಂಬ ಕಾರಣದಿಂದ ಖೈದಿಗೆ ಅದನ್ನು ನೀಡಲು ನಿರಾಕರಿಸಿದರು ಜೈಲಾಧಿಕಾರಿಗಳು!

ಗೆಳೆತನದ ಪದಕ ಪಡೆಯಲು ಕ್ಯೂಬಾಕ್ಕೆ ಕಾಲಿಟ್ಟ ನೆಲ್ಸನ್ ಮಂಡೇಲಾ ಹೇಳಿದ್ದು, ಹೀಗೇ.... 'ಈ ಜಗತ್ತಿನ ಯಾವ ಬಂಧೀಖಾನೆಗಳಿಗೂ, ಸೆನ್ಸಾರ್‌ಶಿಪ್‌ಗಳಿಗೂ ಚೆಗುವಾರನನ್ನು ನಮ್ಮಿಂದ ಅಡಗಿಸಿಡಲು ಸಾಧ್ಯವಿಲ್ಲ'.

ಹೌದು! ಜಗತ್ತಿನ ಕೋಟ್ಯಾಂತರ ಜನರ ಮನಸ್ಸಿನಲ್ಲಿ ಅಚ್ಚೊತ್ತಿರುವ 'ಚೆ' ಎಂಬ ಮುದ್ರೆಯನ್ನು ಕಿತ್ತೊಗೆಯಲು 'ಸಾಮ್ರಾಜ್ಯಶಾಹಿ' ಗಳು ನಡೆಸಿದ ಕಿತಾಪತಿಗಳು ಒಂದೇ... ಎರಡೇ....

ಕಳೆದ ವರ್ಷವಷ್ಟೇ ಎಂ.ಟಿ.ವಿ. ನಡೆಸಿದ 'ಯೂಥ್ ಐಕಾನ್' ಕಾರ್ಯಕ್ರಮದಲ್ಲಿ ಚೆ ಪೋಸ್ಟರ್‌ಗೆ ಬೆಂಕಿ ಹಚ್ಚುವ ದೃಶ್ಯವನ್ನು ತೋರಿಸಲಾಯಿತು. ಆದರೆ ಬಲವಾದ ಪ್ರತಿಭಟನೆ ಎದುರಾದ ನಂತರ ಆ ದೃಶ್ಯವನ್ನು ನಂತರ ಕತ್ತರಿಸಲಾಯಿತು. ಅಂದರೆ ಆ ರೀತಿಯ ದೃಶ್ಯಗಳನ್ನು ಬಿತ್ತರಿಸುವ ಮೂಲಕ ಸಾಮ್ರಾಜ್ಯಶಾಹಿ ಕಪಿಮುಷ್ಠಿಯಲ್ಲಿರುವ ಆ ವಾಹಿನಿ 'ಚೆ' ಈಗ ಯುವಜನರ 'ಐಕಾನ್' ಅಲ್ಲ ಅಥವಾ 'ಚೆ' ಈಗ ಪ್ರಸ್ತುತವಿಲ್ಲ ಎನ್ನಲು ವಿಫಲ ಪ್ರಯತ್ನ ನಡೆಸಿತು. ಆದರೆ ನಮ್ಮಿಂದ ದೂರವಾಗಿ 40 ವರ್ಷ ಕಳೆದರೂ ಜಗದಗಲ ಇಂದೂ ಕೂಡ ನಡೆಯುತ್ತಿರುವ ಎಲ್ಲಾ ಕ್ರಾಂತಿಕಾರಿ ಚಳುವಳಿಗಳಿಗೆ ಚೆ ಸ್ಫೂರ್ತಿ ಆಗಿದ್ದಾರೆ.

ಭಾರತದ ಸಾಮ್ರಾಜ್ಯಶಾಹಿ ವಿರೋಧೀ ಹೋರಾಟಕ್ಕಂತೂ 2007 ನೇ ಈ ವರ್ಷ ಆದೊಂದು ನಮ್ಮ ಹೋರಾಟದ ಕೆಚ್ಚನ್ನು ಇಮ್ಮಡಿಗೊಳಿಸಿದ ವರ್ಷವೇ ಆಗಿದೆ.

1757ರಲ್ಲಿ ಬ್ರಿಟಿಷರ ವಿರುದ್ಧ ಆರಂಭಗೊಂಡ 'ಪ್ಲಾಸಿ' ಕದನಕ್ಕಿಂದು 250 ನೇ ವರ್ಷ. 1857ರಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯು ಬುಡವನ್ನೇ ಅಲುಗಾಡಿಸಿದ 'ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕಿಂದು 150 ನೇ ವರ್ಷಾಚರಣೆ. ತಾಯ್ನಾಡಿನ ವಿಮೋಚನೆಯ ಕನಸಿನೊಂದಿಗೆ ಭಾರತದ ಸ್ವಾತಂತ್ರ್ಯ ಚಳುವಳಿಗೆ ಕ್ರಾಂತಿಕಾರಿ ಸ್ವರೂಪ ನೀಡಿದ ಭಗತ್‌ಸಿಂಗ್ ಜನ್ಮಶತಮಾನೋತ್ಸವ ವರ್ಷ ಕೂಡ, ಮಾತ್ರವಲ್ಲ ಸಾಮ್ರಾಜ್ಯಶಾಹಿ ಎದುರಿನ ಮಿಂಚು, ಗುಡುಗು ಸಿಡಿಲಾಗಿ ಅಬ್ಬರಿಸಿ ಅಮೇರಿಕನ್ ಸಾಮ್ರಾಜ್ಯಶಾಹಿಗೆ ದುಃಸ್ವಪ್ನವಾಗಿ ಕಾಡಿದ 'ಚೆ' ಹುತಾತ್ಮರಾದ 40ನೇ ವರ್ಷಾಕೂಡ.


ಚೆ ಮತ್ತು ಭಗತ್‌ಸಿಂಗ್ - ದಾರಿ ಒಂದೇ

ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಮುಂಚೂಣಿ ನಾಯಕರೆನಿಸಿಕೊಂಡ ಚೆ ಮತ್ತು ಭಗತ್‌ಸಿಂಗ್ 20ನೇ ಶತಮಾನದ ಯುವಜನರ ಕಣ್ಮಣಿಯಾಗಿದ್ದರು ಎನ್ನುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಈ ಇಬ್ಬರೂ ಹೋರಾಟಗಾರರು ಸಾಮ್ರಾಜ್ಯಶಾಹಿಗಳ ವಿರುದ್ಧ ಸ್ವತಃ ಹೋರಾಟ ನಡೆಸಿದರು ಮಾತ್ರವಲ್ಲ ತಮ್ಮ ಯೌವ್ವನವನ್ನೇ ವಿಮೋಚನಾ ಚಳುವಳಿಗೆ ಧಾರೆಯೆರೆದು ಹುತಾತ್ಮರಾಗಿದ್ದು ಇಡೀ ಜಗತ್ತಿಗೆ ಗೊತ್ತಿರುವ ಸತ್ಯ.

ಕಳೆದ ಶತಮಾನ 20-30 ರ ದಶಕಗಳಲ್ಲಿ ವಿಶೇಷವಾಗಿ ಉತ್ತರ ಭಾರತದಾದ್ಯಂತ ಸುತ್ತಾಡಿ ತಾಯ್ನಾಡಿನ ವಿಮೋಚನೆಗಾಗಿ ಭಗತ್‌ಸಿಂಗ್ ಸಮಾಜವಾದಿ ಸ್ಥಾಪನೆಯ ಸೈನ್ಯ ಕಟ್ಟಿದರೆ ಲ್ಯಾಟೀನ್ ಅಮೇರಿಕಾವನ್ನೆಲ್ಲಾ ತಿರುಗಾಡಿ ಫಿಡಲ್ ಜತೆಗೂಡಿ ಹೋರಾಡಿ ಕ್ಯೂಬಾ ಕ್ರಾಂತಿ ಯಶಸ್ವಿಗೊಳಿಸಿ, ಅಮೇರಿಕನ್ ಸಾಮ್ರಾಜ್ಯ ಶಾಹಿಗೆ ವಿರುದ್ಧ ದುಃಸ್ವಪ್ನವಾಗಿ ಹೋರಾಡಿದವರು ಚೆ. ಹೀಗೆ ಚೆ ಮತ್ತು ಭಗತ್ ಸಿಂಗ್ ಇಬ್ಬರಲ್ಲೂ ಹಲವಾರು ಸಾಮ್ಯತೆಗಳಿವೆ. ಭಗತ್‌ಸಿಂಗ್ ಹುತಾತ್ಮರಾದದ್ದು ಕೇವಲ 24ರ ವಯಸ್ಸಿನಲ್ಲಿ. ಭಗತ್‌ಸಿಂಗ್ ನೇಣಿಗೇರಿದಾಗ 'ಚೆ' ಗೆ ಕೇವಲ ಮೂರರ ಪ್ರಾಯ ಮಾತ್ರ. 1967 ರಲ್ಲಿ ಸಿಯೇರಾ ಮಾಸ್ಟರಿನಾ ಕಾಡುಗಳ ಮಧ್ಯೆ ಅಮೇರಿಕಾದ ಸಿಐಎ ಏಜೆಂಟರು 'ಚೆ' ನನ್ನು ಕೊಂದಾಗ ಚೆ ಗೆ ಕೇವಲ 39 ವರ್ಷ ಮಾತ್ರ. ದೇಶದುದ್ದಗಲಕ್ಕೂ ಭಗತ್‌ಸಿಂಗ್ ಪರವಾದ ಅಲೆಯೆದ್ದಾಗ ಹೆದರಿದ ಬ್ರಿಟಿಷರು ಒಂದು ದಿನ ಮುಂಚಿತವಾಗಿಯೇ ಗಲ್ಲಿಗೇರಿಸಿ ಅವರ ಕುಟುಂಬದವರಿಗೂ ದೇಹಗಳನ್ನು ನೀಡದೇ ಸೆಟ್ಲೆಜ್ ನದಿ ತೀರದಲ್ಲಿ ಅರೆಬೆಂದ ಸ್ಥಿತಿಯಲ್ಲೇ ಎಸೆದು ಹೋಗಿದ್ದರು. ಹಾಗೆಯೇ 'ಚೆ' ಯನ್ನು ಕೊಂದ ಬಗ್ಗೆ 'ಚೆ' ಯನ್ನು ಹೂತು ಹಾಕಿದ್ದ. ಸ್ಥಳದ ಅಂತಹ ಸ್ಥಳಗಳು ಕ್ರಾಂತಿಕಾರಿ ಚಳುವಳಿಗೆ ಸ್ಫೂರ್ತಿಯಾಗಬಹುದೆಂಬ ಕಾರಣದಿಂದ ಸಿಐಎ ಏಜೆಂಟರು ಹತ್ತಾರು ವರ್ಷಗಳ ಕಾಲ ಗುಟ್ಟು ಬಿಟ್ಟಿರಲಿಲ್ಲ! ಎಂಬ ಸಂಗತಿಗಳು ಕೂಡ ಈಗ ಜಗಜ್ಜಾಹೀರು! ಹೀಗಾಗಿ ಒಂದೆಡೆ ಭಾರತದಲ್ಲಿ ಕ್ರಾಂತಿಕಾರಿ ಚಳುವಳಿಯ ವಾರಸುದಾರನಾಗಿ ಭಗತ್‌ಸಿಂಗ್ ನಮ್ಮದುರಿಗಿದ್ದಾರೆ. ಮತ್ತೊಂದೆಡೆ ಇಡೀ ಜಗತ್ತಿನಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಸ್ಫೂರ್ತಿಯ ಸೆಲೆಯಾಗಿ 'ಚೆ' ಜೊತೆಯಾಗಿದ್ದಾರೆ. ಆದ್ದರಿಂದಲೇ ಭಗತ್‌ಸಿಂಗ್ ಚೇ ಹುತಾತ್ಮರಾಗಿ ಹಲವು ದಶಕಗಳೇ ಕಳೆದರೂ, ಅವರ ವಿಚಾರಗಳಿಗೆ ಎಂದೂ ಸಾವು ಬಂದಿಲ್ಲ. ಅವರು ನಡೆಸಿದ ಚಳುವಳಿಗಳೂ ಎಂದೂ ಕ್ಷೀಣಿಸಿಲ್ಲ. ನಿಜ ಹೇಳಬೇಕೆಂದರೆ ಅವರು ನಡೆಸಿದ ಚಳುವಳಿ ಅವರು ಮಾಡಿದ ಬಲಿದಾನ ದಿನೇ ದಿನೇ ಯುವಜನರ ಮನಸ್ಸಿನಲ್ಲಿ ಮತ್ತಷ್ಟು ಗಾಢವಾಗುತ್ತಿವೆ. ಸಾಮ್ರಾಜ್ಯಶಾಹಿ ಶಕ್ತಿಗಳು ಬಂಡವಾಳಶಾಹಿ ಆಳುವ ವರ್ಗಗಳು ಇಂತಹ ಹೋರಾಟಗಾರರ ಬಗ್ಗೆ ಎಷ್ಟೆಲ್ಲಾ ಅಪಪ್ರಚಾರ ನಡೆಸಿದರೂ, ನಡೆಸುತ್ತಿದ್ದರೂ ಅವರ ಜನಪ್ರಿಯತೆ ಕಿಂಚಿತ್ತೂ ಚ್ಯುತಿಯಾಗಿಲ್ಲ. ಬದಲಾಗಿ ಭಗತ್‌ಸಿಂಗ್ ಕುರಿತಾಗಿ ಹಲವಾರು ಹಿಂದಿ ಇಂಗ್ಲೀಷ್ ಸಿನಿಮಾಗಳು, ಸಾಕ್ಷ್ಯಚಿತ್ರಗಳು, ಪುಸ್ತಕಗಳು, ಪೋಸ್ಟರ್‌ಗಳು, ಅವರು ಹುತಾತ್ಮರಾದ 75 ವರ್ಷಗಳ ಬಳಿಕವೂ ಪ್ರಕಟಗೊಳ್ಳುತ್ತಿವೆ. ಇನ್ನು 'ಚೆ' ಬಗ್ಗೆಯಂತೂ ಹೇಳುವುದಕ್ಕೇನಿದೆ. ಜಗತ್ ಪ್ರಸಿದ್ಧ ಅರ್ಜೆಂಟೈನಾದ ಪುಟ್ಬಾಲ್ ಆಟಗಾರ ಮರಡೋನ ತನ್ನ ತೊಡೆ, ಭುಜದ ಮೇಲೆ 'ಚೆ'ಯ ಹಚ್ಚೆಯನ್ನು ಹಾಕಿಸಿಕೊಂಡ ಹೆಮ್ಮೆಯಿಂದ ಬೀಗುತ್ತಿರುವುದು, ಜಗದಗಲ ಬಳಸಲ್ಪಡುವ ಟೀ ಶರ್ಟ್, ಕೀ ಬಂಚ್‌ಗಳಲ್ಲಿ, ಪೋಸ್ಟರ್‌ಗಳಲ್ಲಿ ಟೋಪಿಗಳಲ್ಲಿ 'ಚೆ' ಇನ್ನೂ ಜೀವಂತವಾಗಿದ್ದಾರೆ. ಆಧುನಿಕ ಜಗತ್ತಿನಲ್ಲಿ ಬಳಕೆಯಲ್ಲಿರುವ ಇಂಟರ್‌ನೆಟ್ ವೆಬ್‌ಸೈಟ್‌ಗಳಲ್ಲಿ 'ಚೆ' ಯನ್ನು ಹಿಂದಿಕ್ಕಿದವರೂ ಯಾರಿದ್ದಾರೆ?.

ಹೀಗೆ, ಲ್ಯಾಟೀನ್ ಅಮೇರಿಕಾದ ಪಾಪ್ ಸಂಗೀತಗಾರರೊಳಗೊಬ್ಬನಾಗಿ, ಪುಟ್ಬಾಲ್ ಆಟಗಾರ ಒದೆಯುವ ಕಾಲ್ಚೆಂಡಿನ ಪ್ರತೀಕವಾಗಿ, ಕಬ್ಬಿನ ಗದ್ದೆಯಲ್ಲಿ ಕಬ್ಬು ಕತ್ತರಿಸುವ ಶ್ರಮ ಜೀವಿಯಾಗಿ, ಕುಷ್ಟರೋಗಿಗಳ ನೋವನ್ನು ಮರೆಸುವ ವೈದ್ಯನಾಗಿ, ಜನರ ಸಂಕಷ್ಟಗಳಿಗೆ ಜೀವ ತುಂಬುವ ಒಬ್ಬ ಬರಹಗಾರನಾಗಿ, ಪತ್ರಕರ್ತನಾಗಿ, ಅನ್ಯಾಯದ ವಿರುದ್ಧ ಹೋರಾಡುವವರಿಗೆ ಸದಾ ಸ್ಫೂರ್ತಿಯ ಯೋಧವಾಗಿ ಅಷ್ಟೇಕೇ? ರಂಗದ ಮೇಲೆ, ತೆರೆಯಮೇಲೆ ಅಭಿನಯಿಸುವವರಿಗೆ ಸ್ಫೂರ್ತಿಯ, ನಾಟಕ, ಕಾವ್ಯವಾಗಿ 'ಚೆ' ಇಂದು ಎಂದೆಂದಿಗೂ ಜಗದಗಲ ಇರುತ್ತಾರೆ. ಯಾಕೆಂದರೆ ಅಂದು ನೆಲ್ಸನ್ ಮಂಡೇಲಾ ಹೇಳಿದಂತೆ 'ಚೆ' ಯನ್ನು ಬಂಧಿಸಿಡಲು ಜಗತ್ತಿನ ಯಾವ ಬಂಧೀಖಾನೆಗಳಿಂದಲೂ ಸಾಧ್ಯವಿಲ್ಲ.

ಹೀಗಾಗಿ, ಸುಲಿಗೆಕೋರ ಶಕ್ತಿಗಳ ವಿರುದ್ಧ ಜನತೆಯ 'ವಿಜಯಕ್ಕೋಸ್ಕರ ಹೋರಾಡಿದ' (ಹಸ್ತಲಾ ವಿಕ್ಟೋರಿಯಾ ಸಿಂಪ್ರೆ) 'ಚೆ' ಈಗಲೂ ಜಗತ್ತಿನೆಲ್ಲೆಡೆ ಎಲ್ಲೆಲ್ಲಾ ವಿಮೋಚನಾ ಹೋರಾಟಗಳು ನಡೆಯುತ್ತಿವೆಯೋ ಅಲ್ಲೆಲ್ಲಾ ಜೀವಂತ ಇದ್ದೇ ಇರುತ್ತಾರೆ. ○



ಚೆಗುವಾರ ಕಾವ್ಯ

ನಿನ್ನ ಏನೆಂದು ನೆನೆಯಾಲಿ
ಚೆ, ನಿನ್ನ ಏನೆಂದು ನೆನೆಯಾಲಿ!
ಹುಟ್ಟುತ್ತಲೇ ಅಸ್ತಮವನಂಟಿಕೊಂಡರೂ
ಊರೂರು ಸುತ್ತುವ
ಅಲೆಮಾರಿಯೆಂದೇ!

ಜಗದಗಲ ನಡೆಯುವ ಅನ್ಯಾಯದ
ವಿರುದ್ಧ ಸದಾ ಬಂದೂಕನೊತ್ತು
ಹೋರಾಡುವ ಯೋಧನೆಂದೋ!

ಕ್ರಾಂತಿಯ ಕನಸಿನೊಂದಿಗೆ
ಕಾಲ್ಚೆಂಡಾಟ ಹೇಳಿಕೊಡುವ
ಪುಟ್ಬಾಲ್ ಆಟಗಾರನೆಂದೇ!
ದೇಶ ಸುತ್ತುವುದು
ಸಾಕಾದಾಗ ಕಬ್ಬಿನ ಗದ್ದೆ
ಗಳಿಗೆ ನುಗ್ಗಿ ದಣಿವರಿಯ
ದಂತೆ ದುಡಿಯುವ
ಶ್ರಮಿಕನೆಂದೇ !


ಅಥವಾ....
ಸಿಯೆರ್ರಾ ಮೇಸ್ತ್ರಾರಿನ
ದಟ್ಟಾರಣ್ಯಗಳಲ್ಲಿ ಬಂದೂಕಿನ
ನಳಿಕೆಯ ತುದಿಯಲ್ಲೂ
ಕಾವ್ಯ ಓದುವ ಕವಿಯೆಂದೇ!

ಏನೆಂದು ನೆನೆಯಲಿ
ಚೆ ಗುವಾರ.... ನಿನ್ನ
ಏನೆಂದು ನೆನಯಾಲಿ?

ಕೆ.ಮಹಾಂತೇಶ್









ಪಿಸುಮಾತು ಬಹುದೂರ ಕೇಳುತ್ತೆ

- ಚೀನಿ ಗಾದೆ

ಅವರ ಕವಾಯಿತಿನಲ್ಲಿ ಅದೆಂಥ ರೋಷ, ಆವೇಶ, ಉನ್ಮಾದ ಪರಸ್ಪರ ಕಾಲು ಎತ್ತಿ ಒದೆಯುವಂತೆ ತೋರಿಸುವ ಶೈಲಿ ಇರುತ್ತದೆ ಎಂದರೆ ಶತಮಾನಗಳ ವೈರುತ್ವವೇ ಜಮೆಗಟ್ಟಿ ನಿಂತಿರುವಂತೆ ಹುಸಿ ದೇಶಭಕ್ತಿಯ ಅಮಲು ಅಲ್ಲೆಲ್ಲ ಮದೋನ್ಮತ್ತವಾಗಿ ಪಸರಿಸಿದಂತೆ ಭಾಸವಾಗುತ್ತಿರುತ್ತದೆ.

ಹೃದಯಕ್ಕೆಯಾವ ಸರಹದ್ದು ?

ರಾಜ್ಯ, ದೇಶ, ಭಾಷೆ, ಧರ್ಮಗಳಿಗೆ ಸೀಮೆ, ಸರಹದ್ದು ಇದ್ದಾತು. ಆದರೆ ಈ ಎಲ್ಲವುಗಳ ಅಸ್ತಿತ್ವದಾಚೆ ಇರುವ ಪ್ರೀತಿಗೆ, ಪ್ರೀತಿಯ ಜಲವ ಸುರಿಸುವ ಹೃದಯಕ್ಕೆ, ಕೋಮಲ ಮಾನವಾಂತಃಕರುಣೆಗೆ ಯಾವ ಸರಹದ್ದು ಇರಲಿಕ್ಕೆ ಸಾಧ್ಯ? ಹೇಳಿ. ಹೀಗನಿಸಿದ್ದು ಮೊನ್ನೆ ಹಸಿರು ತೊಟ್ಟಿಲು ನಾಡಾದ ಪಂಜಾಬಿಗೆ ಹೋದಾಗ. ಮೊನ್ನೆ ಹದಿನೈದು ದಿನಗಳ ಹಿಂದೆ ಖಾಸಗಿ ಕೆಲಸಕ್ಕಾಗಿ ಮನೆ ಮಂದಿಯೊಟ್ಟಿಗೆ 'ಪಂಜಾಬಿ' ರಾಜ್ಯಕ್ಕೆ ಹೋಗಿದ್ದಾಗಿತ್ತು. ಪಂಜಾಬ ಇಡೀ, ರಾಜ್ಯವೇ ಹಸಿರುಡುಗೆ ತೊಟ್ಟ ಹದಿಹರೆಯದ ಕಿಶೋರಿ ಕಂಗಳ ಕನ್ಯೆಯಂತೆ ಮೈನವಿರೇಳಿಸುತ್ತಿತ್ತು. ಪಂಜಾಬ, ಹರಿಯಾಣ ಅಕ್ಕಪಕ್ಕದ ರಾಜ್ಯಗಳಷ್ಟೇ ಅಲ್ಲ. ಅಪರೂಪದ ಅವಳಿ ಸಹೋದರಿಯರಂತೆ ಒಬ್ಬರಿಗೊಬ್ಬರು ಹಸಿರ ಪಚ್ಚೆ ಪೈರುಗಳಲ್ಲಿ ಪರಸ್ಪರ ಸ್ಪರ್ಧೆಗಿಳಿದಂತೆ ಎಲ್ಲೆಲ್ಲೂ ಗೋಧಿ, ಸಾಸಿವೆ ಬೆಳೆಗಳು ರಾರಾಜಿಸುತ್ತಿದ್ದವು. ನಮ್ಮ ಮಲೆ ಪರ್ವತ ರಾಜಿ ಸಹ್ಯಾದ್ರಿಯ ಹಸಿರಿನ ಬೆಡಗಿಯಾದರೂ ನಮ್ಮ ಹಸಿರಿನ ವೈವಿಧ್ಯಮಯ ಕ್ರಾಂತಿಯೇ ಬೇರೆ. ಪಂಜಾಬ, ಹರಿಯಾಣಗಳ ಉದ್ದೋನು ಉದ್ದ ವಿಶಾಲ ಹರನಿನಲ್ಲಿ ನೀಟಾಗಿ ನಿಂತ ಕಲಬೆರಕೆ ಇಲ್ಲದ ಹಸಿರೇ ಬೇರೆ. ಪಂಜಾಬ, ಹರಿಯಾಣ ಅವಳಿ ರಾಜ್ಯಗಳ ಎರಿಳಿತಗಳಿಲ್ಲದ ವಿಶಾಲ ಬಯಲು ಭೂಮಿಯಲ್ಲಿ ಎತ್ತ ನೋಡಿದರತ್ತ ದೃಷ್ಟಿ ಹರಿಸಿದಷ್ಟು ದೂರ ಕ್ಷಿತಿಜವೇ ಅರಿವಿಗೆ ಬರದಷ್ಟು ವಿಸ್ತಾರವಾಗಿ ಏಕತಾನತೆ ಎನಿಸುವಷ್ಟು ಹಸಿರು ಚೆಲ್ಲುವರಿದಿದೆ. ಅಲ್ಲಿ ಬಂಜರು ಅಥವಾ ಬರಡು ಎಂಬ ತುಂಡು ನೆಲವೂ ಕಾಣಸಿಗಲಿಲ್ಲ. ಇದಕ್ಕಾಗಿಯೇ ಇರಬೇಕು. ಇವತ್ತಿಗೂ ಕೃಷಿ ಉತ್ಪನ್ನದಲ್ಲಿ ಪಂಜಾಬ, ಹರಿಯಾಣಗಳು ದೇಶದಲ್ಲಿಯೇ ಪ್ರಥಮ ಸ್ಥಾನದಲ್ಲಿವೆ. ಇಡೀ ದೇಶಕ್ಕೆ ಸಾಕಾಗಿ ವಿದೇಶಗಳಿಗೂ ರಫ್ತು ಮಾಡುವಷ್ಟು ಉತ್ತಮ ತಳಿಯ ಗೋಧಿಯನ್ನು ಈ ಎರಡೇ ರಾಜ್ಯಗಳು ಬೆಳೆದುಕೊಡುತ್ತಿವೆ.

ತುಪ್ಪವನ್ನು ಯಜ್ಞಕ್ಕೆ ಕೊಟ್ಟು ಬೆಣ್ಣೆ ಬೇಡುವುದು

ಆದರೆ ಇತ್ತೀಚಿಗಿನ ಮುಕ್ತ ಮಾರುಕಟ್ಟೆಯ ಹಾವಳಿಯಲ್ಲಿ ದೇಶೀಯ ಉತ್ಪನ್ನ ಮೂಲೆಗುಂಪಾಗುತ್ತಿರುವಾಗ ಅದರ ಸೆಕೆ ಗೋಧಿಗೂ ಬಡಿದದ್ದು ಕಾಕತಾಳೀಯವೇನಲ್ಲ, ಇಂದು ಜಾಗತಿಕ ವ್ಯಾಪಾರೀಕಣದ ಸಂದರ್ಭದ ದುಷ್ಟ ಹುನ್ನಾರುಗಳ ಪರಿಣಾಮವಾಗಿ ಪಂಜಾಬ, ಹರಿಯಾಣಗಳು ಗೋಧಿ ಬೆಳೆಯ ಮೇಲೆ, ತಮ್ಮ ಸ್ವಾಯತ್ತತೆ ಮತ್ತು ದೇಶಿ ಸ್ವಾಮ್ಯವನ್ನು ಕಳೆದುಕೊಂಡಿವೆ. ಇನ್ನೊಂದೆಡೆ ಜನವಿರೋಧಿ ಕೇಂದ್ರ ಸರ್ಕಾರದ ಹೊರಗಿನಿಂದ ಗೋಧಿ ಆಮದು ಮಾಡಿಕೊಳ್ಳಲು ತುದಿಗಾಲ ಮೇಲೆ ನಿಂತಿದೆ. ಮನೆಯಲ್ಲಿರುವ ತುಪ್ಪವನ್ನು ಜಾಗತೀಕರಣದ ಯಜ್ಞಕ್ಕೆ, ಸುರಿದು ಔಷಧಕ್ಕಾಗಿ ನೆರೆಮನೆಯಿಂದ ಬೆಣ್ಣೆ ಬೇಡುವ ಇದೆಂಥ ದರಿದ್ರ ದಯನೀಯ ಸ್ಥಿತಿ ಅಲ್ಲವೇ?

ಒಂದು ಗೆರೆ ಕೊರೆದು

ಹೀಗೆಂದು ಯೋಚನೆ ಹರಿಸುತ್ತಲೇ ಅಮೃತಸರದ ಸ್ವರ್ಣ ಮಂದಿರ, ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಮುಂತಾದ ಪ್ರೇಕ್ಷಣೀಯ ಸ್ಥಳಗಳನ್ನು ನೋಡುತ್ತಾ ಸಾಯಂಕಾಲದ ಹೊತ್ತಿಗೆ ಪಾಕಿಸ್ಥಾನ ಭಾರತಗಳ ಗಡಿ ಸೀಮೆ 'ವಾಘಾ' ಎಂಬಲ್ಲಿಗೆ ಬಂದೆವು. ಹಲವಾರು ಐತಿಹಾಸಿಕ ಘಟನೆಗಳಿಗೆ ಸಾಕ್ಷಿಯಂತಿರುವ ವಾಘಾ ಬಾರ್ಡರ್ ಇತ್ತೀಚೆಗೆ ಪ್ರವಾಸಿ ತಾಣವಾಗಿ ಅಭಿವೃದ್ಧಿ ಪಡಿಸುತ್ತಿರುವ ಹಿನ್ನೆಲೆಯೂ ನಮ್ಮನ್ನು ಚಕಿತರಾಗುವಂತೆ ಮಾಡಿತು. ಸ್ವಾತಂತ್ರ್ಯ ಪೂರ್ವದಲ್ಲಿಯೇ ಕೊಲ್ಕತ್ತಾದಿಂದ ಪೇಶಾವರದವರೆಗೆ ನಿರ್ಮಿಸಲಾದ ರಹದಾರಿಯಲ್ಲಿರುವುದೇ ವಾಘಾ ಎಂಬ ಹಳ್ಳಿ. ಭಾರತ ಪಾಕಿಸ್ಥಾನಗಳೆಂಬ ಎರಡು ದೇಶಗಳು ವಿದ್ಯುಕ್ತವಾಗಿ ವಿಭಜನೆಯಾದ ಸಂದರ್ಭದಲ್ಲಿ ವಾಘಾ ಎಂಬ ಈ ರಸ್ತೆಗೆ ಅಡ್ಡಲಾಗಿ ಒಂದು ಗೆರೆ ಕೊರೆದು ಎರಡು ಗಡಿಗಳನ್ನು ನಿರ್ಮಿಸಲಾಯಿತು. ಉದ್ದದ ಒಂದೇ ಒಂದು ರಸ್ತೆಯ ನಡುವೆ ಒಂದು ಗೆರೆ ಕೊರೆದು ಎರಡು ದೇಶಗಳೆಂದು ಹೇಳಿ ಅವರೆಡನ್ನು ಭೌಗೋಳಿಕವಾಗಿ ಬೇರ್ಪಡಿಸುವುದು ಅದೆಂಥ ಕಷ್ಟದ ಕೆಲಸ ಮತ್ತು ಅದೆಷ್ಟು ಆತಂಕ, ಅವಾಂತರ, ಅವಘಡಗಳನ್ನು ಸೃಷ್ಟಿಸಬಲ್ಲದು ಎಂಬುದಕ್ಕೆ ವಾಘಾ ಬಾರ್ಡರ್ ಇವತ್ತಿಗೂ ಸಾಕ್ಷಿ ರೂಪದಲ್ಲಿ ಅಣಕಿಸುತ್ತಿದೆ.

'ಕವಾಯತು'ಎಂಬ ಸಮೂಹ ಸನ್ನಿ

ಇಂದು ವಾಘಾ ಬಾರ್ಡರಿನಲ್ಲಿ ಪ್ರತಿದಿನವು ಮುಂಜಾನೆ ಸೂರ್ಯೋಧಯ ಮತ್ತು ಸೂರ್ಯ ಮುಳುಗುವ ಹೊತ್ತಲ್ಲಿ ಎರಡು ಕಡೆ ಮಿಲ್ಟ್ರಿ ಕಮಾಂಡೋಗಳಿಂದ ಔಪಚಾರಿಕ ಕವಾಯತು ಮತ್ತು ಧ್ವಜಾರೋಹಣ, ಧ್ವಜಾವರೋಹಣ ನಡೆಯುತ್ತಿವೆ. ಈ ಮೊದಲು ಬಾರ್ಡರ್ ಸೆಕ್ಯೂರಿಟಿ ಕಮಾಂಡೋಗಳಿಂದ ಕೇವಲ ಸಾಂಕೇತಿಕವಾಗಿ ನಡೆಯುತ್ತಿದ್ದ ಈ ಪ್ರಕ್ರಿಯೆ ಈಗ ಹತ್ತು ವರ್ಷಗಳಿಂದ ವಿಶೇಷ ಆಯಾಮ ಪಡೆದುಕೊಳ್ಳುತ್ತಿದೆ ಎಂದು ಸ್ಥಳೀಯರ ಹೇಳಿಕೆಯಾಗಿದೆ. ಅಟಲ್ ಬಿಹಾರಿ ವಾಜಪೇಯಿ ಸರ್ಕಾರ ಲಾಹೋರಿಗೆ ಬಸ್ ಸಂಪರ್ಕವನ್ನು ಪ್ರಾರಂಭ ಮಾಡಿದ ದಿನದಿಂದಲೇ ಈ ಪರಿಯ ವಿಶೇಷ ಕವಾಯತು ಪ್ರಾರಂಭವಾಗಿದೆಯಂತೆ.



ಸ್ವರ್ಣ ಮಂದಿರದಿಂದ ಕೇವಲ 25 ಕಿ.ಮೀ. ಅಂತರದಲ್ಲಿರುವ ಈ ವಾಘಾ ಬಾರ್ಡರಿನಲ್ಲಿ ಇಂದು ಪ್ರತಿನಿತ್ಯ 30 ನಿಮಿಷಗಳ ಒಂದು ಆವೇಶಭರಿತ ಕವಾಯತು ರೂಪದ ನಾಟಕ ನಡೆಯುತ್ತದೆ. ಸಾಯಂಕಾಲ ಸರಿಯಾಗಿ 6 ಗಂಟೆಗೆ ಎರಡು ಕಡೆ ಏಕಕಾಲಕ್ಕೆ ಆಯಾ ದೇಶದ ಕಮಾಂಡೋಗಳು ಪರಸ್ಪರ ಅಭಿಮುಖರಾಗಿ ಮಾರ್ಚ್‌ಫಾಸ್ಟ್ ಮಾಡುತ್ತಾ ಬರುತ್ತಾರೆ. ಅವರ ಕವಾಯಿತಿನಲ್ಲಿ ಅದೆಂಥ ರೋಷ, ಆವೇಶ, ಉನ್ಮಾದ ಪರಸ್ಪರ ಕಾಲು ಎತ್ತಿ ಒದೆಯುವಂತೆ ತೋರಿಸುವ ಶೈಲಿ ಇರುತ್ತದೆ ಎಂದರೆ ಶತಮಾನಗಳ ವೈರುತ್ವವೇ ಜಮೆಗಟ್ಟಿ ನಿಂತಿರುವಂತೆ ಹುಸಿ ದೇಶಭಕ್ತಿಯ ಅಮಲು ಅಲ್ಲೆಲ್ಲ ಮದೋನ್ಮತ್ತವಾಗಿ ಪಸರಿಸಿದಂತೆ ಭಾಸವಾಗುತ್ತಿರುತ್ತದೆ. ತುಂಬಾ ಜೋರಾಗಿ ಮತ್ತು ಅಷ್ಟೇ ಬಿರುಸಿನಿಂದ ನಡೆಯುವ ಕಮಾಂಡೋಗಳು ಗಡಿಭಾಗದ ಗೇಟುಗಳನ್ನು ನಾಟಕೀಯ ರೀತಿಯಲ್ಲಿ ತುಂಬಾ ರಭಸವಾಗಿ ತೆರೆಯುತ್ತಾರೆ. ಎರಡು ದೇಶದ ರಾಷ್ಟ್ರಗೀತೆಗಳು ಆಯಾ ಸರಹದ್ದಿನಲ್ಲಿ ಮೊಳಗುತ್ತಿರುವಂತೆ ರಾಷ್ಟ್ರಧ್ವಜಗಳಿಗೆ ಸಲಾಮಿ ನೀಡಿ ಇಳಿಸಲಾಗುತ್ತದೆ. ಒಂದು ಗೇಣು ಅಂತರದಲ್ಲಿಯೇ ಎರಡೂ ದೇಶದ ಕಮಾಂಡೋಗಳು ಕಾಲುಗಳನ್ನು ಎತ್ತುತ್ತ ಇಳಿಯುತ್ತ ತುಂಬಾ ಆವೇಶದಿಂದಲೇ ಕೈ ಮಿಲಾಯಿಸುತ್ತಾರೆ. ಅದೆಷ್ಟು ಔಪಚಾರಿಕತೆ. ಅದೆಂಥ ಕೃತ್ರಿಮತೆ. ಪರಸ್ಪರ ಪ್ರೀತಿ, ಸೌಹಾರ್ದತೆ, ಸೂಚಿಸಲೆಂದೂ ನಡೆಸಲಾಗುವ ಈ ಕವಾಯತು ಇಂದು ಪಡೆದುಕೊಂಡಿರುವ ರೀತಿ ಯಾರಿಗಾದರೂ ಗಾಬರಿ ಹುಟ್ಟಿಸದೆ ಇರಲಾರದು.

ಕೈ ಕೈ ಮಿಲಾಯಿಸುವ ಪರಿ

ಪರಸ್ಪರ ಕೈ ಮಿಲಾಯಿಸುವ, ಉಸಿರು ಕಟ್ಟಿಸುವ, ಅತ್ಯಂತ ಪರಿಶ್ರಮದಾಯಕ ಆ ಕವಾಯಿತಿನಲ್ಲಿ ಯಾವ ಸಾರ್ಥಕವಿದೆಯೋ ಗೊತ್ತಿಲ್ಲ. ಕಮಾಂಡೋಗಳ ಆ ಕಣ್ಣುಗಳಲ್ಲಿ ಪರಸ್ಪರ ಪ್ರೀತಿ ಇತ್ತೇ? ಒಲವು, ದೋಸ್ತಿ, ಸಹಕಾರ ಹೋಗಲಿ ಒಂದು ಒಪ್ಪಂದ ಏನಾದರೂ ಇತ್ತೇ? ಇಲ್ಲಿಲ್ಲ. ಅಂಥದ್ದೇನೂ ಅಲ್ಲಿ ಇರಲೇ ಇಲ್ಲ. ಇದ್ದಿರಬಹುದಾದರೂ ಅದು ಅನುಭವಕ್ಕೆ ಬರುವಂತಿರಲಿಲ್ಲ. ಏಕೆಂದರೆ ಎರಡು ದೇಶದ ವಿಶಾಲ ವೇದಿಕೆ ಮೇಲೆ ನೆರೆದಿದ್ದ ಸಾವಿರಾರು ಪ್ರವಾಸಿಗರು ತಮ್ಮ ತಮ್ಮ ದೇಶಕ್ಕೆ ಜಯಕಾರ ಹೇಳುತ್ತಿದ್ದರೆ ಅದೊಂದು ಯುದ್ಧ ಘೋಷಣೆಯ ಬ್ರಾಂತಿ ಹುಟ್ಟಿಸುತ್ತಿತ್ತು. ಪ್ರವಾಸಿಗರಾಗಿ ಬಂದ ಭಾರತೀಯರು ವಂದೇ ಮಾತರಂ, ಬೋಲೋ ಭಾರತ ಮಾತಾಕೀ ಜೈ, ಹಿಂದೂಸ್ತಾನ್ ಜಿಂದಾಬಾದ್ ಎಂದು ನಿರಂತರವಾಗಿ ಜಯಘೋಷ ಹಾಕುತ್ತಿದ್ದರು. ಆ ಕಡೆಯೂ ಸುಂದರ ದೃಢಕಾಯದ ಇದೇ ತಳಿಯ ಗಂಡು, ಹೆಣ್ಣುಗಳು ಪಾಕಿಸ್ಥಾನ್ ಜಿಂದಾಬಾದ್ ಎಂದು ಜಯಘೋಷ ಹಾಕುತ್ತಲೇ ಇದ್ದರು. ಕಮಾಂಡೋ ಮುಖ್ಯಸ್ಥನು ಧ್ವನಿವರ್ಧಕದಲ್ಲಿ ಈ ಮೇಲಿನ ಜಯಘೋಷಗಳಲ್ಲದ ಬೇರೇನೂ ಪದಪುಂಜಗಳನ್ನು ಬಳಸಬಾರದೆಂದು ನಿರಂತರ ಸೂಚನೆ ಕೊಡುತ್ತಲೇ ಜನರನ್ನು ನಿಯಂತ್ರಿಸುತ್ತಿದ್ದನು. ದೇಶದ ನಾನಾ ಮೂಲೆಗಳಿಂದ ಬಂದ ಪ್ರವಾಸಿಗರಾಗಿದ್ದ ಪ್ರಾಸಂಗಿಕ ದೇಶಭಕ್ತರು ಇದ್ದಕ್ಕಿದ್ದಂತೆ ಆವೇಶ ಬಂದವರಂತೆ ದೇಶಭಕ್ತಿ ಗೀತೆಗಳಿಗೆ ಹೆಜ್ಜೆ ಹಾಕುತ್ತ ನೃತ್ಯ ಮಾಡುತ್ತಲೇ ಇದ್ದರು. ಮಕ್ಕಳು, ಮುದುಕರು, ಹರೆಯದವರು ಎಲ್ಲರೂ ಸನ್ನಿಪಾತಕ್ಕೆ ಒಳಗಾದವರಂತೆ ಒಂದು ಹುಚ್ಚು ಉನ್ಮಾದದಲ್ಲಿ ಕುಣಿಯುತ್ತಲೇ ಇದ್ದರು. ಕಮಾಂಡೋಗಳು ಕಾರ್ಯಕ್ರಮ ಮುಗಿಯಿತು ಹೋಗಿ. ಇನ್ನು ಸಾಕು ಎಂದು ಹೇಳಿದರೂ ಜನರು ಮಾತ್ರ ಕುಣಿಯುತ್ತಲೇ ಇದ್ದರು. ದಬ್ಬುವವರೆಗೆ ಕುಣಿಯುತ್ತಲೇ ಇದ್ದರು.

ಅವರ ಅರ್ಥರಹಿತ ಕುಣಿತ, ಅರ್ಭಟ, ಹುಸಿ ವೀರಾವೇಶದ ಚೀರಾಟ ಇವೆಲ್ಲವುಗಳು ಗೌಜು ಗದ್ದಲದಲ್ಲಿ ಎದುರಿನ ದೇಶದ ಮನುಷ್ಯರನ್ನು ಒಂದೇ ಒಂದು ಅಮಾಯಕ ನೋಟದಿಂದ ದರ್ಶಿಸಲು ಸಾಧ್ಯವಾಗಲೇ ಇಲ್ಲ. ಅವರಾದರೂ ಅಷ್ಟೇ ಇವರಷ್ಟೇ ಹುಚ್ಚರಾಗಿ ಪೆಚ್ಚರಾಗಿ ಕುಣಿಯುತ್ತಲೇ ಇದ್ದರು. ಆಗ ನನಗೆ ಥಟ್ಟನೆ ನೆನಪಾದದ್ದು ಬಾಂಬ್ ವಿರೋಧಿ ಪಾಕಿಸ್ಥಾನಿ ಕವಿಯೊಬ್ಬನ ಕವಿತೆಯ ಈ ಸಾಲುಗಳೂ

ಅವರು ಗುಂಡು ಹಾರಿಸಿದರೆಂದು
ಇವರು ಗುಂಡು ಹಾರಿಸಿದರು
ಇವರು ಅವರಿಂದ ಸತ್ತರು
ಅವರು ಇವರಿಂದ ನಿರ್ನಾಮವಾದರು
ಸಾವಿನ ಈ ಚಕ್ರ
ಇವರಿಂದ ಅವರಿಗೆ
ಅವರಿಂದ ಇವರಿಗೆ
ಹೀಗೆ ಸದಾ ತಿರುಗುತ್ತಲಿದೆ
ಈಗ ಅವರವರ ತಾಯಂದಿರ
ಆಶೀರ್ವಾದವೂ
ಅವರನ್ನು ಅಥವಾ ಇವರನ್ನು ರಕ್ಷಿಸುವಂತಿಲ್ಲ
ಏಕೆಂದರೆ ಎರಡೂ ಗಡಿಗಳಲ್ಲಿ ಬಾಂಬ್ ಮಾತ್ರ
ಫಲಿಸುತ್ತಿವೆ.

'ಮುಸ್ತಾಫ್ ಅರಬಾಬ್' ಕವಿಯ ಈ ಸಾಲುಗಳು ದೃಷ್ಟಿಸುವ ಅಸದಳ ನೋವಿನಿಂದ ಬಿಡಿಸಿಕೊಳ್ಳಲಾಗದೆ ವಾಘಾ ಬಾರ್ಡರಿನಿಂದ ಹೊರಳಿದೆವು ನಾವು.....

'ಹುತಾತ್ಮ' ಸ್ತಂಭದ ವಿಪರ್ಯಾಸ

1947ರಲ್ಲಿ ವಿಭಜನೆ ಅಂತ ಆದಾಗ ಒಂದು ರಸ್ತೆ ಕತ್ತರಿಸಿ ನಡುಬೀದಿಯಲ್ಲಿ ಎರಡು ದೊಡ್ಡ ಗೇಟುಗಳನ್ನು ನಿರ್ಮಿಸಿ ಒಂದರ ಮೇಲೆ ಪಾಕಿಸ್ಥಾನವೆಂದೋ ಇನ್ನೊಂದರ ಮೇಲೆ ಭಾರತವೆಂದೂ ಬರೆದು ಸಾಂಕೇತಿಕವಾಗಿ ಗೇಟುಗಳನ್ನು ಮುಚ್ಚಲಾಯಿತು. ಆದರೆ ಇದೇ ರಸ್ತೆಯ ಮಾರ್ಗವಾಗಿ ಅಂದು ಹತ್ತು ದಶ ಲಕ್ಷಕ್ಕೂ ಹೆಚ್ಚು ಮುಸ್ಲಿಮರು, ಸಿಖ್ಖರು, ಹಿಂದೂಗಳು ಇಬ್ಭಾಗವಾಗಿ ಹಂಚಿಕೊಂಡ ತಮ್ಮ ನೆಲೆ ಮತ್ತು ನೆಲಗಳನ್ನು ತೊರೆದು ಹೋಗಿದ್ದರು. ಇದೇ 'ಕೋಮುವಾದಿ ದಂಗೆಯ ಹುಡಿಯಲ್ಲಿ, ಮಹಮ್ಮದಾಲಿ ಜಿನ್ನಾ ಮತ್ತು ಸಾವರಕರ್, ಹೆಡ್ಗೆವಾರರಂಥ ಕೋಮುಭಕ್ತಿ ಪ್ರಣಿತ ಚಿಂತನಧಾರೆಯಲ್ಲಿ ಒಂದು ದಶಲಕ್ಷಕ್ಕೂ ಹೆಚ್ಚು ಜನರು ಧಾರುಣವಾಗಿ ಬಲಿಯಾಗಿದ್ದರು. ದೇಶ ವಿಭಜನೆಯ ದಂಗೆಯ ಕೋಮುವಾದಿ ರಾಷ್ಟ್ರಭಕ್ತಿಗೆ ಬಲಿಯಾದ ಅಸಂಖ್ಯಾತ ಹಿಂದೂ, ಮುಸ್ಲಿಂ, ಸಿಖ್‌ರ ನೆನಪಿಗಾಗಿ ಇಂದು ಅಲ್ಲೊಂದು ಮಾರ್ಬಲ್ ಹುತಾತ್ಮ ಸ್ತಂಭವೇನೋ ನಿಲ್ಲಿಸಲಾಗಿದೆ. ದೇಶದ ರಕ್ಷಣೆಗಾಗಿ ವೀರಾವೇಶದಿಂದ ಹೋರಾಡಿ ಪ್ರಾಣತೆತ್ತವರ ನೆನಪಿಗಾಗಿ ಅವರ ಬಲಿದಾನವನ್ನು ಅಜರಾಮರ ಗೊಳಿಸುವಂತೆ ಹುತಾತ್ಮ ಸ್ತಂಭವನ್ನು ನಿಲ್ಲಿಸುವುದು ಎಷ್ಟು ಗೌರವದ ಸಂಗತಿಯೋ? ಆದರೆ ತಾವು ಯಾತಕ್ಕಾಗಿ ಮತ್ತು ಯಾರಿಂದ ಸಾಯುತ್ತಿದ್ದೇವೆ ಎಂದು ಕನಿಷ್ಠ ಅರಿವು ಇರದ ಸಂದರ್ಭಕ್ಕೆ ಬಲಿಯಾದ ಅಸಹಾಯಕ ಮುಗ್ಧರ ಸಾವಿಗೆ ಹುತಾತ್ಮ ಸ್ತಂಭ ನಿಲ್ಲಿಸುವುದು ಕೂಡ ಎಂಥ ವಿಪರ್ಯಾಸ ಅಲ್ಲವೇ?

ಪರಮಾಣು ವ್ಯವಹಾರ : ಸಂಸತ್ತಿನ ಅಭಿಪ್ರಾಯವೇ ಆಧಾರವಾಗಲಿ

ಭಾರತ - ಅಮೆರಿಕಾ ಪರಮಾಣು ವ್ಯವಹಾರ ಕಾರ್ಯಗತವಾಗಬೇಕೆಂದು ಅಮೆರಿಕಾ ಬಹಳ ತರಾತುರಿಯಲ್ಲಿರುವಂತೆ ಕಾಣುತ್ತಿದೆ. ಆದರ ಈ ತರಾತುರಿಯೇ ಈ ವ್ಯವಹಾರದ ಬಗ್ಗೆ ಸಂದೇಹ ಮೂಡಿಸುತ್ತದೆ. ಆದ್ದರಿಂದ ಇದರ ಸಾಧಕ-ಬಾಧಕಗಳನ್ನು ಆಳವಾಗಿ ಪರೀಕ್ಷಿಸಿ ಅದು ಭಾರತಕ್ಕೆ ಸ್ವೀಕಾರಾರ್ಹವೇ ಅಥವಾ ಇಲ್ಲವೇ ಎಂದು ಭಾರತದ ಸಂಸತ್ತು ನಿರ್ಧರಿಸಲಿ.

ಅಮೆರಿಕಾ ಸಂಯುಕ್ತ ಸಂಸ್ಥಾನಗಳ ರಾಜಕೀಯ ವ್ಯವಹಾರಗಳ ವಿದೇಶಾಂಗ ಉಪ ಕಾರ್ಯದರ್ಶಿ ನಿಕೋಲಾಸ್ ಬರ್ನ್ಸ್ 'ಭಾರತ ವೇಗವಾಗಿ ಚಲಿಸಬೇಕು' ಎಂದಿದ್ದಾರೆ. ಭಾರತದಲ್ಲಿ ಅಮೆರಿಕಾದ ರಾಯಭಾರಿ ಮಲ್‌ಫೋರ್ಡ್ ನಾಲ್ಕು ದಿನಗಳಲ್ಲಿ ಮೂರು ಬಾರಿ ನಮ್ಮ ವಿದೇಶಾಂಗ ಮಂತ್ರಾಲಯಕ್ಕೆ ಭೇಟಿ ನೀಡಿದ್ದಾರೆ. ಪರಮಾಣು ಒಪ್ಪಂದದ ಬಗ್ಗೆ ಆ ದೇಶಕ್ಕೆ ಇಷ್ಟೊಂದು ಕಾತುರ ಏಕೆ? ಇದು ಸಹಜವಾಗಿ ಮೂಡುವ ಪ್ರಶ್ನೆ.

ಬುಶ್ ಆಡಳಿತದ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ಯಾವ ಅಮೆರಿಕಾ ಅಧ್ಯಕ್ಷನೂ ಕಾಣದಷ್ಟು ಕೆಟ್ಟ ಜನಾಭಿಪ್ರಾಯವಿದೆಯಂತೆ. ಅಲ್ಲಿನ 2008 ರ ಅಧ್ಯಕ್ಷೀಯ ಚುನಾವಣೆಗಳ ಮೊದಲು ಅಮೆರಿಕನ್ ಜನತೆಗೆ ತೋರಿಸಲಿಕ್ಕೆ ಭಾರತದೊಂದಿಗಿನ ಈ ಪರಮಾಣು ಒಪ್ಪಂದ ಏಕಮಾತ್ರ ಸಕಾರಾತ್ಮಕ ಸಂಗತಿ ಎಂದು ಹೇಳಲಾಗುತ್ತಿದೆ. ಈ ಒಪ್ಪಂದವನ್ನು ಇಷ್ಟೊಂದು ತರಾತುರಿಯಿಂದ ಪೂರ್ಣಗೊಳಿಸಬೇಕಾಗಿರುವುದು ಭಾರತದ ಹಿತಾಸಕ್ತಿಗಾಗಿ ಅಲ್ಲ, ಅಮೆರಿಕಾದ ಆಂತರಿಕ, ರಾಜಕೀಯ ಒತ್ತಡದಿಂದಾಗಿ.

ಇದು ಜಗತ್ತಿನ ಪ್ರಜಾಪ್ರಭುತ್ವಕ್ಕೆ ಪ್ರೋತ್ಸಾಹವಂತೆ!

ಆದರೆ ಕಥೆ ಇಷ್ಟಕ್ಕೇ ಮುಗಿಯುವುದಿಲ್ಲ. ಈ 123 ಒಪ್ಪಂದವನ್ನು ಅಂತಿಮಗೊಳಿಸಿದ ನಂತರ ಜೂನ್ 27, 2007 ರಂದು ಇದೇ ನಿಕೊಲಾಸ್ ಬರ್ನ್ಸ್ ಇದರಿಂದ ಅಮೆರಿಕಾಕ್ಕೆ ಎಷ್ಟೆಲ್ಲಾ ಲಾಭಗಳಿವೆ ಎಂದು ಪಟ್ಟಿ ಮಾಡಿದ್ದರು. ವಿಶ್ವದೆಲ್ಲೆಡೆ ಸ್ಥಿರವಾದ, ಉತ್ತಮ ಆಡಳಿತದ ಪ್ರಜಾಪ್ರಭುತ್ವಗಳಿಗೆ ಪ್ರೋತ್ಸಾಹ ನೀಡುವ ಅಮೆರಿಕಾ-ಭಾರತ ಪ್ರಚಾರ ಹೆಚ್ಚುತ್ತಿದ್ದು ಇದು ಅದರ ಒಂದು ಭಾಗವಂತೆ. ಇದಂತೂ ನಿಜಕ್ಕೂ ಹಾಸ್ಯಾಸ್ಪದ. ಏಕೆಂದರೆ ವಿಶ್ವದಲೆಲ್ಲಾ ಅದು ಚಿಲಿಯಿರಬಹುದು, ಶಹಾ ಆಡಳಿತದ ಇರಾನ್ ಇರಬಹುದು, ಅಥವಾ ಫಿಲಿಫೈನ್ಸ್ ಇರಬಹುದು. ಮಿಲಿಟರಿ ಸರ್ವಾಧಿಕಾರಗಳನ್ನು ಬೆಂಬಲಿಸಿದ್ದು, ಪೋಷಿಸಿದ್ದು, ಇದೇ ಸಾಮ್ರಾಜ್ಯಶಾಹಿ ಅಮೆರಿಕಾ. ಇಂದು ಇರಾಕಿನಲ್ಲಿ ಈ ಮಂದಿ ಎಂತಹ ಸ್ಥಿರ, ಉತ್ತಮ ಆಡಳಿತದ ಪ್ರಜಾಪ್ರಭುತ್ವಕ್ಕೆ ಪ್ರೋತ್ಸಾಹ ನೀಡಿದ್ದಾರೆಂಬುದು ಎಲ್ಲರ ಸಮ್ಮುಖ ಇದೆ. ವಾಸ್ತವವಾಗಿ ಅಮೆರಿಕನ್ ಸಾಮ್ರಾಜ್ಯಶಾಹಿ ತನ್ನ ಜಾಗತಿಕ ಯಜಮಾನಿಕೆಯ ಹುನ್ನಾರಗಳಲ್ಲಿ ಭಾರತವನ್ನು ತನ್ನ ಅಡಿಯಾಳು ಮಿತ್ರನಾಗಿ ಸೆಳೆದುಕೊಳ್ಳಲು ಪ್ರಯತ್ನಿಸುತ್ತಿದೆಯೆಂಬುದು ಸ್ಪಷ್ಟ.

ಇದು ಸಾಮರಿಕ ಗುರಿಯಾದರೆ, ಈ ಒಪ್ಪಂದ ಕಾರ್ಯಗತವಾದರೆ ಭಾರತದ ಅಣು ಸ್ಥಾವರಗಳಿಗೆ ಸುಮಾರು ಶೇ 90. ಅಂತರ್ರಾಷ್ಟ್ರೀಯ ಅಣು ಶಕ್ತಿ ಏಜೆನ್ಸಿಯ ಅಂತರ್ರಾಷ್ಟ್ರೀಯ ರಕ್ಷಣಾ ಶರತ್ತುಗಳಡಿ ಬರುತ್ತವೆ ಎಂದು ಅದೇ ನಿಕೊಲಾಸ್ ಬರ್ನ್ಸ್ ಹೇಳಿದ್ದಾರೆ. ಭಾರತ ಅಣು ಪ್ರಸರಣ ನಿಷೇಧ ಸಂದಿ (ಎನ್‌ಪಿಟಿ) ಪಕ್ಷಪಾತಕಾರಿಯಾದ್ದರಿಂದ ಅದು ಸಹಿ ಹಾಕುವುದಿಲ್ಲ ಎಂದು ಹೇಳುತ್ತಾ ಬಂದಿದ್ದರೂ ಈ ಒಪ್ಪಂದ ಕಾರ್ಯಗತವಾದರೆ ಭಾರತವನ್ನು "ಅಂತರ್ರಾಷ್ಟ್ರೀಯ ಅಣುಪ್ರಸರಣ ನಿಷೇಧದ ಮುಖ್ಯವಾಹಿನಿಗೆ ತಂದಂತಾಗುತ್ತದೆ" ಎಂದು ಆತ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಅದಕ್ಕೂ ಮುಖ್ಯವಾಗಿ ಅಮೆರಿಕನ್ ಕಂಪನಿಗಳಿಗೆ ಈ ಮೂರು ದಶಕಗಳಲ್ಲಿ ಮೊದಲಬಾರಿಗೆ ಭಾರತದ ಪರಮಾಣು ಉದ್ದಿಮೆಯಲ್ಲಿ ಬಂಡವಾಳ ಹೂಡಲು ಅವಕಾಶವಾಗುತ್ತದೆ ಎಂದಿದ್ದಾರೆ. ಅಂದರೆ ಅಮೆರಿಕಾದಲ್ಲೇ ಪರಮಾಣು ವಿದ್ಯುತ್ ಉತ್ಪಾದನೆಗೆ ಭಾರಿ ವಿರೋಧ ಬಂದಿರುವುದರಿಂದ ಕೆಲಸವಿಲ್ಲದಂತಾಗಿದ್ದ ಅಮೆರಿಕನ್ ಪರಮಾಣು ಉದ್ದಿಮೆಗೆ ಮತ್ತೆ ಲಾಭದೋಚುವ ಅವಕಾಶ. ಇನ್ನು ರಕ್ಷಣಾ ಸಹಕಾರ' ದ ಪ್ರಯೋಜನಗಳಂತೂ ಅಮೆರಿಕನ್ ಕಂಪನಿಗಳಿಗೆ ಬಹಳಷ್ಟು ಇವೆ.

ಅಮೆರಿಕಾದ ಇನಾಮು!

ನಿಕೊಲಾಸ್ ಬರ್ನ್ಸ್ ಮಾತುಗಳಲ್ಲೇ ಹೇಳುವುದಾದರೆ "ಈ ಒಪ್ಪಂದ ಸಾಮರಿಕ ಪಾಲುದಾರಿಕೆಯನ್ನು ಆಳಗೊಳಿಸುತ್ತದೆ, ಭಾರತದಲ್ಲಿ ಅಮೆರಿಕನ್ ವ್ಯಾಪಾರಿಗಳಿಗೆ ಹೊಸ ಅವಕಾಶಗಳನ್ನು ಸೃಷ್ಟಿಸುತ್ತದೆ, ಜಾಗತಿಕ ವಿದ್ಯುತ್ ಭದ್ರತೆಯನ್ನು ಹೆಚ್ಚಿಸುತ್ತದೆ ಮತ್ತು ಭಾರತದ ಕಾರ್ಬನ್ ದೂಷಣೆಯನ್ನು ಕಡಿಮೆ ಮಾಡುತ್ತದೆ. ಅಲ್ಲದೆ ಅದು ಇರಾನ್‌ನಂತಹ ಪರಮಾಣು ಬಹಿಷ್ಕೃತರಿಗೆ ಒಂದು ಶಕ್ತಿಶಾಲಿ ಸಂದೇಶವನ್ನು ನೀಡುತ್ತದೆ. ನೀವು ನಿಯಮಗಳ ಪ್ರಕಾರ ಆಟವಾಡಿದರೆ ಭಾರತದಂತೆ ಇನಾಮು ಪಡೆಯುತ್ತೀರಿ, ಇಲ್ಲವಾದರೆ ನಿರ್ಬಂಧಗಳನ್ನು, ಒಂಟಿತನವನ್ನು ಎದುರಿಸುತ್ತೀರಿ ಎಂಬುದೇ ಆ ಸಂದೇಶ". ಹೀಗೆ ಈ 123 ಒಪ್ಪಂದ ಭಾರತದ 'ಉತ್ತಮ ವರ್ತನೆ'ಗೆ ಸಿಕ್ಕಿರುವ 'ಇನಾಮು'! ಇದು ಭಾರತದ ಸ್ವತಂತ್ರ ವಿದೇಶಾಂಗ ನೀತಿಯ ದಿಕ್ಕನ್ನು ಬಲದಲಿಸಬೇಕೆಂದು ಹಾಕಿರುವ ಮುಸುಕಿನ ಬೆದರಿಕೆಯಲ್ಲದೆ ಇನ್ನೇನು?

ಈ ಹಿನ್ನೆಲೆಯಲ್ಲಿ ಈ ಒಪ್ಪಂದವನ್ನು ಕಾರ್ಯಗತಗೊಳಿಸಲು ಭಾರತ ಬೇಗನೇ ಮುಂದಾಗಬೇಕು ಎಂಬ ಅಮೆರಿಕನ್ ಸಾಮ್ರಾಜ್ಯಶಾಹಿಯ ತರಾತುರಿಯನ್ನು ಅರ್ಥಮಾಡಿಕೊಳ್ಳಬಹುದು. ಬುಶ್ ಆಡಳಿತ ಈ ವರ್ಷಾಂತ್ಯದೊಳಗೆ ಒಪ್ಪಂದಕ್ಕೆ ಸಂಬಂಧಪಟ್ಟಂತೆ ಅಂತರ್ರಾಷ್ಟ್ರೀಯ ಅಣು ಶಕ್ತಿ ಏಜೆನ್ಸಿಯೊಂದಿಗೆ ಮತ್ತು ಪರಮಾಣು ಪೂರೈಕೆ ಗುಂಪಿನೊಂದಿಗೆ ಮಾತುಕತೆಗಳನ್ನು ಮುಗಿಸಿಬಿಡಬೇಕು ಎಂದು ಗಡುವು ಹಾಕಿರುವಂತೆ ಕಾಣುತ್ತದೆ.

ಪ್ರಜಾಪ್ರಭುತ್ವಕ್ಕೆ ಅವಮಾನ


ಈ ರೀತಿ ಗಡುವು ಹಾಕುವುದೇ ಭಾರತೀಯ ಪ್ರಜಾಪ್ರಭುತ್ವಕ್ಕೆ ಮಾಡಿರುವ ಅವಮಾನ. ಯಾವುದೇ ದೇಶದ ಪ್ರಜಾಪ್ರಭುತ್ವ ಪ್ರಕ್ರಿಯೆಗಳ ಮೇಲೆ ಹೊರಗಿನ ಒತ್ತಡಗಳು, ಇನ್ನೊಂದು ದೇಶದ ಅಗತ್ಯಗಳು ಪ್ರಭಾವ ಬೀರುವಂತಾಗಬಾರದು. ಈ ವ್ಯವಹಾರದ ಸಾಧಕ-ಭಾದಕಗಳನ್ನು ಪರಿಶೀಲಿಸುತ್ತಿರುವ ಯುಪಿಎ - ಎಡಪಕ್ಷಗಳ ಸಮಿತಿ ತನ್ನ ಇತ್ತೀಚಿನ ಸಭೆಯಲ್ಲಿ ಇದನ್ನು ಮುಂಬರುವ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಚರ್ಚಿಸುವ ಸಾಧ್ಯತೆಯನ್ನು ಚರ್ಚಿಸಿತು ಎಂದು ಹೇಳಲಾಗಿದೆ. ಸರ್ಕಾರ ಸಂಸತ್ತಿನಲ್ಲಿ ವ್ಯಕ್ತವಾಗುವ ಬಹುಮತದ ಅಭಿಪ್ರಾಯವನ್ನು ಮನ್ನಿಸಿ ಮುಂದುವರೆಯುತ್ತದೆ ಎಂದು ನಿರೀಕ್ಷಿಸಬೇಕಾಗಿದೆ.

ಇಂತಹ ಪ್ರಕ್ರಿಯೆ ಅಮೆರಿಕಾಕ್ಕೆ ಕೂಡಾ ಹೊಸದೇನಲ್ಲ. ಈ ಹಿಂದೆ ಅಧ್ಯಕ್ಷ ಕ್ಲಿಂಟನ್ ಸಮಗ್ರ ಪರೀಕ್ಷಣಾ ನಿಷೇಧ ಸಂದಿ(ಸಿಟಿಬಿಟಿ)ಗೆ ಸಹಿ ಹಾಕುವಂತೆ ಸ್ವತಂತ್ರ ದೇಶಗಳನ್ನು ಬಲವಂತ ಮಾಡಲು ದೇಶದಿಂದ ದೇಶಕ್ಕೆ ಪ್ರವಾಸ ಕೈಗೊಂಡರು. ಆಗ ನಮ್ಮ ದೇಶದ ವಾಜಪೇಯಿ ಸರ್ಕಾರ ಇನ್ನೇನು ಸಹಿಹಾಕಲು ಮುಂದಾಗಿತ್ತು, ಆದರೆ ಸಾರ್ವಜನಿಕ ಒತ್ತಡ ಮತ್ತು ಸಂಸತ್ತಿನಲ್ಲಿ ಕಂಡ ಅಸಮ್ಮತಿಯಿಂದಾಗಿ ಹಿಂದೆ ಸರಿಯಿತು. ಕ್ಲಿಂಟನ್ ಹಲವಾರು ದೇಶಗಳ ಮೇಲೆ ಬಲವಂತ ತಂದರೂ ಕೊನೆಗೆ ತನ್ನ ದೇಶದ ಕಾಂಗ್ರೆಸ್(ಸಂಸತ್ತು) ನಿಂದಲೇ ಒಪ್ಪಿಗೆ ಪಡೆಯಲು ಸಾದ್ಯವಾಗಲಿಲ್ಲ. ಇಂತಹ ಪ್ರಜಾಪ್ರಭುತ್ವ ಪ್ರಕ್ರಿಯೆಗಳು ಅವರ ದೇಶದಲ್ಲಿ ಸರಿಯೆನಿಸುವುದಾದರೆ ಬೇರೆ ಪ್ರತಿಯೊಂದು ದೇಶದಲ್ಲೂ ಅದು ಸರಿಯೆನಿಸುವುದಿಲ್ಲವೇ? ಅಮೆರಿಕನ್ ಸಾಮ್ರಾಜ್ಯಶಾಹಿಗೆ ಇದು ಅರ್ಥವಾಗಬೇಕು.

ನಿಕೊಲಾಸ್ ಬರ್ನ್ಸ್ ಪಟ್ಟಿ ಮಾಡಿದೆ. ಮೇಲೆ ಹೇಳಿದ ಕಾರಣಗಳೇ ಭಾರತ ಈ ವ್ಯವಹಾರದ ಗಂಭೀರ ಪರಿಣಾಮಗಳನ್ನು ಪರಿಶೀಲಿಸದೆ ತರಾತುರಿಯಿಂದ ಮುಂದೆ ಹೋಗಬಾರದು ಎಂಬ ನಿಲುವಿಗೆ ಬಲವಾದ ಸಮರ್ಥನೆ ನೀಡುತ್ತದೆ. ಭಾರತದ ಪರಮಾಣು ಕಾರ್ಯಕ್ರಮಗಳು, ಸ್ವತಂತ್ರ ವಿದೇಶಾಂಗ ನೀತಿ ಮತ್ತು ಭದ್ರತೆಯ ಪ್ರಶ್ನೆಗಳ ಮೇಲೆ ಈ ವ್ಯವಹಾರದ ಪರಿಣಾಮಗಳನ್ನು ಪರಿಶೀಲಿಸಲೆಂದೇ ತಾನೇ ಯುಪಿಎ - ಎಡಪಕ್ಷಗಳ ಸಮಿತಿ ರಚಿಸಿದ್ದು? ಯುಪಿಎ ಸರ್ಕಾರ ಈ ವಿಷಯದಲ್ಲಿ ಮುಂದುವರೆಯುವ ಮೊದಲು ಈ ಸಮಿತಿ ಕಂಡುಕೊಂಡ ಅಂಶಗಳನ್ನು ಗಮನದಲ್ಲಿ ಇಟ್ಟುಕೊಳ್ಳಲಾಗುವುದು ಎಂದು ಒತ್ತಿ ಹೇಳಲಾಗಿತ್ತು.

'ಮುರುಕಲು ಜನಾದೇಶ' !

ಅಕ್ಟೋಬರ್ 23 ರಂದು ಪ್ರಧಾನಮಂತ್ರಿಗಳು ಮಾಡಿರುವ ಟಿಪ್ಪಣಿಯನ್ನು ಈ ಹಿನ್ನೆಲೆಯಲ್ಲಿ ನೋಡಬೇಕು. "ಸ್ಪರ್ಧಾತ್ಮಕ ರಾಜಕೀಯದ ಸ್ವರೂಪದಿಂದಾಗಿಯೇ ಮತ್ತು ಸರ್ಕಾರಗಳಿಗೆ



ನೀಡಿರುವ ಖಂಡ ಜನಾದೇಶಗಳಿಂದಾಗಿಯೇ ಕೆಲವೊಮ್ಮೆ ಅತ್ಯಂತ ಸ್ವಯಂವೇದ್ಯ ಎನಿಸಿದ್ದನ್ನು ಕೂಡಾ ಮಾಡುವುದು ನಮಗೆ ಕಷ್ಟವಾಗುತ್ತದೆ" ಎಂದು ಅವರು ಹೇಳಿದರು. ನಿಜ, ಆರ್ಥಿಕ ಸುಧಾರಣೆಗಳ 'ಅಪೂರ್ಣವಾಗುಳಿದ ಅಜೆಂಡಾ' ದ ಸಂದರ್ಭದಲ್ಲಿ ಅವರು ಈ ಟಿಪ್ಪಣಿ ಮಾಡಿದರು. ಆದರೆ ಸುಮಾರಾಗಿ ಎಲ್ಲಾ ವಿಶ್ಲೇಷಕರು ಈ ಮಾತುಗಳನ್ನು ಪರಮಾಣು ವ್ಯವಹಾರ, ಕುರಿತು ಇಕ್ಕಟ್ಟಿನೊಂದಿಗೆ ತಳಕು ಹಾಕಿದ್ದಾರೆ. ಆದ್ದರಿಂದಲೇ 'ಖಂಡ ಜನಾದೇಶ' ಅಥವಾ 'ಮುರುಕಲು ಜನಾದೇಶ'ದ ಬಗ್ಗೆ ಯೋಜಿಸಬೇಕಾಗುತ್ತದೆ.

ಈ 'ಮುರುಕಲು ಜನಾದೇಶ' ಭಾರತದ ಪ್ರಜಾಪ್ರಭುತ್ವದ ವಿಕಾಸದಲ್ಲಿ ಒಂದು ಹಿನ್ನಡೆಯೆಂದು ಹಲವರು ಕಾಣುತ್ತಾರೆ. ಆದರೆ ಇದು ಸರಿಯೇನು? ವಾಸ್ತವವಾಗಿ, ಹಲವು ರೀತಿಗಳಲ್ಲಿ ಇದು ಭಾರತೀಯ ಪ್ರಜಾಪ್ರಭುತ್ವ ಪ್ರೌಢಗೊಳ್ಳುತ್ತಿರುವ ಲಕ್ಷಣ ಎಂದು ಕಾಣಬಹುದಲ್ಲವೇ? ಭಾರತದ ಸಾಮಾಜಿಕ ವೈವಿಧ್ಯತೆ, ಬಹುಳತೆ ರಾಜಕೀಯ ವ್ಯವಸ್ಥೆಯಲ್ಲೂ ಬಿಂಬಿತಗೊಳ್ಳುತ್ತದೆ. ಇಂತಹ ಸನ್ನಿವೇಶದಲ್ಲಿ ವಿವಿಧ ಪಕ್ಷಗಳು, ಈ ವಿವಿಧ ಸಾಮಾಜಿಕ ವಿಭಾಗಗಳ ವಿಶ್ವಾಸ ಗಳಿಸುವುದು ಸಹಜ ಪ್ರಕ್ರಿಯೆ. ಆ ಮೂಲಕ ಯಾವುದೇ ಪಕ್ಷಕ್ಕೆ ಕೇವಲ ತನ್ನದೇ ಸರ್ಕಾರ ರಚಿಸುವಷ್ಟು ಬಹುಮತ ಸಿಗದಿದ್ದರೆ ಅದು ಅಸಹಜವೇನಲ್ಲ. ಸಧ್ಯ ಭವಿಷ್ಯದಲ್ಲಂತೂ ಭಾರತದ ರಾಜಕಾರಣದಲ್ಲಿ ಸಮ್ಮಿಶ್ರ ಸರ್ಕಾರಗಳು ಸಾಮಾನ್ಯ ಸಂಗತಿಯಾಗಲಿದೆ.

ಎರಡನೆಯದಾಗಿ, ಇಂತಹ 'ಮುರುಕಲು ಜನಾದೇಶ' ಗಳಲ್ಲಿ ಯಾವುದೇ ಪ್ರಜಾಪ್ರಭುತ್ವ ಚೆನ್ನಾಗಿ ಕಾರ್ಯನಿರ್ವಹಿಸಲು ಬೇಕಾದ ಅಂಕುಶಗಳು, ಸಮತೋಲನಕಾರಿ ಅಂಶಗಳು ಇವೆ. ಆದ್ದರಿಂದಲೇ ಸಮ್ಮಿಶ್ರ ಸರ್ಕಾರಗಳು ಒಂದು ಸಾಮಾನ್ಯ ಕನಿಷ್ಟ ಕಾರ್ಯಕ್ರಮ ರೂಪಿಸುತ್ತವೆ. ಅದರ ಪ್ರಕಾರ ಅವು ಕೆಲಸ ಮಾಡಬೇಕೆಂದು ನಿರೀಕ್ಷಿಸಲಾಗುತ್ತದೆ. ಈಗಿನ ಯುಪಿಎ ಸರ್ಕಾರದ 'ಸಿಎಂಪಿ'ಯೂ ಈ ಪ್ರಕ್ರಿಯೆಯ ಫಲವೇ. ಯುಪಿಎ ರಂಗದ ಎಲ್ಲಾ ಭಾಗಿದಾರರು ಮತ್ತು ಹೊರಗಿನಿಂದ ಬೆಂಬಲಿಸುವ ಎಡಪಕ್ಷಗಳು ಇದಕ್ಕೆ ಅನುಮೋದನೆ ನೀಡಿವೆ. ಈ ಸಿಎಂಪಿಯನ್ನು ಅನುಷ್ಠಾನಗೊಳಿಸುವಲ್ಲಿ ಈ ಸರ್ಕಾರಕ್ಕೆ ಯಾವುದೇ ಅಡೆತಡೆಗಳನ್ನು ಸೃಷ್ಟಿಸಿದ್ದರೆ ಆಗ ಪ್ರಧಾನ ಮಂತ್ರಿಗಳ ಈ ಟಿಪ್ಪಣಿಯನ್ನು ಒಪ್ಪಿಕೊಳ್ಳಬಹುದಾಗಿತ್ತು. ಬದಲಿಗೆ ಸಿಎಂಪಿಯಲ್ಲಿ ಇಲ್ಲದ ದಿಕ್ಕಿನಲ್ಲಿ ಯಾವುದಾದರೂ ನೀತಿಯನ್ನು ಅನುಸರಿಸಿದಾಗ ಅದಕ್ಕೆ ಆಕ್ಷೇಪಣೆಗಳು ಬಂದರೆ ಅದನ್ನು ಸರ್ಕಾರ ಸಿಎಂಪಿ ಯಿಂದ ದೂರ ಸರಿಯದಂತೆ ಹಾಕಿರುವ ಅಂಕುಶ ಎಂದೇ ಕಾಣಬೇಕಲ್ಲದೆ ಅಡ್ಡಿಯೊಂದು ಕಾಣಬಹುದೇ?

ಭಾರತ - ಅಮೆರಿಕಾ ಪರಮಾಣು ವ್ಯವಹಾರದ ಬಗ್ಗೆ ಎಡಪಕ್ಷಗಳ ಆಕ್ಷೇಪಣೆಗಳು ಈ ಸ್ವರೂಪದವು. ಇಂತಹ ಒಂದು ವ್ಯವಹಾರ ಬೇಕಾಗಿದೆ ಎಂದು ಕಾಂಗ್ರೆಸ್‌ನ ಚುನಾವಣಾ ಪ್ರಣಾಳಿಕೆಯಲ್ಲಿ ಇರಲಿಲ್ಲ. ಅದರ ಯಾವುದೇ ಮಿತ್ರಪಕ್ಷದ ಪ್ರಣಾಳಿಕೆಯಲ್ಲೂ ಇರಲಿಲ್ಲ. ಸಿಎಂಪಿಯಲ್ಲೂ ಈ ಬಗ್ಗೆ ಏನೂ ಪ್ರಸ್ತಾಪವಿಲ್ಲ. ಬದಲಿಗೆ ಅದರಲ್ಲಿ ಒಂದು ಸ್ವತಂತ್ರ ವಿದೇಶಾಂಗ ನೀತಿಯ ಪ್ರಸ್ತಾಪವಿದೆ. ಈ ಒಪ್ಪಂದ ಕಾರ್ಯಗತವಾದರೆ ಈ ಮಾತಿಗೆ ತಪ್ಪಿದಂತಾಗುತ್ತದೆ ಎಂಬುದು ಎಡಪಕ್ಷಗಳ ದೃಢ ಅಭಿಪ್ರಾಯ. ಹೀಗಿರುವಾಗ ಯಾವುದೇ ರೀತಿಯಲ್ಲೂ ಎಡಪಕ್ಷಗಳ ಆಕ್ಷೇಪಣೆ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಿಂದ ದೂರ ಸರಿದಿರುವ ನಿಲುವೇನಲ್ಲ.

ಬಿಜೆಪಿಯ ಅಸಂಬದ್ಧ ಪ್ರಲಾಪ

ಈ ಸಂದರ್ಭದಲ್ಲಿ ಪ್ರಧಾನಮಂತ್ರಿಗಳು 'ಅಸಹಾಯಕ'ರಾಗಿರುವುದರಿಂದ ರಾಜಿನಾಮೆ ನೀಡಬೇಕೆಂಬ ಬಿಜೆಪಿಯ ಕರೆ ಹಾಸ್ಯಾಸ್ಪದ ಮಾತ್ರವಲ್ಲ ಅಸಂಬದ್ಧ ಕೂಡಾ. ಎನ್‌ಡಿಎ ಯನ್ನು ರಚಿಸಿದಾಗ ಬಿಜೆಪಿ ಒಂದು ಪಕ್ಷವಾಗಿ ಸಮಯಸಾಧಕತನವನ್ನು ತೋರಲಿಲ್ಲವೇ? ಅದು ಚುನಾವಣೆಯಲ್ಲಿ ಹೋರಾಡಿದ್ದು ಹಿಂದುತ್ವ ಅಜೆಂಡಾದ ಮೇಲೆ. ಚುನಾವಣೆಗಳ ನಂತರ ಅದು ತನ್ನ ರಾಜಕೀಯ ಅಸ್ತಿತ್ವದ ಮತ್ತು ತನ್ನ ಚುನಾವಣಾ ಬೆಂಬಲದ ಮೂರು ಮೂಲ ಪ್ರಶ್ನೆಗಳನ್ನು ಪಕ್ಕಕ್ಕೆ ಸರಿಸಿತು. ಒಂದು ಸಂಸದೀಯ ಬಹುಮತವನ್ನು ಕೂಡಿಸಲು ಅದು ಅಯೋಧ್ಯೆಯಲ್ಲಿ ದೇವಸ್ಥಾನ ನಿರ್ಮಾಣ, 370ನೇ ಕಲಮಿನ ರದ್ದತಿ ಮತ್ತು ಸಮಾನ ನಾಗರೀಕ ಸಂಹಿತೆಯ ಪ್ರಶ್ನೆಗಳನ್ನು ಕೈಬಿಟ್ಟಿತು. ಅಧಿಕಾರಕ್ಕಾಗಿ ತನ್ನ ಸೈದ್ಧಾಂತಿಕ ಅಡಿಪಾಯವನ್ನೇ ಬಿಟ್ಟುಕೊಡಲು ಸಿದ್ಧವಾದ ಒಂದು ಪಕ್ಷಕ್ಕೆ ಪ್ರಧಾನಮಂತ್ರಿಗಳು ಅವರ ಪ್ರಣಾಳಿಕೆಯಲ್ಲಿ ಇರದಿದ್ದ, ಅವರ ಸರ್ಕಾರದ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಇರದಿದ್ದ ಒಂದು ವಿಷಯವನ್ನು

ಪುಟ 14 ಕ್ಕೆ

ಗುಜರಾತ್ ಹತ್ಯಾಕಾಂಡದ...

[illegible]

[illegible] ಬೇಕರಿಯಲ್ಲಿ [illegible] ಇವರ ಮೇಲೆ [illegible] ಹಿಂದೂಳಿದ [illegible]ವನ್ನು ಎತ್ತಿಕಟ್ಟಿ ಇಡೀ ಬೇಕರಿಗೆ ಬೆಂಕಿ [illegible]ದ್ದರು. ಇದರಿಂದ ಬೇಕರಿಯಲ್ಲಿದ್ದ ಹದಿಮೂರು ಮಂದಿ ಸಜೀವ ದಹನವಾಗಿದ್ದರು.

ವಡೋಧರಾದಲ್ಲಿ ಮುಸ್ಲಿಂರೊಬ್ಬರು ಜನಪ್ರಿಯವಾಗಿದ್ದ ಮತ್ತು ಉತ್ತಮ ಸೇವೆಯನ್ನು ಒದಗಿಸುತ್ತಿದ್ದ ಟ್ರಾವೆಲ್ಸ್ ನಡೆಸುತ್ತಿದ್ದರು. ಇದರಿಂದ ಸಂಘ ಪರಿವಾರದವರು ನಡೆಸುತ್ತಿದ್ದ ಟ್ರಾವೆಲ್ಸ್‌ಗಳು ನೊಣ ಹೊಡೆಯುತ್ತಿದ್ದವು. ಇಲ್ಲೂ ಸಹ ಅದೇ ಕೃತ್ಯ ಎಸಗಿದರು. ಈಗ ಅವರ ಇಡೀ ಕುಟುಂಬ ಗುಜರಾತ್ ತೊರೆದಿದ್ದು, ಪಶ್ಚಿಮ ಬಂಗಾಳದಲ್ಲಿ ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಮನೆಯಲ್ಲಿದ್ದ ಹಣ, ಒಡವೆ ವಸ್ತ್ರಗಳನ್ನೆಲ್ಲಾ ಕೋಮುವಾದಿಗಳು ಲೂಟಿ ಮಾಡಿದ್ದಾರೆ.

ಗೋಧ್ರಾ ಘಟನೆ ನಡೆದ ಸಂದರ್ಭದಲ್ಲಿ ನಾವು ರೈಲ್ವೆ ನಿಲ್ದಾಣದಲ್ಲಿ ಇರಲೇ ಇಲ್ಲ. ಆ ಸಂದರ್ಭದಲ್ಲಿ ನಾವು ಮನೆಯಲ್ಲಿ ನಿದ್ದೆ ಮಾಡುತ್ತಿದ್ದೆವು ಎಂದು ಈ ಪ್ರಕರಣದ ಐ ವಿಟ್ನೆಸ್ ಆಗಿರುವ ಬಿಜೆಪಿ ಸದಸ್ಯರಾದ ಮುರಳಿ ಮೂಲ್‌ಚಂದಾನಿ ಮತ್ತು ಕಾಕುಲ್ ಪಾಠಕ್ ಹೇಳಿದ್ದಾರೆ. ಪೋಲೀಸರು ಬಲವಂತವಾಗಿ ನಮ್ಮನ್ನು ಸಾಕ್ಷಿಗಳನ್ನಾಗಿ ಮಾಡಿದ್ದಾರೆ ಎಂದಿದ್ದಾರೆ. ಪೋಲಿಸರೆ ಉದ್ದೇಶ ಪೂರಕವಾಗಿ ಸಲ್ಲಿಸಿದ್ದ ಆರೋಪಿಗಳ ಪಟ್ಟಿ ಮತ್ತು ಭಾವಚಿತ್ರಗಳನ್ನು ನೀಡಿ ಸಾಕ್ಷಿ ಹೇಳುವಂತೆ ಮಾಡಿದ್ದಾರೆ.

ಈ ನ್ಯಾಯಾಧೀಶರು ನಿವೃತ್ತರಾಗಿರುವವರು, ಅವರಿಂದ ಏನೂ ಮಾಡಲು ಸಾಧ್ಯವಿಲ್ಲ. ನಾನಾವತಿ ಸಭ್ಯ ವ್ಯಕ್ತಿಯಾಗಿದ್ದು ಹಣ ಕೊಟ್ಟರೆ ಬಿಟ್ಟು ಬಿಡುತ್ತಾರೆ. ಮತ್ತೊಬ್ಬ ನ್ಯಾಯಾಧೀಶರಾದ ಶಾ ನಮ್ಮವರು. ನಿಮಗೇನೂ ಭಯ ಇಲ್ಲ ಎಂದು ಗುಜರಾತ್ ಹತ್ಯಾಕಾಂಡದ ಪರವಾಗಿ ನೇಮಿಸಿದ್ದ ಸರ್ಕಾರ ನ್ಯಾಯಾಂಗ ವ್ಯವಸ್ಥೆಯನ್ನು ತಮ್ಮ ಸ್ವಾರ್ಥಕ್ಕಾಗಿ ಯಾವ ರೀತಿ ದುರುಪಯೋಗ ಮಾಡಿಕೊಂಡಿದೆ ಎಂಬುದು ಇದರಿಂದ ಅರ್ಥವಾಗುತ್ತದೆ. ಸರ್ಕಾರಿ ಪ್ರಯೋಜಿತ ಹತ್ಯಾಕಾಂಡ ಎಂದರೆ ಇದೇನೇ.

ದುಷ್ಕೃತ್ಯಗಳನ್ನು ನಡೆಸಿದ ಹಲವಾರು ಹಿಂದೂಗಳಲ್ಲಿ ಕೆಲವರು ವಿರುದ್ಧವಾಗಿಯೂ ವರ್ತಿಸಬಹುದೆಂಬ ಅನುಮಾನದಿಂದ ಸರ್ಕಾರಿ ವಕೀಲ ಭರತ್‌ಭಟ್ ಅಂತಹ ಆರೋಪಿಗಳಿಗೆ ಹೇಳಿಕೆಗಳನ್ನು ನೀಡಲು ಅವಕಾಶವನ್ನೇ ಕಲ್ಪಿಸಿಲ್ಲ.

ಗುಲ್‌ಬರ್ಗ್ ಸೊಸೈಟಿ ಹತ್ಯಾಕಾಂಡದಲ್ಲಿ ಮಾಜಿ ಕಾಂಗ್ರೆಸ್ ಸಂಸದರಾದ ಎಹಸಾನ್ ಜಾಫ್ರಿಯನ್ನು ಯಾವ ರೀತಿ ಕೊಲ್ಲಲಾಯಿತು ಎಂಬುದನ್ನು ಈ ಪ್ರಕರಣದ ಆರೋಪಿ ಮದನ್ ಚಾವ್ಲ ಹೇಳಿದ್ದಾರೆ. ಅವರ ಹೇಳಿಕೆಗಳನ್ನು ಕೇಳಿದರೆ ಮೈ ಜುಮ್ಮೆನ್ನುತ್ತದೆ. ಈ ಹತ್ಯಾಕಾಂಡದ ಸಂದರ್ಭದಲ್ಲಿ ಹಣ ನೀಡುತ್ತೇನೆ... ನಮ್ಮನ್ನು ಬಿಟ್ಟುಬಿಡಿ ಎಂದು ಜಾಫ್ರಿ ಕೋರಿದರಂತೆ. ಇದಕ್ಕೆ ಸಮ್ಮತಿಸಿ ಹಣ ಪಡೆದ ನಂತರ ಜಾಫ್ರಿಯನ್ನು ತುಂಡುತುಂಡಾಗಿ ಕತ್ತರಿಸಿ ದಹನ ಮಾಡಿದೆವು ಎಂದು ಹಿಂದೂ ಭಯೋತ್ಪಾದಕರು ಹೇಳಿದ್ದಾರೆ.

ಸರ್ಕಾರದ ಮುಕ್ತ ಬೆಂಬಲದಿಂದ ಮುಸ್ಲಿಂ ಸಮುದಾಯದ ಹತ್ಯಾಕಾಂಡ ನಡೆಸಿದವು ಎಂದು ಬಿಜೆಪಿ ಶಾಸಕ ಸೇರಿದಂತೆ ಭಜರಂಗದಳ ಮತ್ತು ವಿಶ್ವಹಿಂದೂಪರಿಷತ್‌ನ ಮುಖಂಡರು ಹೇಳಿದ್ದಾರೆ.

ಗೋಧ್ರಾ ಪ್ರಕರಣ ನಡೆದ ನಂತರ ಏನಾದರೂ ಮಾಡಿಕೊಳ್ಳಿ ಮೂರು ದಿನ ಸಮಯಾವಕಾಶ ನೀಡುತ್ತೇನೆ ಎಂದು ಸ್ವತಃ ನರೇಂದ್ರ ಮೋದಿ ಹೇಳಿದ್ದಾಗಿ ಭಜರಂಗದಳ ಮುಖಂಡ ಹಾಗೂ



ಹಾಲಿ ಗೋಧ್ರಾ ವಿಧಾನಸಭಾ ಕ್ಷೇತ್ರದ ಶಾಸಕ ಹರೇಶ್ ಭಟ್ ಹೇಳಿದ್ದಾನೆ.

2002 ಫೆಬ್ರವರಿ 28 ರಂದು ಗೋಧ್ರಾ ಘಟನೆ ನಡೆದ ನಂತರ ಮುಸ್ಲಿಮರನ್ನು ಹತ್ಯಾಕಾಂಡ ಮಾಡಿದವರನ್ನು ನಿಮಗೆ ದೇವರು ಒಳ್ಳೆಯದು ಮಾಡುತ್ತಾನೆ ಎಂದು ನರೇಂದ್ರ ಮೋದಿ ಈ ಹಿಂದೂ ಭಯೋತ್ಪಾದಕರ ಬೆನ್ನು ತಟ್ಟಿದ ಎಂದು ಆರೋಪಿ ಮದನ್ ಚಾವ್ಲ ಹೇಳಿದ್ದಾನೆ. ಇದು ಸರ್ಕಾರಿ ಪ್ರಾಯೋಜಿತ ಹತ್ಯಾಕಾಂಡ, ಭಯೋತ್ಪಾದನೆ ಎನ್ನುವುದಕ್ಕೆ ಬೇರೆ ಸಾಕ್ಷಿ ಬೇಕೇ. ಇವು ಕೇವಲ ಸ್ಯಾಂಪಲ್ ಮಾತ್ರ. ಇಂತಹ ಸಾವಿರಾರು ಪ್ರಕರಣಗಳು ಗುಜರಾತ್ ಹತ್ಯಾಕಾಂಡದ ಗರ್ಭದಲ್ಲಿ ಅಡಗಿವೆ.

ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆ ಎಂದು ಅಬ್ಬರಿಸುತ್ತಾರೆ. ಭಾರತವನ್ನು ಗುಜರಾತ್ ಮಾಡುತ್ತೇವೆ ಎಂದು ಬೊಬ್ಬೆ ಹಾಕುತ್ತಾರೆ. ಇಂತಹ ಗುಜರಾತ್ ಬೇಕೇ. ಭಯೋತ್ಪಾದಕರೆಂದರೆ ಮುಸ್ಲಿಮರೇ ಎಂಬ ಭಾವನೆ ಮೂಡಿಸಲು ಹಲವು ಪತ್ರಿಕೆಗಳಲ್ಲಿ ಮುಸ್ಲಿಂ ಭಯೋತ್ಪಾದಕರೆಂದು ದುರುದ್ದೇಶ ಪೂರ್ವಕವಾಗಿ ಬಿಂಬಿಸುತ್ತಾರೆ. ಹಾಗಿದ್ದಲ್ಲಿ ಗುಜರಾತ್ ಹತ್ಯಾಕಾಂಡ ನಡೆಸಿದವರು ಹಿಂದೂ ಭಯೋತ್ಪಾದಕರಲ್ಲವೇ?

ಸಮಾನ ನಾಗರೀಕ ನೀತಿಸಂಹಿತೆಯನ್ನೇ ಮುಖ್ಯ ಅಜೆಂಡಾವಾಗಿ ಇಟ್ಟುಕೊಂಡಿರುವ ಅವರು ಭಯೋತ್ಪಾದನೆ ವಿಚಾರದಲ್ಲಿ ಸಮಾನ ನಾಗರೀಕ ನೀತಿ ಒಪ್ಪಲು ಸಿದ್ಧವೇ?. ಸಂಘಪರಿವಾರ ಸಂವಿಧಾನವನ್ನು ಕೇವಲ ತಿದ್ದುಪಡಿ ಮಾಡುವುದಿಲ್ಲ. ಅದನ್ನು ಬುಡಮೇಲು ಮಾಡಲು ಹೊರಟಿದೆ. ತೆಹಲ್ಕಾ ಬಯಲು ಮಾಡಿರುವ ಈ ನಗ್ನ ಸತ್ಯಗಳನ್ನೇ ಸಾಕ್ಷಿಗಳೆಂದು ಪರಿಗಣಿಸಿ ಇನ್ನೂ ಇತ್ಯರ್ಥವಾಗದಿರುವ ಗುಜರಾತ್ ಹತ್ಯಾಕಾಂಡದ ಆರೋಪಿಗಳನ್ನು ಕಾನೂನಿಗೆ ಒಳಪಡಿಸಬೇಕು. ಈ ಪ್ರಕರಣದಲ್ಲಿ ಕೇಂದ್ರ ಸರ್ಕಾರ ಈ ಕೂಡಲೇ ಮಧ್ಯ ಪ್ರವೇಶಿಸಬೇಕು. ○

ಒಂದು ಗುಟುಕು ವಿಷ ಕೊಡ್ರಿ

ಪುಟ 8ರಿಂದ

ಸಲಕರಣೆಗಳು ಗಂಡಸರ ಕೆಲಸಕ್ಕೆಂದು ಮಾಡಿದಂತವು. ಅವುಗಳನ್ನೇ ಮಹಿಳೆಯರಿಗೆ ಕೊಟ್ಟು ಕೆಲಸ ಮಾಡಿ ಎನ್ನುವುದು ಅಮಾನವೀಯ. ಜತೆಗೆ ಮಹಿಳೆಯರಿಗೆ ಲೈಂಗಿಕ ಕಿರುಕುಳ. ಈ ಎಲ್ಲಾ ಸಮಸ್ಯೆಗಳ ವಿರುದ್ಧ ಮಹಿಳೆಯರನ್ನು ಜಾಗೃತಗೊಳಿಸಿ ಹೋರಾಟಕ್ಕೆ ಇಳಿಸಬೇಕು' ಎಂದರು.

ಪರಹತ್‌ಬಾದ್‌ಗೆ ಖುದ್ದು ಭೇಟಿ

ಪ್ರಾತ್ಯಕ್ಷಿಕೆಯ ಭಾಗವಾಗಿ ಶಿಬಿರಾರ್ಥಿಗಳೆಲ್ಲ ಫರಹತ್‌ಬಾದ್‌ಗೆ ಭೇಟಿ ಕೊಟ್ಟಿದ್ದೆವು. ಅಲ್ಲಿಯ ಗ್ರಾಮ ಪಂಚಾಯತ್ ಅಧ್ಯಕ್ಷ ಮರಿಯಪ್ಪ ಮತ್ತು ಗುಂಪುಗಳ ಸದಸ್ಯರು ಸ್ವಾಗತಿಸಿದರು. ಗ್ರಾಮ ಸಭೆ ಮಾದರಿಯಲ್ಲಿ ಏರ್ಪಡಿಸಲಾದ ಸಂವಾದ ಕಾರ್ಯಕ್ರಮ ನಿಜಕ್ಕೂ ಅಭೂತಪೂರ್ವವಾಗಿತ್ತು.

ಆರಂಭದಲ್ಲಿ ಸರ್ವರನ್ನು ಸ್ವಾಗತಿಸಿ ಮಾತನಾಡಿದ ಗ್ರಾಮ ಪಂಚಾಯತ್ ಸದಸ್ಯೆ ಪುಷ್ಪಾವತಿ ಠಾಕೂರರವರು ಕೂಲಿಕಾರರನ್ನು ಗುರುತಿಸುವ ವಿಧಾನ, ಗುರುತಿಸಿದವರಿಗೆ ಜಾಬ್ ಕಾರ್ಡ್ ಕೊಡುವುದು, ಕೆಲಸಕ್ಕೆ ಅರ್ಜಿ ಹಾಕುವ ವಿಧಾನ, ಕೆಲಸದಲ್ಲಿಯ ಹಾಜರಾತಿ ದಾಖಲಾತಿ ವಿಧಾನ, ಕೂಲಿ ಪಡೆಯಲು ಅಕೌಂಟ್ ಹೇಗೆ ಮತ್ತು ಎಲ್ಲಿ ಮಾಡಿಸಬೇಕು ಇತ್ಯಾದಿಗಳನ್ನು ದಾಖಲಾತಿಗಳ ಸಹಿತ ವಿವರವಾಗಿ ಬಹಳ ತಾಳ್ಮೆಯಿಂದ ಎಲ್ಲರಿಗೂ ಅರ್ಥವಾಗುವಂತೆ ವಿವರಿಸಿದರು.

ಜಿಲ್ಲಾ ಪಂಚಾಯತ್ ಅಧಿಕಾರಿಗಳಾದ [illegible] ಕೂಲಿಕಾರರು [illegible], ಕೆಲಸ [illegible] ಆ [illegible] ಗ್ರಾಮ ಸಭೆಗಳಲ್ಲಿ ಹೇಗೆ ಅಂಗೀಕಾರ ಪಡೆಯಲಾಗುತ್ತದೆ ಎಂಬುದನ್ನು ವಿವರಿಸುತ್ತಾ ಕೆಲಸದಲ್ಲಿ ಯಂತ್ರಗಳ ಬಳಕೆ ಅನಿವಾರ್ಯ ಮತ್ತು ಡಿಎಸ್‌ಆರ್ ಅಥವಾ ಎಸ್‌ಎಸ್‌ಆರ್ ಪ್ರಕಾರವೇ ಕೆಲಸ ಮಾಡಬೇಕಾಗುತ್ತದೆ ಎಂದರು. ಗುಂಪಿನಲ್ಲಿ ಕುಳಿತ ಮಹಿಳೆಯರು ಯಂತ್ರ ಬಳಕೆಯನ್ನು ಬಲವಾಗಿ ವಿರೋಧಿಸಿದರಲ್ಲದೆ ಅಲ್ಲಿಯೇ ಇದ್ದ ಸ್ವಾಮಿ ಎಂಬ ಇಂಜಿನಿಯರ್‌ನನ್ನು ತರಾಟೆಗೆ ತೆಗೆದುಕೊಂಡರು. ಗರ್ಭಿಣಿಯರು, ಮಹಿಳೆಯರು ವೃದ್ಧರೆನ್ನದೆ ಎಲ್ಲರಿಗೂ ಒಂದೇ ರೀತಿ ಕೆಲಸ ಕೊಡುವುದು ಮತ್ತು ಐದಾರು ಕಿ.ಮೀ. ದೂರದಲ್ಲಿ ಕೆಲಸದ ಜಾಗ ನಿಗದಿಪಡಿಸಿ ಕೆಲಸಕ್ಕೆ ಬರಲು ಕೇವಲ ಒಂದೇ ಟ್ರಾಕ್ಟರನ್ನು ಕಳಿಸುವುದು ಹೀಗೆಲ್ಲಾ ತೊಂದರೆ ಕೊಡುತ್ತಾರೆಂದು ದೂರಿದರು, ಒಟ್ಟಾರೆ ಈ ಸಂವಾದದಲ್ಲಿ ಶಿಬಿರಾರ್ಥಿಗಳಿಗೆ ಅಧಿಕಾರಿಗಳ ಧೋರಣೆಗಳು ಮತ್ತು ಕೂಲಿಕಾರರ ಕಷ್ಟಗಳು ಎರಡರ ಚಿತ್ರಣವನ್ನು ಏಕಕಾಲಕ್ಕೆ ಪಡೆಯುವಂತಾಯ್ತು.

ಶಿಬಿರದ ಕೊನೆಯಲ್ಲಿ ಶಿಬಿರಾರ್ಥಿಗಳಲ್ಲಿ 'ಸಂವಾದ' ಏರ್ಪಡಿಸಲಾಗಿತ್ತು. ಗುಲಬರ್ಗಾ ತಾಲ್ಲೂಕು ಅಂಗನವಾಡಿ ನೌಕರರ ಸಂಘದ ಅಧ್ಯಕ್ಷರಾದ ಗೌರಮ್ಮ 5 ಗ್ರಾಮ ಪಂಚಾಯತ್‌ಗಳ ಈ ಯೋಜನೆ ಜಾರಿಗೆ ಯತ್ನಿಸಿದಾಗ ಎದುರಾದ ಸಮಸ್ಯೆ ವಿವರಿಸಿದರು. ಗ್ರಾಮಗಳಲ್ಲಿ ಬೇರುಬಿಟ್ಟ ಪಾಳೆಯಗಾರರನ್ನು ಹೇಗೆ ಎದುರಿಸಿ 24 ಗುಂಪುಗಳ ರಚನೆ ಮಾಡಿದರು. ಆ ಗುಂಪುಗಳಿಗೆ ಹೇಗೆ ಕೆಲಸ ಕೊಡಿಸಿದರು ಎಂಬುದನ್ನು ವಿವರಿಸಲೇ ಒಂದು [illegible] ಬರೆವಷ್ಟು ಶ್ರೀಮಂತ ಅನುಭವ ಗೌರಮ್ಮನವರದು.

ರಾಯಚೂರು ಜಿಲ್ಲೆಯಲ್ಲಿ ಕೂಲಿಕಾರರನ್ನು ಜಾಗೃತಗೊಳಿಸಲು ಜಿಲ್ಲಾ ಮತ್ತು ತಾಲ್ಲೂಕು ಸಮಾವೇಶಗಳನ್ನು ಹೇಗೆ ನಡೆಸಲಾಯಿತೆಂದು ವಿವರಿಸಿದ ತಿಪ್ಪಯ್ಯ ನಾಯಕರು ಗ್ರಾಮೀಣ ಪಾಳೆಯಗಾರರನ್ನು ಎದುರಿಸುವುದರ ಜತೆಗೆ ಅಧಿಕಾರಿಗಳ ಭ್ರಷ್ಟಾಚಾರಗಳ ವಿರುದ್ಧ ಹೋರಾಡಬೇಕಾಯಿತು. ಇದರಿಂದಾಗಿ ಜಿಲ್ಲೆಯಲ್ಲಿ 4 ಜನ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳು, 3 ಜನ ಇಂಜಿನಿಯರ್‌ಗಳು ಒಬ್ಬ ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ಸಹ ಸಸ್ಪೆಂಡ್ ಆಗುವಂತಾಯಿತು ಎಂದರು.

ಬೀದರ್ ಜಿಲ್ಲೆಯ ಅಂಬುಬಾಯಿಯವರು ಮಹಿಳೆಯರಿಗೆ ಹೇಗೆ ಕೆಲಸ ನಿರಾಕರಿಸಲಾಗುತ್ತಿತ್ತು. ಗ್ರಾಮ ಪಂಚಾಯತ್‌ಗಳಲ್ಲಿ ಮಹಿಳಾ ಗ್ರಾಮ ಪಂಚಾಯತ್ ಸದಸ್ಯರು ಬದಲು ಅವರ ಗಂಡಂದಿರೆ ಹೇಗೆ ಅಧಿಕಾರ ಚಲಾಯಿಸುತ್ತಿದ್ದರು ಅಂತವರನ್ನು ಹೇಗೆ ಹೋರಾಟ ಮಾಡಿ ನಿಲ್ಲಿಸಲಾಯಿತು. ಆ ಮೂಲಕ ಗುಂಪುಗಳಿಗೆ ಹೇಗೆ ಕೆಲಸ ಕೊಡಿಸಲು ಸಾಧ್ಯವಾಗಿದೆಯೆಂಬುದನ್ನು ವಿವರಿಸಿದರು.

ಈ ಮುಖ್ಯ ವಿಷಯಗಳಿಗೆ ಪೂರಕವಾಗಿ ತಮ್ಮ ಕ್ಷೇತ್ರದ ಅನುಭವದವನ್ನು ವಿ.ಕೆ. ಸಲಗರದ ಮೋಹನ ಕಟ್ಟಿಮನಿ, ಚಿಂಚೋಳಿಯ ಶರಣಬಸಪ್ಪ, ಹುಮಾನಬಾದ್‌ನ ಶಿವಾನಂದ, ರಾಯಚೂರಿನ ಕರಿಯಪ್ಪ ಅಚ್ಚೊಳ್ಳಿ, ಸಿಂಧನೂರಿನ ನಾರಾಯಣ ಕಿಲ್ಲೇದ್, ಬಳ್ಳಾರಿಯ ಜಗನ್ನಾಥ, ಬೆಳಗಾಂವನ ನಾಗಪ್ಪ, ಹಾಸನದ ಲಿಂಗರಾಜ ಮುಂತಾದವರು ಮಾತನಾಡಿದರು. ಒಟ್ಟು 10 ಜಿಲ್ಲೆಗಳಿಂದ ಶಿಬಿರಾರ್ಥಿಗಳು ಭಾಗವಹಿಸಿದ್ದು, ಸುಮಾರು 10 ಕ್ಕೂ ಹೆಚ್ಚು ಮಹಿಳೆಯರಿದ್ದುದು ಶಿಬಿರದ ಯಶಸ್ಸಿಗೆ ಸಾಕ್ಷಿಯಾಗಿತ್ತು.

ಕೂಲಿ ದರ 100 ಎಂದಾಗಬೇಕು. ಕೂಲಿ ದರ ಹೆಚ್ಚಾದಾಗಲೆಲ್ಲ ಎಸ್‌ಎಸ್‌ಆರ್ ಮತ್ತು ಡಿಎಸ್‌ಆರ್ ಪಟ್ಟಿ ಪರಿಷ್ಕರಣೆಗೊಳ್ಳಬೇಕು. ಇಡೀ ರಾಜ್ಯದಲ್ಲಿ ಒಂದೇ ಡಿಎಸ್‌ಆರ್ ರೂಪುಗೊಳ್ಳಬೇಕು. ಕೆಲಸದ ಪ್ರಮಾಣ ನಿಗದಿ ಮಾಡುವಾಗ ಪುರುಷರಿಗೆ, ಮಹಿಳೆಯರಿಗೆ, ಗರ್ಭಿಣಿಯರಿಗೆ, ವೃದ್ಧರಿಗೆ, ಅಂಗವಿಕಲರಿಗೆ ಪ್ರತ್ಯೇಕತೆ ಕಾಯ್ದುಕೊಳ್ಳಬೇಕು. ಕೆಲಸ ನಿಗದಿಗೆ ಆಧಾರ 'ಟೈಂ ಮೋಷನ್ ಸ್ಟಡಿ ಫಾರ್ ವರ್ಕ್' ಎಂದಾಗಬೇಕು. ಈಗಿರುವ 12 ವಿಧ ಕೆಲಸಗಳ ಜತೆ ಇನ್ನೂ ಹಲವನ್ನು ಸೇರಿಸಬೇಕು. ಭ್ರಷ್ಟಾಚಾರ ತಡೆಗಟ್ಟಲು ವರ್ಷಕ್ಕೊಮ್ಮೆ ಸಾರ್ವಜನಿಕ ಪರಿಶೀಲನೆ- ಸೋಶಿಯಲ್ ಅಡ್ಡಿಟ್ಟಾಗಬೇಕು. ಪ್ರತಿ ಜಿಲ್ಲೆಗೆ ದೂರು (ಗ್ರೀವಿಯನ್ಸ್ ಕಮಿಟಿ ಸಮಿತಿಗಳಾಗಬೇಕು. ಕೆಲಸಕ್ಕೆ ಹೋಗುವ) ಅಂತರ ಎರಡುವರೆ ಕಿ.ಮೀ.ಗೆ ಸೀಮಿತ ಮಾಡಬೇಕು. ಕೆಲಸದ ಸ್ಥಳದಲ್ಲಿ ಕನಿಷ್ಠಾವಶ್ಯಕತೆಗಳನ್ನು ಮಾಡಲೇ ಬೇಕು ಇತ್ಯಾದಿ ವಿಷಯಗಳಲ್ಲಿ ಶಿಬಿರಾರ್ಥಿಗಳು ಸಹಮತ ವ್ಯಕ್ತಪಡಿಸಿದರು.

'ನಾನು ಅಂಜೋಮಗಳಲ್ಲ'

ಶಿಬಿರದ ಪ್ರಿನ್ಸಿಪಾಲರಾದ ಕಾಂ: ನಿತ್ಯಾನಂದಸ್ವಾಮಿಯವರು ಕೆಲಸಕ್ಕಾಗಿ ಹೋರಾಟ ಎಷ್ಟು ಮುಖ್ಯವೋ ಸಂಘಟನೆ ಕೂಡ ಅಷ್ಟೆ ಮುಖ್ಯ. ಇವೆರಡು ಒಂದೆ ನಾಣ್ಯದ 2 ಮುಖಗಳಿದ್ದಂತೆ. ನಾಣ್ಯದ ಒಂದು ಮುಖ ಸವೆದರೆ ಅದು ಹೇಗೆ ನಡೆಯುವುದಿಲ್ಲವೋ ಹಾಗೆ ಇವೆರಡರಲ್ಲಿ ಒಂದನ್ನು ನಾವು ನಿರ್ಲಕ್ಷಿಸಿದರೆ 'ಬದುಕಿನ ರಥ' ನಡೆಯುವುದಿಲ್ಲ ಎಂದರು. ಶಿಬಿರಾರ್ಥಿಗಳು ಬಹಳಷ್ಟು ಪಡೆದ ಖುಷಿಯಲ್ಲಿದ್ದರು. ನನ್ನ ಕಿವಿಯಲ್ಲಿ ಮಾತ್ರ 'ಕೆಲಸ ಕೊಡ್ರಿ, ಕೆಲಸ ಕೊಡಾಕ ಆಗದಿದ್ರ ಒಂದು ಗುಟುಕು ವಿಷ ಕೊಡ್ರಿ' ಎಂದ ಮುದುಕಿಯ ದನಿ ಮೊರೆಯುತ್ತಿರುವಾಗಲೇ 'ನನಗ ಎಷ್ಟು ಕಷ್ಟ ಬರಲಿ, ನಾನು ಅಂಜೋ ಮಗಳಲ್ಲ, ಈ ಅಧಿಕಾರಿಗಳ, ರಾಜಕಾರಣಿಗಳ ರಿಸ್ತಾಪನದ ಅದು ಬಯಲಿಗೆ ಹಾಕ್ತಿನಿ. ಕೂಲಿ ಮಾಡೋರಿಗೆ ಕುತ್ತು ಬಂದಾಗ ಸುಮ್ಮ ಕುಂದ್ರೋಮಗಳಲ್ಲ ನಾನು. ನನ್ನ ಮೊಹಬತ್ ಏನಿದ್ದರೂ ಈ ಕೂಲಿಕಾರರ ಜತೆ. ಎಷ್ಟು ಹೋರಾಟ ಆಗಬೇಕಂತಾದ ಅವು ಅಷ್ಟು ಮಾಡಿ ತೋರಿಸ್ತೀನಿ- ಎಂದೆಲ್ಲಾ ಸಂವಾದದಲ್ಲಿ ಗುಡುಗಿದ ಗೌರಮ್ಮ ಪಾಟೀಲರ ಮಾತುಗಳು ಮುಂದೇನಾಗಲಿದೆ ಎಂಬುದರ ಮುನ್ಸೂಚನೆಯಂತಿದ್ದವು.

ಕೇಸರಿ ಹೆಡೆಯ ನೆರಳಿನಲ್ಲಿ ಬಾಬಾಬುಡನ್ ಗಿರಿ

ಹಿಂದೂ-ಮುಸ್ಲಿಂ ಶಾಂತ ಮನಸ್ಸುಗಳಿಗೆ ಶ್ರದ್ಧಾ ಕೇಂದ್ರವಾಗಿದ್ದ ಬಾಬಾಬುಡನ್‌ಗಿರಿಯಲ್ಲಿನ ದರ್ಗಾವು ವಿಕೃತ ಮನಸ್ಸುಗಳಿಂದಾಗಿ ವಿವಾದದ ಸ್ಥಳವಾಗುತ್ತಿದೆ. ಐತಿಹಾಸಿಕ ಬಾಬರಿ ಮಸೀದಿಯನ್ನು ಉರುಳಿಸಿದ ನಂತರ ಅಯೋಧ್ಯೆಯ ರಂಪಾಟಕ್ಕೆ ಅಲ್ಲಿಯ ಜನ ಭಕ್ತಿ, ಶ್ರದ್ಧೆಗೆ ಹಿಂಸೆಯ ಗಲಭೆಯ ಕಾವಲು ಬೇಕಿಲ್ಲ ಎಂದ ನಂತರ ಸಂಘ ಪರಿವಾರದ ರಾಜಕೀಯ ಆಟಕ್ಕೆ ಜನರು ಶ್ರದ್ಧೆಯನ್ನು ಬಲಿ ನೀಡಲು ನಿಧಾನವಾಗಿ ನಿರಾಕರಿಸಿದ್ದಾರೆ. ಆದರೂ ಅಂತಹುದೇ ಪ್ರಯತ್ನವನ್ನು ದಕ್ಷಿಣ ಭಾರತದಲ್ಲೂ ಮಾಡುವುದು ಹಾಗೂ ಆ ಮೂಲಕ ಅಧಿಕಾರಕ್ಕೆ ಬರುವುದು ಸಂಘ ಪರಿವಾರದ ಅಜೆಂಡಾವಾಗಿತ್ತು. ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಅನಂತಕುಮಾರ್ ಅವರು ಬಾಬಾಬುಡನ್‌ಗಿರಿಯನ್ನು ಅಯೋಧ್ಯೆಯನ್ನಾಗಿಯೂ, ಕರ್ನಾಟಕವನ್ನು ಗುಜರಾತ್‌ಅನ್ನಾಗಿಯೂ ಮಾಡುವುದಾಗಿ ಬೇಲೂರಿನಲ್ಲಿ ಸಾರಿದ್ದರು. ಹಾಸನದಲ್ಲಿ ಚುನಾವಣೆಯಲ್ಲಿ ಬಿಜೆಪಿಗೆ ಮತದಾರರು ಕೊಟ್ಟ ಲಾತವನ್ನು ಇನ್ನು ಮುಟ್ಟಿಕೊಳ್ಳುತ್ತಿರುವಾಗಲೇ ಕುಮಾರಸ್ವಾಮಿ ಬಿಜೆಪಿಯ ಕೈ ಹಿಡಿದಿದ್ದು ಎಲ್ಲರಿಗೂ ಗೊಂತಿರುವಂತ್ತದ್ದೆ.

ಬಾಬಾ ಬುಡನ್‌ಗಿರಿಯ ಹಿಂದೂ-ಮುಸ್ಲಿಂ ಶಾಂತ ಮನಸ್ಸುಗಳಗೆ ಶ್ರದ್ಧಾ ಕೇಂದ್ರ. ಸೂಫಿ ಪರಂಪರೆಯನ್ನು ಎತ್ತಿ ಹಿಡಿದ ಸ್ಥಳ. ಅಷ್ಟೇ ಅಲ್ಲದೆ ದತ್ತಾತ್ರೇಯ ಸ್ವಾಮಿಯು ವೈದಿಕ ಪರಂಪರೆಯನ್ನು, ಅದರ ಡಾಂಬಿಕತೆಯನ್ನು, ಅದರ ಜನವಿರೋಧಿತನದಿಂದ ಬೇಸತ್ತು ಆ ವೇದಗಳನ್ನು ನಾಲ್ಕು ನಾಯಿಗಳನ್ನಾಗಿ ಮಾಡಿಕೊಂಡನೆಂದು ಒಂದು ನಂಬಿಕೆ. ಹಾಗಾಗಿ ಡಾಂಬಿಕರಿಗೆ ಈ ದರ್ಗಾದ ಮೇಲೆ ವಿಪರೀತ ಸಿಟ್ಟು. ಈ ದರ್ಗಾವನ್ನು ಹೇಗಾದರೂ ಮಾಡಿ ವೈದಿಕ ನೆಲೆಯನ್ನಾಗಿಸಲು ವೈದಿಕ ಪರಂಪರೆಯ ಪ್ರತಿಷ್ಠಾಪನೆಯ ಗುತ್ತಿಗೆದಾರ ಸಂಘ ಪರಿವಾರಕ್ಕೆ ಹಠ. ಅದಕ್ಕಾಗಿ ಎಷ್ಟು ಬೇಕಾದರೂ ತಲೆಗಳು ಉರುಳಿದರೂ ರಕ್ತ ತರ್ಪಣ ನೀಡುವುದಕ್ಕಾದರೂ ಸಿದ್ಧತೆ!

ಉತ್ತರ ಭಾರತದಲ್ಲಿ ಅಯೋಧ್ಯೆಯ ರಾಮಮಂದಿರದ ನಿರ್ಮಾಣದ ಹೆಸರಿನಲ್ಲಿ ಚೆಲ್ಲಿದ ರಕ್ತ, ಉರುಳಿದ ತಲೆಗಳನ್ನು ಕಂಡ ಜನ ಸಂಘಪರಿವಾರದ ಸಂತತಿಗೆ ಬಿಸಿ ನೀರನ್ನು ಬಿಟ್ಟ ನಂತರ ದಕ್ಷಿಣ ಭಾರತಕ್ಕೆ ಬಂದ ಸಂಘ ಪರಿವಾರಕ್ಕೆ ಕಂಡಿದ್ದು, ಈ ದರ್ಗಾ, ಭಜರಂಗಿಗಳು ಶುರು ಮಾಡಿದರು ಕಿತಾಪತಿ. ಮುತಾವಲಿಗಳ ಮೇಲೆ ಬೆಟ್ಟದ ಮೇಲಿನ ಅಂಗಡಿಗಳ ಮೇಲೆ, ಮಾಣಿಕ್ಯಧಾರ ಮಾರ್ಗ, ಅಲ್ಲಿನ ಸಮಾಧಿಗಳ ಮೇಲೆ ಹಸಿರುಬಟ್ಟೆ ಹೊದಿಸಬಾರದು ಮುಂತಾದ ಹಲವು ಕಿರಿಕ್ಕುಗಳನ್ನು ಮಾಡಲು ಶುರುವಿಟ್ಟುಕೊಂಡರು.

ರಾಜಕೀಯ ಇಚ್ಛಾಶಕ್ತಿಯ ಬದಲು ಚಂಚಲತೆ

ವಿವಾದ ಶುರುವಾಗಿ ಹತ್ತು ವರ್ಷಗಳಾಗುತ್ತಾ ಬಂದಿವೆ. ಈಗಿನ ಎರಡು ವರ್ಷಗಳಿಂದ ತೆಗೆದುಕೊಂಡಂತ ಕಠಿಣ ನಿರ್ಧಾರಗಳನ್ನು ಹತ್ತು ವರ್ಷಗಳ ಮುಂಚೆಯೇ ತೆಗೆದುಕೊಂಡಿದ್ದರೆ ಈ ವಿವಾದ ಈ ಮಟ್ಟಿಗೆ ಬೆಳೆಯುತ್ತಿರಲಿಲ್ಲವೇನೋ. ಮುಜರಾಯಿಯಿಂದ ವಕ್ಫ್‌ಗೆ, ವಕ್ಫ್‌ನಿಂದ ಮುಜರಾಯಿಗೆ ಕೊನೆಗೆ ಕೋರ್ಟ್‌ಗೆ ತಲುಪಿದ ಈ ವಿವಾದ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿಯೇ ಈ ರೂಪ ಪಡೆದುಕೊಂಡಿತು. ಕಾಂಗ್ರೆಸ್‌ನ ಮೃದು ಹಿಂದೂ ಧೋರಣೆಯು ಕೂಡ ಈ ವಿವಾದಕ್ಕೆ ಪುಷ್ಠಿ ನೀಡಿತು. ಎಸ್.ಎಂ.ಕೃಷ್ಣ ನೇತೃತ್ವದ ಅಂತಿಮ ದಿನಗಳಲ್ಲಿ ಡಿ.ಬಿ.ಚಂದ್ರೇಗೌಡರೇ ಹೋಮದಲ್ಲಿ ಪಾಲ್ಗೊಂಡಿದ್ದು ಅದಕ್ಕೆ ನಿದರ್ಶನ. ನೂರು ವರ್ಷಗಳಿಂದ ಅಸ್ತಿತ್ವದಲ್ಲಿರದ ಪೂಜಾ ವಿಧಿಗಳಿಗೆ ಅವಕಾಶವಿಲ್ಲವೆಂದು ಕೋರ್ಟ್ ಹೇಳಿದರೂ ತಿರುಚುವ ಪ್ರಾವೀಣ್ಯ ಪಡೆದ ಸಂಘ ಪರಿವಾರ ಅದಕ್ಕೆ ಬೆಲೆ ನೀಡಲೇ ಇಲ್ಲ.

ಅಚ್ಚಹಸಿರಿನ ಬಾಬಾ ಬುಡನ್‌ಗಿರಿಯಲ್ಲಿ ಸಂಘ ಪರಿವಾರ ನಡೆಸುತ್ತಿರುವುದೇನು?

ಗೋಬೆಲ್ಸ್‌ನ ಸಂತತಿಯವರಾದ ಸಂಘ ಪರಿವಾರ ಅದನ್ನು ಪಾಲಿಸಲು ಹೋಯಿತು. ಕೋರ್ಟ್‌ನಲ್ಲಿ ಅಫಿಡವಿಟ್ ಸಲ್ಲಿಸುವಾಗ ಸರ್ಕಾರ ದೃಢತೆಯನ್ನು ತೋರಲೇ ಇಲ್ಲ. ನಿರ್ಣಾಯಕ ಹಂತದಲ್ಲಿ ಬಿಜೆಪಿ ಜೆಡಿ(ಎಸ್) ಸರ್ಕಾರ ತಪ್ಪು ಅಫಿಡೆವಿಟ್‌ಅನ್ನು ಸಲ್ಲಿಸಿತು. ಜೊತೆಗೆ ಧಾರ್ಮಿಕ ದತ್ತಿ ಕಾಯಿದೆಗೆ ವಿವಾದಾತ್ಮಕ ತಿದ್ದುಪಡಿ ತಂದಾಗಲೇ ಆಡಳಿತದಲ್ಲಿ ಸಂಘ ಪರಿವಾರದ ಗುತ್ತಿ ಅಜೆಂಡಾದ ಜಾರಿ ನಿಚ್ಚಳವಾಗಿದ್ದು.

ಚಿಕ್ಕಮಗಳೂರಿನ ಪ್ರಮುಖ ರಾಜಕೀಯ ಪಕ್ಷಗಳಾದ ಕಾಂಗ್ರೆಸ್(ಐ) ಜನತಾದಳ, ಸಿಪಿಐ(ಎಂ), ಸಿಪಿಐ, ಮುಂತಾದವುಗಳಲ್ಲಿ ಸಿಪಿಐ(ಎಂ) ಪ್ರಬಲವಾದ ಪ್ರತಿರೋಧವನ್ನು ಸಂಘಟಿಸಿತು. ಸಿಪಿಐ ಪ್ರತಿರೋಧದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದರೂ ಸಾಕೆನಿಸಲಿಲ್ಲ. ಕಾಂಗ್ರೆಸ್‌ನ ಮೃದುಧೋರಣೆ ಹಾಗೂ ಜನತಾದಳದ ಹಿಂಜರಿಕೆ ಬುದ್ದಿಯಿಂದಾಗಿ ನಿರೀಕ್ಷಿತ ಮಟ್ಟದಲ್ಲಿ ಒಟ್ಟು ಪ್ರತಿರೋಧ ಹೊರಹೊಮ್ಮದಿದ್ದರೂ ನಿರ್ಣಾಯಕವಾಗಿದ್ದಿತು. ಡಿವೈಎಫ್ಐ ಎರಡು ಬಾರಿ ಸಂಘಟಿಸಿದ 'ಸೌಹಾರ್ದದೆಡೆಗೆ ಯುವಜನರ ನಡಿಗೆ' ಹಗೂ 'ಸೌಹಾರ್ದದೆಡೆಗೆ ನಮ್ಮ ನಡಿಗೆ', 'ಪ್ರೀತಿ ಹಂಚೋಣ ಬನ್ನಿ' ಕಾರ್ಯಕ್ರಮಗಳು ನಾಡಿನೆಲ್ಲೆಡೆಯಿಂದ, ರಾಷ್ಟ್ರೀಯ ಮಟ್ಟದಲ್ಲೂ ಪ್ರಗತಿಪರರ, ಬುದ್ದಿ ಜೀವಿಗಳನ್ನು ಜಾತ್ಯಾತೀತ ನಿಲುವಿನ ವ್ಯಕ್ತಿ, ಸಂಘ ಸಂಸ್ಥೆಗಳ ಪ್ರತಿರೋಧ ಉಲ್ಲೇಖನೀಯ. ನಂತರ ಬಾಬಾಬುಡನ್‌ಗಿರಿಯಲ್ಲಿ ಸೌಹಾರ್ದತೆಯನ್ನು ಕಾಪಾಡುವ ನಿಟ್ಟಿನಲ್ಲಿ ಕೋಮುಸೌಹಾರ್ದ ವೇದಿಕೆಯ ಪಾತ್ರ ಇದ್ದರೂ ಅದರೊಳಿಗನ 'ಒಂದು ಗುಂಪಿನ' ಪ್ರಾಬಲ್ಯ ಸಾಧಿಸುವ ಮೇಲಾಟದ ಯತ್ನದಿಂದಾಗಿ ಅದು ಏಕಾಂಗಿಯಾಯಿತು.

ಜಿಲ್ಲಾ ರಾಜಕೀಯದಲ್ಲಿ 2004ರ ಹಿಂದೆ ಕಾಂಗ್ರೆಸ್ ಪ್ರಾಬಲ್ಯವಿದ್ದುದು ನಂತರ ಬಿಜೆಪಿಯ ಪ್ರಾಬಲ್ಯ ಬಂತು. ಅದಕ್ಕೆ ಪ್ರಮುಖ ಕಾರಣ ಕಾಂಗ್ರೆಸ್‌ನ ಆಡಳಿತ ವೈಫಲ್ಯ. ಜನರಿಗೆ ಮೂಲಭೂತ ಸೌಲಭ್ಯ ಒದಗಿಸದ ಕಾಂಗ್ರೆಸ್ ಅನ್ನು ಜನ ತಿರಸ್ಕರಿಸಿದರು. ಸಂಘ ಪರಿವಾರ ಬಯಸಿದಂತೆಯೇ ಆಯಿತು. ಕರಾವಳಿಯ ಪ್ರಯೋಗವನ್ನು ಮಲೆನಾಡಿಗೆ ವಿಸ್ತರಿಸಿದರು. ವಿವಾದಕ್ಕೆ ಮತ್ತಷ್ಟು ಬಲವನ್ನು ಕೋಢೀಕರಿಸಿದರು.



ಬೆಂಗಳೂರಿನಲ್ಲಿ ಅಕ್ಟೋಬರ್ 23 ರಂದು ಜನವಾದಿ ಮಹಿಳಾ ಸಂಘಟನೆ ಮತ್ತಿತರ ಸಂಘಟನೆಗಳ ನೇತೃತ್ವದಲ್ಲಿ ಸಂಕೀರ್ತನಾ ಯಾತ್ರೆ ವಿರೋಧಿಸಿ ಪ್ರತಿಭಟನೆ

ವಿವಾದದ ವಾಸ್ತವ

ರಾಜಕೀಯ ಲಾಭಕ್ಕಾಗಿ ಧಾರ್ಮಿಕ ನಂಬಿಕೆಯನ್ನು ದುರುಪಯೋಗ ಪಡಿಸಿಕೊಳ್ಳುವ ಸಂಘ ಪರಿವಾರ ಚಿಕ್ಕಮಗಳೂರಿನಲ್ಲಿ ಮಾಡಿರುವ ಭ್ರಷ್ಟಾಚಾರ, ಕುಕೃತ್ಯಗಳನ್ನು ಮುಚ್ಚಲು ಅವರಿಗೆ ಹಿಂದೂ ಧರ್ಮದ ರಕ್ಷಣೆಯ ಸೋಗು ಅವಶ್ಯಕ. ವಾಸ್ತವವಾಗಿ ಅವರು ಹೇಳುವುದೆಲ್ಲ ವೈದಿಕ ಧರ್ಮದ ಆಚರಣೆಗಳನ್ನು ಹೇಳುವುದು ಮಾತ್ರ ಹಿಂದೂ ಧರ್ಮ.

ಸಂಪನ್ಮೂಲದ ದೃಷ್ಟಿಯಿಂದ ಸಂಪತ್ಭರಿತ ಜಿಲ್ಲೆಯಾದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೂಲಿ ಕಾರ್ಮಿಕರ ಬವಣೆ, ಜೀತ ಪದ್ಧತಿ, ಮೈಲಿಗಟ್ಟಲೆ ಶಾಲೆಗಾಗಿ, ಆಸ್ಪತ್ರೆಗಾಗಿ ಅಲೆಯುತ್ತಿದ್ದುದು ಹಾಗೂ ಜನತೆಯ ಅಸಮಾಧಾನವು ಈ ಹತ್ತು ವರ್ಷಗಳಲ್ಲಿ



ಸ್ಫೋಟಗೊಳ್ಳುವ ಹಂತಕ್ಕೆ ಬಂದಿತ್ತು. ಯುವಜನ ಚಳುವಳಿ, ಕಾರ್ಮಿಕ, ರೈತ ಹಾಗೂ ದಲಿತ ಚಳುವಳಿಗಳು ಪ್ರಜಾಸತ್ತಾತ್ಮಕ ಚಳುವಳಿಗಳು ಪ್ರವರ್ಧಮಾನಕ್ಕೆ ಬರುತ್ತಿದ್ದ ಕಾಲ ಇಂತಹ ಪ್ರಜಾಸತ್ತಾತ್ಮಕ ಚಳುವಳಿಗಳ ದಮನಕ್ಕೆ ಆಳುವ ವರ್ಗ ಹಾಗೂ ಮೂಲಭೂತವಾದಿ ಯಥಾಸ್ಥಿತಿವಾದಿಗಳು ಬಳಸಿಕೊಂಡು ಪೋಷಣೆ ಮಾಡುತ್ತಿರುವುದೇ ಈ ಬಾಬಾಬುಡನ್‌ಗಿರಿಯ ವಿವಾದ.

ಶೋಷಣೆ ಹಾಗೂ ಸಮಸ್ಯೆಗಳ ವಿರುದ್ಧ ಯುವಜನರಲ್ಲಿ ಬೆಳೆಯುತ್ತಿದ್ದ ಅಸಮಾಧಾನವನ್ನು ಹಿಂದೂ ಧರ್ಮದ ರಕ್ಷಣೆಯ ಹೆಸರಿನಲ್ಲಿ ದತ್ತಮಾಲಾಧಾರಿಗಳಾಗಿಸುವ ಮೂಲಕ ದಾರಿ ತಪ್ಪಿಸಿದ್ದೆ ಭಜರಂಗದಳ.

ಶ್ರದ್ಧೆ ಭಕ್ತಿಗಳಿಗೆ ಶ್ರೀಶೂಲ, ಗಲಭೆ ಹಿಂಸೆಯ ಕಾವಲು

ತಮ್ಮತನವನ್ನು ಮೂಲದಿಂದಲೇ ಕಳೆದುಕೊಳ್ಳುವಷ್ಟು ಮೂಢರೇ ನಮ್ಮ ಜನ? ನಮ್ಮ ಸಂಸ್ಕೃತಿಯನ್ನು ಭಾಷೆಯನ್ನು ರಕ್ಷಿಸಿಕೊಳ್ಳಲಾಗದಷ್ಟು ದುರ್ಬಲರೇನಲ್ಲ ನಮ್ಮ ಜನ.

ಹಿಂದೂ ಧರ್ಮ ಅಪಾಯದಲ್ಲಿದೆ ಎಂದು ಸಂಘಪರಿವಾರಕ್ಕೆ ದೂರು ನೀಡಿ ಅದನ್ನು ರಕ್ಷಿಸುವಂತೆ ನಮ್ಮ ಜನ ದುಂಬಾಲು ಬಿದ್ದಿದ್ದಾರೆ ಎನ್ನುವಂತೆ ವರ್ತಿಸುತ್ತಿರುವ ಸಂಘ ಪರಿವಾರ ವಾಸ್ತವವಾಗಿ ಹಿಂದೂ ಧರ್ಮದ ಹೆಸರಿನಲ್ಲಿ ನಾಶ ಮಾಡಿ ವೈದಿಕ ಧರ್ಮದ ಆಚರಣೆಗಳನ್ನು ಹೇರುತ್ತಿದೆ. ಹಿಂದೂ ಧರ್ಮದಲ್ಲಿಲ್ಲದ ಹೋಮ, ಹವನ, ಮಾಲೆ ಧರಿಸುವುದು ಇತ್ಯಾದಿ ವೈದಿಕ ಆಚರಣೆಗಳನ್ನು ಹೇರುತ್ತಿದ್ದಾರೆ ಸಂಘ ಪರಿವಾರದವರು.

ಹಿಂದೂ ಧರ್ಮ ಅಪಾಯದಲ್ಲಿರಬೇಕಾದರೆ ಅದರಲ್ಲಿನ ಮಾನವ ವಿರೋಧಿ ಅಂಶಗಳು ಕಾರಣವಲ್ಲವೇ. ಅವುಗಳನ್ನು ಬಿಟ್ಟು ವಿವಾದಗಳನ್ನಾಗಿಸುವುದರಲ್ಲಿಯೇ ಹಿಂದೂ ಧರ್ಮದ ಪುನರುತ್ಥಾನ ಸಾಧ್ಯವೇ. ಜಾತೀಯತೆ, ಅಸ್ಪೃಶ್ಯತೆ, ಡಾಂಬಿಕತನ, ಧಾರ್ಮಿಕ ಸುಲಿಗೆ, ಕಂದಾಚಾರ ಮುಂತಾದವುಗಳನ್ನು ನಿಲ್ಲಿಸಲು ಸಂಘ ಪರಿವಾರ ಪ್ರಯತ್ನಿಸುತ್ತಿಯೇ. ಧರ್ಮ ರಕ್ಷಕರೇಕೆ ವಿಗ್ರಹ ಕಳ್ಳತನ ಮಾಡಬೇಕು, ಸ್ತ್ರೀಯರನ್ನು ದೇವರಂತೆ ಕಾಣುತ್ತೇವೆ ಎನ್ನುವ ಜನ ವೇಶ್ಯಾವಾಟಿಕೆ ನಡೆಸಬೇಕು, ಕೊಲೆ ಸುಲಿಗೆ ದರೋಡೆಗಳಲ್ಲಿ ಭಾಗವಹಿಸುವುದು, ಮನುಷ್ಯರನ್ನೇ ಸುಡುವುದು ಏಕೆ? ಅದನ್ನು ಯಾವ ಧರ್ಮ ಒಪ್ಪುತ್ತದೆ ಎನ್ನುವುದು ಚಿಕ್ಕಮಗಳೂರಿನ ಸಾಮಾನ್ಯ ಜನರು ಇತ್ತೀಚಿಗೆ ಕೇಳುತ್ತಿರುವ ಪ್ರಶ್ನೆ. ಬಹುಶಃ ಕರಾವಳಿಯ ಅನುಭವದ ಬಿಸಿ ಇಲ್ಲಿಗೆ ತಾಗದಿರಲಿ ಎನ್ನುವ ಮುನ್ಸೂಚನೆ ಇರಬೇಕು.

ಅದಕ್ಕೆ ಜನ ಶ್ರದ್ಧೆ ಭಕ್ತಿಗೆ ತ್ರಿಶೂಲದ ಕಾವಲು ಬೇಕಿಲ್ಲ. ಹಿಂಸೆ ಗಲಭೆ ಬೇಕಿಲ್ಲ ಎಂದು ಸಂಘ ಪರಿವಾರವನ್ನು ತಿರಸ್ಕರಿಸುತ್ತಿದ್ದಾರೆ.

ಕಳೆದ ಎರಡು ವರ್ಷಗಳಿಂದ ಈ ದತ್ತಮಾಲೆ, ಹೋಮ ಹವನಗಳಿಗೆ ಜಿಲ್ಲಾಡಳಿತ ನಿಯಂತ್ರಣ ಮಾಡಿದ್ದರೂ ಜನ ಸಂಘ ಪರಿವಾರದವರ ಪುಂಡಾಟಗಳಿಗೆ ಬೇಸತ್ತಿದ್ದಾರೆ. ಮಕ್ಕಳನ್ನೆಲ್ಲಾ ದಾರಿ ತಪ್ಪಿಸುತ್ತಿರುವ ಬಗ್ಗೆ ಆತಂಕಗೊಂಡಿದ್ದಾರೆ. ಒಂದು ವಾರಕ್ಕೆ ದತ್ತ ಮಾಲಾದಾರಿಗೆ 1000ದವರೆಗೆ ಭತ್ಯೆ ನೀಡುತ್ತಿದ್ದುದು ನಿರುದ್ಯೋಗಿಗಳನ್ನು ಆಕರ್ಷಿಸಿತ್ತು.

ಆದರೆ ಅವರು ಈಗೀಗ ಒಪ್ಪುತ್ತಿಲ್ಲ: ಎರಡು ವರ್ಷಗಳ ಹಿಂದೆ 5 ರಿಂದ 6 ಸಾವಿರ ಜನರನ್ನು ಸಂಘಟಿಸುತ್ತಿದ್ದ ಸಂಘ ಪರಿವಾರ ಈ ಬಾರಿಗೆ 40 ರಿಂದ 50 ಸಾವಿರ ಹಿಂದೂಗಳು ಗಿರಿಗೆ ತೆರಳಿದ್ದಾರೆ ಎಂದರೂ ಅದು 2 ಸಾವಿರ ದಾಟುವುದಿಲ್ಲ. ಪ್ರಮೋದ್ ಮುತಾಲಿಕ್ ಹಾರಾಡಿದರೂ ತಲೆ ಕೆಳಗೆ ಮಾಡಿ ನಿಂತರೂ 300 ಜನರನ್ನು ಸಂಘಟಿಸಲಾಗಲಿಲ್ಲ.

ಈ ನಿರುತ್ಸಾಹ ಏಕೆ? :

ಸತ್ಯ ಗೊತ್ತಾಗಿದೆ. ದಾರಿ ತಪ್ಪುತ್ತಿರುವ ಕುರಿತು ಯುವಕರು ಜಾಗೃತಗೊಂಡಿದ್ದಾರೆ. ಭಜರಂಗದಳದ ಕಾರ್ಯಕರ್ತರು ಕರಾವಳಿಯಲ್ಲಿ ಕೊಲೆ, ಸುಲಿಗೆ, ವಿಗ್ರಹ ಕಳ್ಳತನ, ಅತ್ಯಾಚಾರದಂತಹ ಪ್ರಕರಣಗಳಲ್ಲಿ ಸಿಕ್ಕಿ ಬೀಳುತ್ತಿರುವಾಗ, ಶೃಂಗೇರಿಯಲ್ಲಿ ಬಸ್‌ಅನ್ನು ಸುಟ್ಟಿದ್ದು ಭಜರಂಗದಳದ ಕಾರ್ಯಕರ್ತರೇ ಎಂದು ಬಯಲಾದಾಗ, ಈ ಎಲ್ಲ ಧಾರ್ಮಿಕ ಡಾಂಬಿಕತನ ರಾಜಕೀಯ ಆಟಕ್ಕೆ ಬಳಕೆಯಾಗುತ್ತಿರುವುದು ಎಂದು ತಿಳಿದೊಡನೆಯೇ ಹೆಚ್ಚಿನ ಯುವಕರೆಲ್ಲ ಗುಡ್‌ಬೈ ಹೇಳಿದರು. ಒಂದು ಬಾರಿ ಭಾಗವಹಿಸಿದವರು ಮತ್ತೊಂದು ಬಾರಿ ಭಾಗವಹಿಸಲು ಹಿಂಜರಿಯುತ್ತಿರುವುದು ತಿಳಿದು ಬಂದಿದೆ.

ಒಳಗೊಳಗೆ ಸಂಶಯ, ಅಭದ್ರತೆ ಕಾಡುತ್ತಿರುವುದು ಅವರಿಗೆ ಬೇಕಿಲ್ಲವಾಗಿದೆ. ಆದ್ದರಿಂದಲೇ 40 ಸಾವಿರ ಕಾರ್ಯಕರ್ತರೆಂದು ಆರಂಭದಲ್ಲೇ ಹೇಳಿದ್ದರೂ ಕಾರ್ಯಕ್ರಮ ಆರಂಭವಾದಾಗ 5 ಸಾವಿರಕ್ಕೆ ಬಂದರು. ಜಿಲ್ಲಾಡಳಿತ 3 ಸಾವಿರ ಜನ ಸಾಕು ಎಂದಾಗ ಅಷ್ಟು ಬರುವುದು ಖಚಿತವಿಲ್ಲವಾದ್ದರಿಂದ ಸರಿ ಎಂದರು ಸಂಘಟಕರು.

ಆರಂಭದಲ್ಲಿ ಹಾರಾಡುತ್ತಿದ್ದ ಭಜರಂಗಿಗಳು ಕಳೆದ ಎರಡು ವರ್ಷಗಳಿಂದ ಜಿಲ್ಲಾಡಳಿತ ಏನೇ ಷರತ್ತುಗಳನ್ನು ಹಾಕಿದರೂ ತಲೆ ಆಡಿಸುವ ಮಟ್ಟಕ್ಕೆ ಚಿಕ್ಕಮಗಳೂರಿನ ಜನ ಸಂಘಪರಿವಾರಕ್ಕೆ ಬುದ್ದಿಯನ್ನು ನಿಶ್ಯಬ್ಧವಾಗಿ ಕಲಿಸಿದ್ದಾರೆ.

ಸಜ್ಜನರು ಬಹಳಷ್ಟು ಇದ್ದರೂ ದುರ್ಜನರು ಕಡಿಮೆ ಇದ್ದರೂ ದುರ್ಜನರ ಅಬ್ಬರದ ಮುಂದೆ ಸಜ್ಜನರ ಧ್ವನಿ ಕೇಳುವುದಿಲ್ಲವಂತೆ. ಏಕೆಂದರೆ ಸಜ್ಜನರು ಒಂದೇ ಸಾರಿ ಏಕ ಧ್ವನಿಯಾಗಿ ಹೇಳುವುದು ಅಪರೂಪವಾಗುತ್ತಿದೆ. ಮೌನ ಮುರಿದು ಪ್ರತಿರೋಧಿಸಬೇಕಾಗಿದೆ. ಪ್ರಶ್ನಿಸುವುದೇ ವಿಕಾಸದ ಮೊದಲ ಹೆಜ್ಜೆ ಆಗಿರುವಾಗ, ಪ್ರತಿರೋಧ ನಾಗರೀಕತೆಯ ಕಟ್ಟುವಿಕೆಯ ತಳಪಾಯವಲ್ಲವೆ ಅಂತಹ ಧ್ವನಿಗಾಗಿ ನಾಡು ಕಾಯುತ್ತಿದೆ. ಅದು ದರ್ಗಾದ ಸೌಹಾರ್ದತೆಯನ್ನು ಉಳಿಸುವುದಕ್ಕಾಗಿಯೇ ಆಗಲಿ ಎಂಬುದು ಚಿಕ್ಕಮಗಳೂರು ಜನತೆ ಹಾಗೂ ನಾಡಿನ ಜನತೆಯ ಆಶಯ. ಜನರ ಆಶಯ ಈಡೇರಿಸೋಣ.

ವರದಿ: **ಬಿ.ಎಸ್.ಲಿಂಗರಾಜು** ಹಾಸನ

ಜಗದಗಲ

ಶರತ್‌ಚಂದ್ರ

ಇರಾನ್ ಮೇಲೆ ಅಮೆರಿಕನ್ ದಿಗ್ಭಂಧನ

ಇರಾನ್ ಮೇಲೆ ಅಮೆರಿಕ ಏಕಪಕ್ಷೀಯವಾಗಿ ದಿಗ್ಬಂಧನ ಘೋಷಿಸಿದೆ. ಅಮೆರಿಕದ ದಿಗ್ಬಂಧನ ಇರಾನ್ ಸೈನ್ಯದ ಕುದ್ಸ್ ಎಂಬ ವಿಶೇಷ ವಿಭಾಗ, ಮೂರು ಬ್ಯಾಂಕ್ ಗಳ ಮೇಲೆ ಹೊರಿಸಿದೆ. ವಿದೇಶಗಳಲ್ಲಿ - ವಿಶೇಷವಾಗಿ ಇರಾಕ್ ಮತ್ತು ಕೊಲ್ಲಿ ಪ್ರದೇಶದಲ್ಲಿ - ಇವು 'ಭಯೋತ್ಪಾದಕ' ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತಿವೆ ಎಂದು ಅಮೆರಿಕ ಆಪಾದಿಸಿದೆ. ಇರಾನ್ ಸರ್ಕಾರ ಈ ಆಪಾದನೆಗಳನ್ನು ಆಧಾರರಹಿತ ಎಂದು ತಳ್ಳಿ ಹಾಕಿದೆ. ದಿಗ್ಬಂಧನ ಯಾವುದೇ ಪರಿಣಾಮ ಬೀರುವುದಿಲ್ಲ. ಮಾತ್ರವಲ್ಲ ಅಂತರ್ರಾಷ್ಟ್ರೀಯ ಕಾನೂನುಗಳಿಗೆ ವಿರುದ್ಧವಾಗಿದೆ. ಇರಾನ್ ಬಗ್ಗೆ ಈ ಆಕ್ರಾಮಕ ನೀತಿಗಳು ಮುಂದುವರೆದರೆ, ಅಮೆರಿಕದ ಜತೆ ಅಣು



ಕಾರ್ಯಕ್ರಮದ ಬಗ್ಗೆ ನಡೆಯಲಿರುವ ನಾಲ್ಕನೇ ಸುತ್ತಿನ ಮಾತುಕತೆಯಲ್ಲಿ ಏನು ಅರ್ಥವಿಲ್ಲ ಎಂದಿದೆ ಇರಾನ್.

ಅಣು ಕಾರ್ಯಕ್ರಮದ ವಿವಾದ ಪರಿಹರಿಸಲು ಅಂತರ್ರಾಷ್ಟ್ರೀಯ ಸಮುದಾಯ (ಅಮೆರಿಕ ಸೇರಿ) ಇರಾನ್ ಜತೆ ಮಾತುಕತೆ ನಡೆಸುತ್ತಿರುವಾಗ ಈ ದಿಗ್ಬಂಧನ ಪರಿಸ್ಥಿತಿಯನ್ನು ಅನಗತ್ಯವಾಗಿ ಕ್ಲಿಷ್ಟಗೊಳಿಸುತ್ತದೆ ಎಂದು ಚೀನಾ, ರಶ್ಯಾ ಎಂದು ಟೀಕಿಸಿವೆ.

ಇರಾನ್ ಮೇಲೆ ಯುದ್ಧಕ್ಕೆ ಎಲ್ಲಾ ತಯಾರಿ ನಡೆದಿದೆ. ಇರಾಕ್ ನ ವೈಫಲ್ಯದಿಂದ ಮತ್ತು ಅಂತರ್ರಾಷ್ಟ್ರೀಯ ಹಿನ್ನಡೆಯಿಂದ ಗಮನ ಬೇರೆಡೆ ಸೆಳೆಯಲು ಇನ್ನೊಂದು ಯುದ್ಧ ಬುಶ್ ಗೆ ಅಗತ್ಯವಾಗಿದೆ. ದಿಗ್ಬಂಧನದಿಂದ ಇರಾನ್ ಗೆ ಕಿರಿಕಿರಿ ಮಾಡಿ, ಮಾತುಕತೆ ವಿಫಲಗೊಳಿಸಿ, ಅಮೆರಿಕ ಯುದ್ಧಕ್ಕೆ ನೆಪ ಹೂಡುತ್ತಿದೆ. ಆದರೆ ಚೀನಾ ಮತ್ತು ರಶ್ಯಾಗಳ ವಿರೋಧದಿಂದ ಅಮೆರಿಕ ಇನ್ನೂ ಹಿಂದೆ ಮುಂದೆ ನೋಡುತ್ತಿದೆ. ಎಂದು ರಾಜಕೀಯ ವೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ.

ಇರಾಕ್ - ಅತೀ ದುಬಾರಿ ಯುದ್ಧ

ಇರಾಕ್ ಯುದ್ಧದ ವೆಚ್ಚದ ಬಗ್ಗೆ ಈಗ ಅಮೆರಿಕನ್ನರು ಹುಬ್ಬೇರಿಸಲು ಆರಂಭಿಸಿದ್ದಾರೆ. ಇದರಿಂದ ಯುದ್ಧದ ಅಗತ್ಯದ ಬಗ್ಗೆ ಹೊಸ ಪ್ರಶ್ನೆಗಳು ಏಳಲಾರಂಭಿಸಿವೆ. ಈಗಾಗಲೇ ಇರಾಕ್ ಯುದ್ಧದಲ್ಲಿ 600 ಶತಕೋಟಿ ಡಾಲರ್ ವೆಚ್ಚವಾಗಿದೆ. ಇದು ಬುಶ್ ಸರ್ಕಾರದ ಮೊದಲ ಅಂದಾಜಿನ 12 ಪಟ್ಟು. ಅಮೆರಿಕನ್ ಪಾರ್ಲಿಮೆಂಟಿನ ಬಜೆಟ್ ಆಫಿಸು ಇರಾಕ್ ಮತ್ತು ಅಫಗಾನಿಸ್ತಾನದಲ್ಲಿ ಯುದ್ಧದ ಒಟ್ಟು ವೆಚ್ಚ 2400 ಶತಕೋಟಿ ಡಾಲರ್ ಆಗಬಹುದು ಎಂದು ಅಂದಾಜು ಮಾಡಿದೆ. ಈ ಎರಡೂ ದೇಶಗಳಲ್ಲಿ 2017 ರ ವರೆಗೆ ಸುಮಾರು 75 ಸಾವಿರ ಅಮೆರಿಕನ್ ಸೈನಿಕರು ಇರುತ್ತಾರೆ ಎಂದು ಊಹಿಸಲಾಗಿದೆ. ಇದು ವಿಯೇಟ್ನಾಮ್ ಮತ್ತು ಕೊರಿಯಾದ ಯುದ್ಧದ ವೆಚ್ಚಕ್ಕಿಂತ ಹೆಚ್ಚು. ಇದು ಸುಮಾರು 8 ಸಾವಿರ ಡಾಲರ್ ಗಳ ಹೊರೆಯನ್ನು ಪ್ರತೀ ಅಮೆರಿಕನ್ನರ ಮೇಲೆ ಹೊರಿಸುತ್ತದೆ ಎಂದು ಬಜೆಟ್ ಆಫೀಸ್ ಹೇಳಿದೆ.

ಪಾಕಿಸ್ತಾನದಲ್ಲಿ ಮುಂದುವರಿದ ಬಿಕ್ಕಟ್ಟು

ಬೆನಜೀರ್ ಮರಳಿದ ಮೇಲಿನ ಬೆಳವಣಿಗೆಗಳ ನಂತರ ಪಾಕಿಸ್ತಾನದ ರಾಜಕೀಯ ಬಿಕ್ಕಟ್ಟು ಮುಂದುವರೆದಿದೆ. ಅಧ್ಯಕ್ಷೀಯ ಚುನಾವಣೆಯಲ್ಲಿ ಮುಶರಫ್ ಜಯ, ಬೆನಜೀರ್ ಮತ್ತು ಆಕೆಯ ಪಕ್ಷದ ಹಿರಿಯ ನಾಯಕರ ಮೇಲೆ ರ್‍ಯಾಲಿಯಲ್ಲಿ ಆತ್ಮಹತ್ಯಾ-ದಾಳಿ, ದಾಳಿಯಲ್ಲಿ ನೂರಾರು ಸಾವು-ನೋವು, ಸುಪ್ರೀಂ ಕೋರ್ಟು ಮುಶರಫ್ ಚುನಾವಣೆಯ ಕಾನೂನು ಬದ್ಧತೆಯ ವಿಚಾರಣೆ ನಡೆಸುತ್ತಿರುವುದು - ರಾಜಕೀಯ ಬಿಕ್ಕಟ್ಟನ್ನು ಇನ್ನಷ್ಟು ಸಂಕೀರ್ಣಗೊಳಿಸಿದೆ. ಬೆನಜೀರ್ ರ್‍ಯಾಲಿ ಮೇಲೆ ಆತ್ಮಹತ್ಯಾ-ದಾಳಿಯ ಹಿಂದಿರುವ ಬಗ್ಗೆ - ಇಂಟೆಲಿಜೆನ್ಸ್ ಬ್ಯೂರೋ ಮುಖ್ಯಸ್ಥ, ಪಂಜಾಬ ಮತ್ತು ಸಿಂಧ್ ಮುಖ್ಯ ಮಂತ್ರಿ- ಈ ಮೂವರ ಮೇಲೆ ಆಪಾದನೆ ಮಾಡಿದ್ದು ಅವರನ್ನು ಅಧಿಕಾರದಿಂದ ಇಳಿಸಲು ಒತ್ತಾಯ ಪಡಿಸಿದ್ದಾರೆ.

ಬೆನಜೀರ್ ಮತ್ತು ಆಳುವ ಮುಸ್ಲಿಂ ಲೀಗ್ ನಡುವೆ ಆತ್ಮಹತ್ಯಾ-ದಾಳಿಯ ಬಗ್ಗೆ ಆಪಾದನೆಗಳ ಸಮರ ನಡೆದಿದೆ. ಆಳುವ ಮುಸ್ಲಿಂ ಲೀಗ್ ಅಧ್ಯಕ್ಷ ಆತ್ಮಹತ್ಯಾ-ದಾಳಿ ಯೋಜಿಸಿದ್ದು ಬೆನಜೀರ್ ಪತಿಯೇ ಎಂದು ಆಪಾದಿಸಿದ್ದಾರೆ. ಈ ನಡುವೆ ಬೆನಜೀರ್ ಮುಶರಫ್ ಜತೆ ಗುಪ್ತ ಮಾತುಕತೆ ಮುಂದುವರೆಸಿದ್ದಾರೆ. ಬೆನಜೀರ್ ಅಮೆರಿಕ ಮೂಲಕ ಮುಶರಫ್ ಮೇಲೆ ಒತ್ತಡ ಹೇರುತ್ತಿದ್ದಾರೆ. ಸುಪ್ರೀಂ ಕೋರ್ಟು ತೀರ್ಪು ಬರುವ ವರೆಗೆ ಮುಶರಫ್ ಬೆನಜೀರ್ ಗೆ ಯಾವುದೆ ರಾಜಕೀಯ ಭರವಸೆ ಕೊಡಲು ತಯಾರಿಲ್ಲ. ಬೆನಜೀರ್ ಕೇಸುಗಳನ್ನು ಸುಗ್ರೀವಾಜ್ಞೆ ಬಳಸಿ ಹಿಂತೆಗೆದುಕೊಂಡ ಕ್ರಮವನ್ನು ಸುಪ್ರೀಂ ಕೋರ್ಟು ವಜಾ ಮಾಡುವ ಸಾಧ್ಯತೆ ಇರುವುದರಿಂದ, ನವಾಜ್ ಶರೀಫ್ ಪಾಕಿಸ್ತಾನ ವಾಪಸಿಗೆ ಮುಶರಫ್ ಅನುಮತಿ ಕೊಡಬಹುದು. ಎನ್ನಲಾಗಿದೆ.

ಒಟ್ಟಾರೆಯಾಗಿ ಪ್ರಜಾಪ್ರಭುತ್ವದತ್ತ ಪಾಕಿಸ್ತಾನದ ಜನ ದಿಟ್ಟ ಹೆಜ್ಜೆಗಳನ್ನಿಟ್ಟು ಮುಂದುವರೆಯುತ್ತಿದ್ದರೂ, ಅಮೆರಿಕದ ಪ್ರಾಕ್ಸಿಯಾಗಿ ಆಳುತ್ತಿರುವ ಮಿಲಿಟರಿ ಅದಕ್ಕೆ ಸಾಕಷ್ಟು ಅಡೆತಡೆಗಳನ್ನು ಹಾಕುವುದರಲ್ಲಿ ಸಫಲವಾಗಿದೆ. ಮಿಲಿಟರಿ ಆಡಳಿತ ಜತೆ ಒಂದಲ್ಲ ಒಂದು ರೀತಿಯಲ್ಲಿ ಶಾಮೀಲಾಗಿರುವ ಆಳುವ ವರ್ಗದ ಪಕ್ಷಗಳು, ಅಧಿಕಾರ ಪಡೆಯುವ ತರಾತುರಿಯಲ್ಲಿ ಮಿಲಿಟರಿ ಸರ್ವಾಧಿಕಾರಕ್ಕೆ ಸಮಗ್ರ ಸವಾಲು ಹಾಕುವುದರಲ್ಲಿ ವಿಫಲರಾಗಿದ್ದಾರೆ. ಪ್ರಜಾಪ್ರಭುತ್ವದ ಪ್ರಕ್ರಿಯೆಯ ದಾರಿ ತಪ್ಪಿಸುವ ಪ್ರಯತ್ನವನ್ನು ಪಾಕಿಸ್ತಾನದ ಎಚ್ಚೆತ್ತ ಜನ ವಿಫಲಗೊಳಿಸುತ್ತಾರೆ ಎಂದು ಆಶಿಸಬೇಕಾಗಿದೆ.

ಚೀನಾದ ಚಾಂಗಿ-1 - ಚಂದ್ರನತ್ತ 'ಮಹಾನ್ ಮುನ್ನೆಗೆತ'

ಚೀನಾ ಬಾಹ್ಯಾಕಾಶ ಕಾರ್ಯಕ್ರಮದಲ್ಲಿ ಚಾಂಗಿ-1 ಉಡಾವಣೆ ಜತೆ 'ಮಹಾನ್ ಮುನ್ನೆಗೆತ' ಸಾಧಿಸಿದೆ. ಕಳೆದ ವಾರ ಸಫಲವಾಗಿ ಉಡಾಯಿಸಲಾದ ಚಾಂಗಿ-1 ಉಪಗ್ರಹ ಚಂದ್ರನತ್ತ ಯೋಜನೆಯಂತೆ ಸಾಗುತ್ತಿದೆ. ನವಂಬರ್ ಕೊನೆ ಹೊತ್ತಿಗೆ ಅದು ಚಂದ್ರನ ಮೊದಲ ಚಿತ್ರಗಳನ್ನು ಬಿತ್ತರಿಸಲಿದೆ. ಆ ಮೇಲೆ ಸುಮಾರು ಒಂದು ವರ್ಷ ಕಾಲ ಚಂದ್ರನ ವಿವರವಾದ ಅಧ್ಯಯನದಲ್ಲಿ ತೊಡಗಲಿದೆ.

ಇತ್ತೀಚೆಗಷ್ಟೆ ಮೊದಲ ಉಪಗ್ರಹ, ಮಾನವನ ಸಹಿತ ಬಾಹ್ಯಾಕಾಶ ಯಾನ ಸಾಧಿಸಿದ ಬೆನ್ನಲ್ಲೆ ಈ ಸಾಧನೆ 'ಮಹಾನ್ ಮುನ್ನೆಗೆತ'ವೇ. ಇದು ಒಂದು ವೈಜ್ಞಾನಿಕ ಕಾರ್ಯಕ್ರಮವಾಗಿದ್ದು, ಇದಕ್ಕೆ ಯಾವುದೇ ಮಿಲಿಟರಿ ಉದ್ದೇಶಗಳಿಲ್ಲ ಎಂದು ಚೀನಾದ ವಕ್ತಾರರು ಹೇಳಿದ್ದಾರೆ. ಸುಮಾರು ಒಂದು ಶತಕೋಟಿ ಯುವಾನ್ ವೆಚ್ಚದ ಕಾರ್ಯಕ್ರಮದಲ್ಲಿ ಚೀನಾ, ಯುರೋಪ್, ದಕ್ಷಿಣ ಅಮೆರಿಕ ಸೇರಿದಂತೆ ಅಂತರ್ರಾಷ್ಟ್ರೀಯ ಸಹಕಾರ ಪಡೆದಿದೆ.

ಇಲ್ಲಿ ಯಾವುದೇ ದೇಶದ ಜತೆ ಸ್ಪರ್ಧೆಯ ಉದ್ದೇಶ ಸಹ ಇಲ್ಲ ಎಂದು ವಕ್ತಾರರು ಹೇಳಿದ್ದಾರೆ. ಚಾಂಗಿ-1 ಉಡಾವಣೆಗೆ ಹಲವು ದೇಶಗಳ ಪ್ರತಿನಿಧಿಗಳನ್ನು ಆಹ್ವಾನಿಸಲಾಗಿತ್ತು.

ವೆನೆಜುವೇಲಾ - ಕ್ಯೂಬಾ ಕಾನ್ಫೆಡರೆಶನ್ ಗೆ ಪ್ರಸ್ತಾವ

ಚವೇಝ್ ತಮ್ಮ ಇತ್ತೀಚಿನ ಕ್ಯೂಬಾ ಭೇಟಿ ಸಂದರ್ಭದಲ್ಲಿ ವೆನೆಜುವೇಲಾ - ಕ್ಯೂಬಾ ಕಾನ್ಫೆಡರೆಶನ್ (ಅಂದರೆ ಸಡಿಲವಾಗಿ ಬೆಸೆದ ಒಂದೇ ದೇಶ) ರಚಿಸುವ ಬಗ್ಗೆ ಗಂಭೀರ ಪ್ರಸ್ತಾವ ಇಟ್ಟಿದ್ದಾರೆ ಎಂದು ಹೇಳಿದರು. ಇತ್ತೀಚಿನ ಕ್ಯೂಬಾ ಭೇಟಿ ಸಂದರ್ಭದಲ್ಲಿ ಹಲವು ಕ್ಷೇತ್ರಗಳಲ್ಲಿ ಸಹಕಾರದ 14 ಪ್ರಮುಖ ಒಪ್ಪಂದಗಳಿಗೆ ಸಹಿ ಹಾಕಿದರು. ಈಗಾಗಲೇ ಎರಡೂ ದೇಶಗಳ ನಡುವೆ ತೀರಾ ನಿಕಟ ಆರ್ಥಿಕ-ರಾಜಕೀಯ ಸಂಬಂಧವಿದೆ. ಅಂತರ್ರಾಷ್ಟ್ರೀಯವಾಗಿಯೂ ಎರಡೂ ದೇಶಗಳು ಜಂಟಿಯಾಗಿ ಹಲವು (ಬೊಲಿವಾರಿಯನ್ ಬದಲಿ ಇತ್ಯಾದಿ) ಕಾರ್ಯಕ್ರಮಗಳನ್ನು ಮುಂದೊತ್ತುತ್ತಿವೆ. ಇದು ಲ್ಯಾಟಿನ್ ಅಮೆರಿಕದಲ್ಲಿ ಮಹತ್ವದ ಬೆಳವಣಿಗೆ. ಸ್ವಾಭಾವಿಕವಾಗಿಯೇ ಎರಡೂ ದೇಶಗಳ ಸರ್ಕಾರದ ವಿರೋಧಿಗಳು ಇದಕ್ಕೆ ತೀವ್ರ ವಿರೋಧ ವ್ಯಕ್ತ ಪಡಿಸಿದ್ದಾರೆ.

ತುರ್ಕಿ ಮತ್ತು ಇರಾಕ್ - ಗಡಿ ಕದನ

ಇರಾಕ್-ತುರ್ಕಿ ಗಡಿ ಪ್ರದೇಶದಲ್ಲಿ ಕುರ್ದಿಶ್ ಜನ ವಾಸಿಸುತ್ತಿದ್ದಾರೆ. ಎರಡೂ ದೇಶಗಳಲ್ಲಿ ಜನಾಂಗೀಯ ಅಲ್ಪ ಸಂಖ್ಯಾತರಾಗಿ ದಬ್ಬಾಳಿಕೆಗೆ ಒಳಗಾಗಿರುವ ಕುರ್ದಿಶ್ ಜನಾಂಗದ ಸ್ವತಂತ್ರ ದೇಶಕ್ಕೆ ಹೋರಾಡುತ್ತಿರುವ ಗೆರಿಲ್ಲಾಗಳು ಗಡಿ ಪ್ರದೇಶಗಳಲ್ಲಿ ಸಕ್ರಿಯವಾಗಿದ್ದಾರೆ. ಇರಾಕ್ ಯುದ್ಧದಲ್ಲಿ ಅಮೆರಿಕಕ್ಕೆ ಬೆಂಬಲ ಕೊಟ್ಟು ಅಧಿಕಾರ ಪಡೆದರು. ಈ ಸಂದರ್ಭ ಬಳಸಿ ಇರಾಕ್ ಉತ್ತರ ಗಡಿಯಿಂದ ಪಿ.ಕೆ.ಕೆ. ಎಂಬ ಕುರ್ದಿಶ್ ಗೆರಿಲ್ಲಾ ಗುಂಪು ತುರ್ಕಿ ಸೈನ್ಯದ ಮೇಲೆ ದಾಳಿ ಮಾಡಿ ತೀವ್ರ ಬಿಕ್ಕಟ್ಟು ಉಂಟಾಗಿದೆ.

ಈ ದಾಳಿ ಮುಂದುವರೆದರೆ ತುರ್ಕಿ ಉತ್ತರ ಇರಾಕ್ ನಲ್ಲಿರುವ ಪಿ.ಕೆ.ಕೆ. ಗೆರಿಲ್ಲಾ ನೆಲೆಗಳ ಮೇಲೆ ದಾಳಿ ಮಾಡುವುದಾಗಿ ಹೇಳಿದೆ. ಇದು ಎರಡು ದೇಶಗಳ ನಡುವೆ ಪೂರ್ಣ ಪ್ರಮಾಣದ ಯುದ್ಧಕ್ಕೆ ಎಡೆ ಮಾಡಿಕೊಡುವ ಅಪಾಯ ಇರುವುದರಿಂದ, ಈ ಬೆದರಿಕೆ ಜಾರಿ ಮಾಡದಂತ ತುರ್ಕಿ ಸರ್ಕಾರದ ಮೇಲೆ ಅಂತರ್ರಾಷ್ಟ್ರೀಯ ಒತ್ತಡ ಹೇರಲಾಗಿದೆ. ಕದನ ವಿರಾಮ ಕ್ಕೆ ಮಾತುಕತ ನಡೆಯುತ್ತಿದೆ.

ಪಿ.ಕೆ.ಕೆ. ಒಂದು ಭಯೋತ್ಪಾದಕ ಸಂಘಟನೆ ಆದರ ಮೇಲೆ ಇರಾಕ್ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳದ ಕದನ ವಿರಾಮ ಏನನ್ನೂ ಪರಿಹರಿಸುವುದಿಲ್ಲ ಎಂದ ತುರ್ಕಿ ಹೇಳಿದೆ. ಅಮೆರಿಕಕ್ಕೆ ಇದು ನುಂಗಲಾರದ ತುತ್ತಾಗಿದೆ. ಅಮೆರಿಕ ಕುರ್ದಿಶ್ ಗುಂಪುಗಳ ಜ ರಾಜಕೀಯ-ಮಿಲಿಟರಿ ಮೈತ್ರಿ ಸಾಧಿಸಿದ್ದು, ಒಂದ ಗುಂಪನ್ನು ಭಯೋತ್ಪಾದಕ ಸಂಘಟನೆ ಎನ್ನುವುದ ಹೇಗೆ ? ತನಗೆ ವಿರುದ್ಧ ವಾಗಿರುವವರೇ ಭಯೋತ್ಪಾದಕರು. ಅವರ ಮೇಲೆ ಕ್ರಮ ಕೈಗೊಳ್ಳಲ ತಾನು ಸ್ವತಂತ್ರ ಎಂಬ ಅಮೆರಿಕನ್ ನೀ ಸಾರ್ವತ್ರಿಕವಾದರೆ ಎಂತಹ ದುರಂತ ಕಾದಿದೆ ಎಂದ ಈ ಘಟನೆ ಸಾರಿದೆ.

..... ಪರಮಾಣು ವ್ಯವಹಾರ

ಪುಟ 11 ರಿಂದ

ಜಾರಿಗೊಳಿಸಲಿಲ್ಲ ಎಂಬ ಕಾರಣಕ್ಕೆ ರಾಜಿನಾಮೆ ನೀಡಬೇಕು ಎಂದು ಕೇಳಲೂ ಕೂಡಾ ಅರ್ಹತೆ ಇಲ್ಲ.

ಇನ್ನು ಪರಮಾಣು ವ್ಯವಹಾರದ ಬಗ್ಗೆ ಅದರ ನಿಲುವಂತೂ ಸಂದಿಗ್ಧವಾಗಿಯೇ ಇದೆ. ಎರಡು ನಾಲಿಗೆ ಅದರ ಶಾಶ್ವತ ಲಕ್ಷಣವಾಗಿಬಿಟ್ಟಿದೆ. ಒಂದೆಡೆ ಅದು ಭಾರತ ಮತ್ತು ಅಮೆರಿಕಾದ ನಡುವೆ ಸಾಮರಿಕ ಮೈತ್ರಿಯಿರಬೇಕು ಎಂದು ವಾದಿಸುತ್ತದೆ, ಇನ್ನೊಂದೆಡೆ ಆಗಾಗ ಈ ವ್ಯವಹಾರವನ್ನು ವಿರೋಧಿಸುವ ಹೇಳಿಕೆಗಳನ್ನು ನೀಡುತ್ತಾ ತಾನೂ ಒಟ್ಟು ಜನಾಭಿಪ್ರಾಯಕ್ಕೆ ವಿರುದ್ಧವಾಗಿಲ್ಲ ಎಂಬ ಸೋಗು ಹಾಕುತ್ತದೆ. ಸಂಸತ್ತಿನ ಮಳೆಗಾಲದ ಅಧಿವೇಶನವನ್ನು ಅದು ಅಸ್ತವ್ಯಸ್ತಗೊಳಿಸಿದ್ದು ತನ್ನ ಈ ಇಬ್ಬಂದಿತನ ಬಯಲಾಗದಿರಲಿ ಎಂದೇ. ಈ ವ್ಯವಹಾರ ಕಾರ್ಯಗತಗೊಂಡರೆ ಅದು ಕಾಂಗ್ರೆಸ್ ನೇತೃತ್ವದ ಆಡಳಿತದಲ್ಲಿ ಆಗುತ್ತಿದೆ, ತನ್ನ ಆಡಳಿತದಲ್ಲಿ ಅಲ್ಲ ಎಂಬ ಬಗ್ಗೆಯೇ ಅದರ ನಿಜವಾದ ಕೊರಗ ಏಕೆಂದರೆ ಭಾರತ - ಅಮೆರಿಕಾ ಸಾಮರಿಕ ಮೈತ್ರಿ ಅಡಿಗಲ್ಲು ಹಾಕಿದ್ದು ಅವರೇ ತಾನೇ!

ಮುಂದಿನ ಸಂಸತ್ತಿನ ಮಳೆಗಾಲ ಅಧಿವೇಶನದಲ್ಲಾದರೂ ಅದು ಈ ಬಗ್ಗೆ ಚಚ ನಡೆಯುಲು ಬಿಡುತ್ತದೆಯೋ ಎಂದು ಕಾ ನೋಡಬೇಕು. ತನ್ನ ಹೊಲಸು ಇಬ್ಬಂದಿತನವ ಮುಚ್ಚಿಕೊಳ್ಳಲು ಅದು ಈ ಬಾರಿಯೂ ಕಲಾಪಗ ಅಡ್ಡಿಪಡಿಸಿದರೆ ಸಂಸತ್ತು ಈ ವ್ಯವಹಾರದ ಬ ತನ್ನ ಅಭಿಪ್ರಾಯ ಹೇಳದಂತೆ ಮಾಡಿದ, ದೇಶ ಬಗೆದ ಮಹಾ ಅಪಚಾರವಾಗುತ್ತದೆ. ಈ ವ್ಯವಹಾ ಭಾರತಕ್ಕೆ ಸ್ವೀಕಾರಾರ್ಹವೇ, ಅಲ್ಲವೇ ಎಂಬುದ ಸಂಸತ್ತಿನ ಬಹುಮತ ನಿರ್ಧರಿಸಲಿ. ಈ ಉಂಟಾಗಿರುವ ಇಕ್ಕಟ್ಟನ್ನು ಬಗೆಹರಿಸಲು ಇರು ದಾರಿ ಇದೊಂದೇ.

ದೇಶದ ಷೇರುಪೇಟೆಯಲ್ಲಿ ಭಾರಿ ಏರಿಳಿತ ಕಾಣಬರುತ್ತಿದೆ. ಅದು ಯಾಕೆ? ಏನು?

ಶೇರು ಮಾರುಕಟ್ಟೆ ಏಳುಬೀಳು

ಎಫ್‌ಐಐಗಳ ಕಪಿಮುಷ್ಟಿಯಿಂದ ದೇಶದ ಅರ್ಥವ್ಯವಸ್ಥೆ ರಕ್ಷಿಸಿ

ಮುರಳಿಕೃಷ್ಣ

ಈ ಲೇಖನವನ್ನು ನೀವು ಓದುವ ವೇಳೆಗೆ 'ಪಾರ್ಟಿಸಿಪೇಟರಿ ನೋಟ್'(ಪಿಎನ್)ಗಳ ಕುರಿತು ಭಾರತೀಯ ಷೇರು ಮಾರುಕಟ್ಟೆ ನಿಯಂತ್ರಣ ಮಂಡಳಿ(ಸೆಬಿ)ಯು ಮಹತ್ವದ ನಿರ್ಧಾರ ಹೊರಬಿದ್ದಿರುತ್ತದೆ. ಭಾರತದ ಷೇರು ಮಾರುಕಟ್ಟೆಯಲ್ಲಿ ವಿದೇಶಿ ಹಣಕಾಸು ಸಂಸ್ಥೆಗಳು ಬಂಡವಾಳ ತೊಡಗಿಸಲು ಈ ಪಿಎನ್‌ಗಳು ಅವಕಾಶ ಕಲ್ಪಿಸುತ್ತವೆ. ಈ ಕುರಿತ ನಡೆಯುವ ಸೆಬಿ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗುತ್ತದೆ. ಈ ನಿರ್ಧಾರ ಭಾರತದ ಆರ್ಥಿಕತೆ ಮತ್ತು ಸಾಮಾನ್ಯ ಜನತೆಯನ್ನು ರಕ್ಷಿಸುವಂತಿದ್ದರೆ ಸಂತೋಷ. ಇಲ್ಲದಿದ್ದಲ್ಲಿ ಏನು ಮಾಡಬೇಕೆಂಬುದನ್ನು ಮತ್ತೆ ಚಿಂತಿಸಬೇಕಾಗುತ್ತದೆ.

ಸೂಚ್ಯಂಕದ ಏರುಪೇರು


ಅದು ಒತ್ತಟ್ಟಿಗಿರಲು ಭಾರತದ ಅರ್ಥ ವ್ಯವಸ್ಥೆ ಮೇಲೆ ಗಂಭೀರ ಪರಿಣಾಮ ಬೀರುವ ಪ್ರಮುಖ ಅಂಶಗಳಲ್ಲಿ ಒಂದಾಗಿರುವ ಷೇರು ಮಾರುಕಟ್ಟೆ ವಹಿವಾಟಿನತ್ತ ಒಂದಿಷ್ಟು ನೋಟ ಹರಿಸೋಣ, ಇತ್ತೀಚಿನ ದಿನಗಳಲ್ಲಿ ಷೇರು ಸೂಚ್ಯಂಕ ಭಾರಿ ಏರುಪೇರು ಕಾಣುತ್ತಿದೆ. ದೇಶದ ಕಾರ್ಪೋರೇಟ್ ಸಂಸ್ಥೆಗಳ ಆಗುಹೋಗು, ಎಲ್ಲ ಏಳುಬೀಳುಗಳು ಇದರಲ್ಲಿ ಸಂಕಲಿತಗೊಂಡಿರುತ್ತದೆ. ಭಾರತದ ಕಂಪನಿಗಳು, ಇತರ ಹೂಡಿಕೆದಾರರು ಮಾತ್ರವಲ್ಲದೆ ಸೆಬಿಯಲ್ಲಿ ನೊಂದಾಯಿತವಾಗಿರುವ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಷೇರು ಮಾರುಕಟ್ಟೆಯಲ್ಲಿ ಅಪಾರ ಪ್ರಮಾಣದ ಬಂಡವಾಳ ತೊಡಗಿಸುತ್ತಾರೆ. ತಾವು ಖರೀದಿಸಿದ ಷೇರಿಗೆ ಅನುಗುಣವಾಗಿ ಕಂಪನಿಗಳು ಗಳಿಸುವ ಆಧಾರದಲ್ಲಿ ಪಾಲು ಪಡೆಯುತ್ತವೆ. ಷೇರು ಮಾರುಕಟ್ಟೆಯಲ್ಲಿ ಪಟ್ಟಿ (ಲಿಸ್ಟ್)ಯಾಗಿರುವ ಎಲ್ಲ ಕಂಪನಿಗಳ ಅಣು ಅಣುವೂ ಎಫ್‌ಐಐಗಳಿಗೆ ಗೊತ್ತಿರುತ್ತದೆ. ಅದರ ಆಧಾರದಲ್ಲಿ ವಹಿವಾಟು ನಡೆಸುತ್ತಾ ಲಾಭ ಗಳಿಸುತ್ತವೆ. ಇಡೀ ಷೇರು ಮಾರುಕಟ್ಟೆಯನ್ನು ಮೇಲೆತ್ತುವ ಮತ್ತು ಕುಸಿತಕ್ಕೊಳಪಡಿಸುವ ಶಕ್ತಿ ಎಫ್‌ಐಐಗಳಿಗಿದೆ. ಉದಾಹರಣೆಗೆ ಯಾವುದಾದರೂ ಒಂದು ಕಂಪನಿಯ ಷೇರುಗಳನ್ನು ಎಫ್‌ಐಐಗಳು ಭಾರಿ ಪ್ರಮಾಣದಲ್ಲಿ ಖರೀದಿಸಲು ಮುಂದಾಗುತ್ತವೆ. ಇದನ್ನು ನೋಡಿದ ಇತರ ಹೂಡಿಕೆದಾರರು ಅದೇ ಕಂಪನಿಯ ಷೇರುಗಳನ್ನು ಖರೀದಿಸಲು ಮುಂದಾಗುತ್ತಾರೆ. ಇದರಿಂದ ಆ ಕಂಪನಿಯ ಷೇರು ದರ ಭಾರಿ ಪ್ರಮಾಣದಲ್ಲಿ ಏರಿಕೆ ಕಾಣುತ್ತದೆ. ಎಫ್‌ಐಐಗಳು ಅಂದಾಜಿಸಿದ ಎತ್ತರಕ್ಕೆ ಈ ದರ ತಲುಪಿದ ತಕ್ಷಣ ತಾವು ಖರೀದಿಸಿರುವ ಷೇರುಗಳನ್ನು ಮಾರಾಟ ಮಾಡಿ ಲಾಭ ಗಳಿಸುತ್ತವೆ. ಆಗ ರಿಟೇಲ್ ಹೂಡಿಕೆದಾರರು ಮತ್ತು ದೇಶದ ಇತರ ಹಣಕಾಸು ಸಂಸ್ಥೆಗಳು ತೊಡಗಿಸಿದ್ದ ಬಂಡವಾಳ ಎಫ್‌ಐಐಗಳ ಪಾಲಾಗುತ್ತದೆ. ಹೀಗೆ ಎಫ್‌ಐಐಗಳು ಪ್ರತಿದಿನ ಹಲವಾರು ಕಂಪನಿಗಳಲ್ಲಿ ಸಾವಿರಾರು ಕೋಟಿ ರೂ.ವಹಿವಾಟು ನಡೆಸುತ್ತವೆ. ತಮಗೆ ಲಾಭ ಗಳಿಸುವ ರೀತಿಯಲ್ಲಿ ವಹಿವಾಟನ್ನು ಮುನ್ನಡೆಸುತ್ತವೆ.

ದೇಶಿ ಸಂಸ್ಥೆಗಳ ಒಗ್ಗಟ್ಟು

ಭಾರತದಲ್ಲಿನ ಹಣಕಾಸು ಸಂಸ್ಥೆಗಳು ಮತ್ತು ಹೂಡಿಕೆದಾರರು ಎಂದೂ ಸಹ ತಮ್ಮತಮ್ಮಲ್ಲಿ ಸಮಾಲೋಚನೆ ನಡೆಸಿ ವಹಿವಾಟಿನಲ್ಲಿ ತೊಡಗಿಕೊಳ್ಳುವುದಿಲ್ಲ. ಆದರೆ ಎಫ್‌ಐಐಗಳು ಹಾಗಲ್ಲ. ಎಲ್ಲವೂ ಒಗ್ಗಟ್ಟಾಗಿಯೇ ಕಾರ್ಯಾಚರಣೆ ನಡೆಸುತ್ತವೆ. ಇದರಿಂದ ಇಡೀ ಷೇರು ಮಾರುಕಟ್ಟೆಯನ್ನೇ ತಮ್ಮ ಕಪಿಮುಷ್ಟಿಯಲ್ಲಿ ಇಟ್ಟುಕೊಂಡಿರುತ್ತಾರೆ.

ಜಾಗತೀಕರಣ ಮತ್ತು ಆರ್ಥಿಕ ಉದಾರೀಕರಣ ನೀತಿಗಳ ಫಲವಾಗಿ 2001ರಲ್ಲಿ ಅಂದಿನ ಎನ್‌ಡಿಎ ಸರ್ಕಾರ ಭಾರತದ ಷೇರು ಮಾರುಕಟ್ಟೆಗಳಲ್ಲಿ ಎಫ್‌ಐಐಗಳು ಬಂಡವಾಳ ತೊಡಗಿಸಲು ಅವಕಾಶ ಮಾಡಿಕೊಟ್ಟಿತು. 2004ರವರೆಗೂ 14 ಎಫ್‌ಐಐಗಳು ಮಾತ್ರ ಸೆಬಿಯಲ್ಲಿ ನೊಂದಾಯಿತಗೊಂಡಿದ್ದು, 31,875 ಕೋಟಿ ರೂ.ಬಂಡವಾಳ ತೊಡಗಿಸಿದ್ದವು. ನಂತರದ ದಿನಗಳಲ್ಲಿ ಈ ನೀತಿಗಳನ್ನು ಇನ್ನಷ್ಟು ಸಡಿಲಗೊಳಿಸಿ ಬಂಡವಾಳ ಹೂಡಿಕೆಗೆ ಮುಕ್ತ ಅವಕಾಶ ಕಲ್ಪಿಸಿದ ನಂತರ ಇವತ್ತಿನವರೆಗೆ 1,100 ಎಫ್‌ಐಐಗಳು ನೊಂದಾಯಿತಗೊಂಡಿದ್ದು, 3 ಲಕ್ಷ 52 ಸಾವಿರದ 484 ಕೋಟಿ ರೂ.ಗಳನ್ನು ತೊಡಗಿಸಿವೆ. ಈ ಬಂಡವಾಳಕ್ಕೆ ಯಾವುದೇ ಲಂಗುಲಗಾಮಿಲ್ಲ. ಇಷ್ಟಬಂದಾಗ ತೊಡಗಿಸಬಹುದು, ಇಲ್ಲದಿದ್ದಲ್ಲಿ ಹಿಂಪಡೆಯಬಹುದು. ಎಫ್‌ಐಐಗಳು ಆಗ್ನೇಯ ಏಷ್ಯಾ, ಲ್ಯಾಟಿನ್ ಅಮೆರಿಕನ್ ದೇಶಗಳಲ್ಲಿ ಇದೇ ರೀತಿಯ ವಹಿವಾಟು ನಡೆಸಿ, ರಾತ್ರೋರಾತ್ರಿ ಆ ದಪಿಶಗಳ ಬಂಡವಾಳವನ್ನೆಲ್ಲಾ ಲೂಟಿ ಮಾಡಿ ದಿವಾಳಿ ಎಬ್ಬಿಸಿದ್ದವು.

ಮುಂಬೈ ಷೇರು ಮಾರುಕಟ್ಟೆಯಲ್ಲಿ 6,000 ಕಂಪನಿಗಳು ಲಿಸ್ಟ್ ಆಗಿವೆ. ಕಳೆದ ಶುಕ್ರವಾರ(ಅಕ್ಟೋಬರ್ 26) ಮಾರುಕಟ್ಟೆ ವಹಿವಾಟು ಮುಕ್ತಾಯದ ವೇಳೆಗೆ ಲಿಸ್ಟ್ ಆಗಿರುವ ಎಲ್ಲ ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳ



58 ಟ್ರಿಲಿಯನ್ (58 ಲಕ್ಷ ಕೋಟಿ ರೂ.) ನಷ್ಟಿತ್ತು. ಈ ಮಾರುಕಟ್ಟೆ ಬಂಡವಾಳ ಷೇರು ಖರೀದಿ ಮತ್ತು ಮಾರಾಟಕ್ಕೆ ಅನುಗುಣವಾಗಿ ಪ್ರತಿದಿನ ಪ್ರತಿ ನಿಮಿಷ ಬದಲಾಗುತ್ತಿರುತ್ತದೆ. ಭಾರತದ ಪ್ರಮುಖ ಕಂಪನಿಗಳಾದ ಅಂಬಾನಿ ಸಹೋದರರ ರಿಲಯೆನ್ಸ್ ಗ್ರೂಪ್ ಕಂಪನಿಗಳ ಮಾರುಕಟ್ಟೆ ಬಂಡವಾಳ 6 ಟ್ರಿಲಿಯನ್‌ಗಳಿಗಿಂತಲೂ ಹೆಚ್ಚಾಗಿದೆ. ಹಿಂದೆ 400 ಕೋಟಿ ರೂ.ನಷ್ಟಿದ್ದ ಇವರ ಬಂಡವಾಳ ಯಾವ ರೀತಿ ಆರು ಟ್ರಿಲಿಯನ್ ತಲುಪಿತು ಎಂಬುದನ್ನು ಒಮ್ಮೆ ಊಹಿಸಿಕೊಳ್ಳಿ, ಬಸವಣ್ಣ, ಅಂಬೇಡ್ಕರ್, ಬುದ್ಧ ಮತ್ತಿತರರ ಜಾತಿ ಮೂಲವನ್ನು ಅಧ್ಯಯನ ಮಾಡುವವರು, ದೇಶದ ದುಡಿಯುವ ಜನತೆಯ ಹಿತದೃಷ್ಟಿಯಿಂದ ಈ ಬಂಡವಾಳ ಯಾವ ರೀತಿ ಹೆಚ್ಚಾಯಿತು ಎಂಬುದನ್ನು ಇನ್ನಷ್ಟು ಅಧ್ಯಯನ ಮಾಡುವುದು ಒಳಿತು. ಅವರನ್ನು ಹೊರತುಪಡಿಸಿದರೆ ರಿಯಲ್ ಎಸ್ಟೇಟ್ ಕಂಪನಿ ಡಿಎಲ್‌ಎಫ್ ಮಾಲಿ ಕುಶಾಲ್ ಪಾಲ್ ಸಿಂಗ್, ಏರ್‌ಟೆಲ್ ಮಾಲಿಕ ಸುನಿಲ್ ಭಾರತಿ ಮಿತ್ತಲ್, ಟಾಟಾ ಗ್ರೂಪ್, ಬಿರ್ಲಾ ಗ್ರೂಪ್, ಅಜೀಮ ಪ್ರೇಮ್‌ಜಿಯ ವಿಪ್ರೊ, ಒಎನ್‌ಜಿಸಿ ಭಾರತೀಯ ಸ್ಟೇಟ್ ಬ್ಯಾಂಕ್ ಟ್ರಿಲಿಯನ್ ಗಟ್ಟಲೆ ಮಾರುಕಟ್ಟೆ ಬಂಡವಾಳ ಹೊಂದಿರುವ ಕಂಪನಿಗಳಾಗಿವೆ. ಟ್ರಿಲಿಯನ್ ಗಟ್ಟಲೆ ಮಾರುಕಟ್ಟೆ ಬಂಡವಾಳ ಹೊಂದಿರುವ ಕಂಪನಿಗಳ ಪೈಕಿ ಸರ್ಕಾರಿ ಸ್ವಾಮ್ಯದ್ದು ಕೇವಲ ಮೂರು ಕಂಪನಿಗಳು ಮಾತ್ರ ಇವೆ. ಇದರಿಂದ ಅರ್ಥವಾಗುತ್ತದೆ ಭಾರತದಲ್ಲಿನ ಬಂಡವಾಳಶಾಹಿಯ ಅಗಾಧತೆ ಏನೆಂಬುದು.

ಸಬ್ ಪ್ರೈಮ್ ಬಿಕ್ಕಟ್ಟೂ ರೂಪಾಯಿ ಮೌಲ್ಯ ಏರಿಕೆ ಪರಿಣಾಮವೂ

ರೂಪಾಯಿ ಮೌಲ್ಯ ನಿರಂತರವಾಗಿ ಹೆಚ್ಚುತ್ತಿರುವುದು ಸೂಚ್ಯಾಂಕ ಹೆಚ್ಚಳಕ್ಕೆ ಮತ್ತೊಂದು ಕಾರಣವಾಗಿದೆ. ಡಾಲರ್ ಎದುರಾಗಿ ರೂಪಾಯಿ ಮೌಲ್ಯ ಹೆಚ್ಚುತ್ತಿರುವುದರಿಂದ ನಷ್ಟ ಉಂಟಾಗುತ್ತದೆ ಎಂಬುದರಿಂದ ವಿದೇಶಿ ಹೂಡಿಕೆ ಸಂಸ್ಥೆಗಳು ಭಾರತ ಮತ್ತು ಚೀನಾ ಮಾರುಕಟ್ಟೆಗಳಲ್ಲಿ ಬಂಡವಾಳ ತೊಡಗಿಸಲು ಮುಗಿಬಿದ್ದಿವೆ. ಭಾರತದ ಆರ್ಥಿಕ ಅಭಿವೃದ್ಧಿ ಪ್ರಮಾಣ ಶೇಕಡ 9 ಮತ್ತು ಚೀನಾದ್ದು ಶೇಕಡ 12ರ ಪ್ರಮಾಣದಲ್ಲಿ ಬೆಳವಣಿಗೆಯಾಗುತ್ತಿರುವುದು ಸಹ ಮತ್ತೊಂದು ಕಾರಣವಾಗಿದೆ. ಅಮೆರಿಕದಲ್ಲಿ ಉಂಟಾಗಿರುವ ಆರ್ಥಿಕ ಹಿಂಜರಿತ ಮತ್ತು ಸಬ್‌ಪ್ರೈಮ್ ಬಿಕ್ಕಟ್ಟು (ಅಂದರೆ ರಿಯಲ್ ಎಸ್ಟೇಟ್ ವ್ಯವಹಾರಗಳಲ್ಲಿ ಮನೆ, ನಿವೇಶನಗಳ ಬೆಲೆ-ಭವಿಷ್ಯದಲ್ಲಿ ತಲುಪಬಹುದಾದ ಬೆಲೆಯನ್ನು ಅಂದಾಜು ಅದರ ಆಧಾರದಲ್ಲಿ ಸಾಲ ನೀಡುವುದು -ಇದರಿಂದಾಗಿರುವ ಬಿಕ್ಕಟ್ಟು) ಭಾರತಕ್ಕೆ ಬಂಡವಾಳ ಹರಿದು ಬರಲು ಮತ್ತೊಂದು ಕಾರಣವಾಗಿದೆ. ಈ ಸಬ್‌ಪ್ರೈಮ್ ಬಿಕ್ಕಟ್ಟು ಇಡೀ ಜಗತ್ತಿನ ಷೇರು ಮಾರುಕಟ್ಟೆ ವಹಿವಾಟನ್ನೇ ಅಲ್ಲೋಲಕಲ್ಲೋಲ ಮಾಡಿದೆ. ಅಮೆರಿಕದಲ್ಲಿ ಆರ್ಥಿಕ ಹಿಂಜರಿತ ಉಂಟಾಗಿದ್ದರಿಂದ ಈ ಹಿಂದೆ ಸಾಲ ಪಡೆದಿದ್ದವರು ಮರುಪಾವತಿಸಲಾಗದೆ ಸುಸ್ತಿದಾರರಾಗಿದ್ದರು. ಅವರನ್ನು ಮತ್ತೆ ಉದ್ಯಮದಲ್ಲಿ ತೊಡಗಿಸಿ ಉತ್ತೇಜನ ನೀಡಲು ಹೆಚ್ಚಿನ ಬಡ್ಡಿದರಕ್ಕೆ ಅಲ್ಲಿನ ಹಣಕಾಸು ಸಂಸ್ಥೆಗಳು, ಬ್ಯಾಂಕ್‌ಗಳು ಸಾಲ ನೀಡಿದವು. ಅಮೇರಿಕದಲ್ಲಿ ನೊಂದಾಯಿತವಾಗಿರುವ ಜರ್ಮನಿ, ಫ್ರಾನ್ಸ್, ಹಾಲೆಂಡ್, ಬ್ರಿಟನ್ ಮತ್ತಿತರ ವಿದೇಶಗಳ ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳು ಹೆಚ್ಚಿನ ಬಡ್ಡಿ ಆಸೆಗೆ ಸಾಲ ನೀಡಲು ಮುಂದಾದವು. ಆರ್ಥಿಕ ಅಭಿವೃದ್ಧಿ ಹಿನ್ನಡೆ ಅನುಭವಿಸಿದ್ದರಿಂದ ಈ ಹಿಂದೆ ಸುಸ್ತಿದಾರರಾಗಿದ್ದವರು ಇನ್ನಷ್ಟು ಸುಸ್ತಿದಾರರಾದರು. ಇದರಿಂದ ನೀಡಿದ ಹಣ ವಾಪಸಾಗದೆ ಎಲ್ಲ ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು ತೀವ್ರ ಬಿಕ್ಕಟ್ಟಿಗೆ ಸಿಲುಕಿದ್ದೇ ಈ ಸಬ್‌ಪ್ರೈಮ್ ಬಿಕ್ಕಟ್ಟು. ಅಲ್ಲಿಂದ ಕಾಲ್ಕಿತ್ತ ಕಂಪನಿಗಳು ಉತ್ತಮ ಆರ್ಥಿಕ ಅಭಿವೃದ್ಧಿ ಹೊಂದುತ್ತಿರುವ ಭಾರತ ಚೀನಾಗಳತ್ತ ಮುಖ ಮಾಡಿದರು. ವಿದೇಶಿ ಬಂಡವಾಳ ಯಥೇಚ್ಛವಾಗಿ ಹರಿದು ಬರುತ್ತಿರುವುದರಿಂದ ಸೂಚ್ಯಂಕ ದಿನೇ ದಿನೇ ಮೇಳೇಳುತ್ತಿದೆ. ಆದರೆ ಈ ಬಂಡವಾಳ ಯಾವತ್ತೂ ಹೊಟ್ಟೆಗಿಲ್ಲದ ಬಡವರಿಗೆ ಅನ್ನ ನೀಡಲು, ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರ ರಕ್ಷಣೆಗೆ ನೆರವಾಗುವುದಿಲ್ಲ.

ವಿವರ ಕೇಳುವಂತಿಲ್ಲ - ರಹಸ್ಯ

ಈಗ ವಿವಾದದಲ್ಲಿರುವ ಮತ್ತೊಂದು ಪ್ರಮುಖ ಅಂಶವೆಂದರೆ ಪಿಎನ್‌ಗಳು. ವಿದೇಶಿ ಹಣಕಾಸು ಸಂಸ್ಥೆಗಳು ಸೆಬಿಯಲ್ಲಿ ನೋಂದಾವಣೆ ಮಾಡದೆ ಬಂಡವಾಳ ತೊಡಗಿಸುವ ಮಾರ್ಗ ಇದಾಗಿದೆ. ಆರ್ಥಿಕ ಉದಾರೀಕರಣ ನೀತಿಗಳನ್ನು ಕೈಗೊಂಡ ನಂತರ ವಿದೇಶಿ ಕಂಪನಿಗಳಿಗೆ ಪಿಎನ್‌ಗಳ ಮೂಲಕ ಬಂಡವಾಳ ತೊಡಗಿಸಲು ಅವಕಾಶ ಕಲ್ಪಿಸಲಾಯಿತು. ಸೆಬಿಯಲ್ಲಿ ನೋಂದಾಯಿತವಾಗಿರುವ 1,100 ಎಫ್‌ಐಐಗಳಿಗೆ ಪಿಎನ್‌ಗಳನ್ನು ನೀಡಲಾಗುತ್ತದೆ. ಈ ಎಫ್‌ಐಐಗಳು ತಮಗೆ ಇಷ್ಟಬಂದವರಿಗೆ ಪಿಎನ್‌ಗಳನ್ನು ಪಿಎನ್‌ಗಳನ್ನು ವಿತರಿಸುತ್ತದೆ. ಪಿಎನ್‌ಗಳನ್ನು ಯಾರಿಗೆ, ಯಾವ ಕಂಪನಿಗೆ ನೀಡಲಾಗಿದೆ ಎಂಬುದರ ಮಾಹಿತಿ ವಿವರಗಳು ಸೆಬಿ ಮತ್ತು ಷೇರು ಮಾರುಕಟ್ಟೆಯಲ್ಲಿ ಇರುವುದಿಲ್ಲ. ಇದಕ್ಕೆ ಶಾಸನಬದ್ಧವಾದ ರಕ್ಷಣೆಯನ್ನೂ ಒದಗಿಸಲಾಗಿದೆ. ಹೇಗೆಂದರೆ ಪಿಎನ್‌ಗಳ ಮೂಲಕ ಬಂಡವಾಳ ತೊಡಗಿಸುವ ಕಂಪನಿ, ವ್ಯಕ್ತಿ ವಿವರಗಳನ್ನು ಬಹಿರಂಗಗೊಳಿಸುವುದು ಕಾನೂನಿಗೆ ವಿರುದ್ಧ ಎಂಬ ನಿಯಮವಿದೆ. ಹಾಗಾಗಿ ಈ ಅಕ್ರಮ ಮಾರ್ಗದ ಮೂಲಕ ಯಾರು ಬೇಕಾದರೂ ಬಂಡವಾಳ ತೊಡಗಿಸಿ ಲಾಭ ಮಾಡಿಕೊಳ್ಳಬಹುದಾಗಿದೆ.

ಇಡೀ ಜಗತ್ತಿನ ಆರ್ಥಿಕತೆಯನ್ನೇ ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಂಡಿರುವ ಪ್ರಮುಖ ಐದು ಜಾಗತಿಕ ಹಣಕಾಸು ಸಂಸ್ಥೆಗಳಾದ ಮಾರ್ಗನ್ ಸ್ಟ್ಯಾನ್ಲಿ, ಮೆರಿಲ್ ಲಿಂಚ್ ಕ್ಯಾಪಿಟಲ್ ಮಾರ್ಕೆಟ್ಸ್, ಎಸ್ಪಾನಾ, ಸಿಟಿ ಗ್ರೂಪ್ ಗ್ಲೋಬರ್ ಮಾರ್ಕೆಟ್ಸ್, ಗೋಲ್ಡ್‌ಮನ್ ಸ್ಯಾಚ್ಸ್ ಮತ್ತು ಸಿಎಲ್‌ಎಸ್‌ಎ ಮರ್ಚೆಂಟ್ ಬ್ಯಾಂಕರ್ಸ್‌ಗಳು ಶೇಕಡ 60ಕ್ಕೂ ಹೆಚ್ಚು ಪಿಎನ್‌ಗಳನ್ನು ವಿತರಿಸಿವೆ.

ಮಾರಿಷಸ್ ಮೂಲಕ ಪಂಗನಾಮ

ಮಾರಿಷಸ್ ಮತ್ತು ಭಾರತದ ನಡುವಿನ ವಾಣಿಜ್ಯ ಒಪ್ಪಂದದ ಪ್ರಕಾರ ಅಲ್ಲಿ ನೋಂದಾಯಿತವಾಗಿರುವ ಸಂಸ್ಥೆಗಳಿಗೆ ಭಾರತದಲ್ಲಿ ಬಂಡವಾಳ ತೊಡಗಿಸಲು ಯಾವುದೇ ಅಡೆತಡೆಗಳಿರುವುದಿಲ್ಲ. ಆದ್ದರಿಂದ ನೂರಾರು ಕಂಪನಿಗಳು ನಾಮಕಾವಸ್ಥೆಗೆ ಮಾರಿಷಸ್‌ನಲ್ಲಿ ನೋಂದಾಯಿಸಿ ಭಾರತದಲ್ಲಿ ಬಂಡವಾಳ ತೊಡಗಿಸುತ್ತವೆ. ಭಾರತದ ಹಲವಾರು ಮಂದಿ ರಾಜಕಾರಣಿಗಳು ತಮ್ಮಲ್ಲಿರುವ ಕಪ್ಪು ಹಣವನ್ನು ಇದೇ ಹಾದಿಯಲ್ಲೇ ಮಾರುಕಟ್ಟೆಯಲ್ಲಿ ತೊಡಗಿಸುತ್ತಿರುವುದು. ಎನ್‌ಡಿಎ ಸರ್ಕಾರದಲ್ಲಿ ಹಣಕಾಸು ಸಚಿವರಾಗಿದ್ದ ಯಶವಂತ್ ಸಿನ್ಹ ಪುತ್ರಿ ಮಾರಿಷಸ್‌ನಲ್ಲಿ ನೊಂದಾಯಿತವಾಗಿರುವ ಕಂಪನಿಯೊಂದರಲ್ಲಿ ವ್ಯವಸ್ಥಾಪಕಿಯಾಗಿದ್ದು ಭಾರತದ ಮಾರುಕಟ್ಟೆಯಲ್ಲಿ ಬಂಡವಾಳ ತೊಡಗಿಸಿದ್ದಾರೆ. ಈಗಿನ ಹಣಕಾಸು ಸಚಿವ ಪಿ.ಚಿದಂಬರಂರವರ ಪತ್ನಿ ಮಾರಿಷಸ್ ಮೂಲದ ಕಂಪನಿಯೊಂದರಿಂದ ಬಂಡವಾಳ ತೊಡಗಿಸಿದ್ದಾರೆಂಬ ವದಂತಿಗಳಿವೆ. ಇವರಷ್ಟೇ ಅಲ್ಲ ಹಲವಾರು ರಾಜಕಾರಣಿಗಳು ಈ ಅಕ್ರಮ ಹಾದಿಯಲ್ಲಿ ಷೇರು ಮಾರುಕಟ್ಟೆಯಲ್ಲಿ ಬಂಡವಾಳ ತೊಡಗಿಸಿದ್ದಾರೆ ಎಂಬ ದಟ್ಟ ವದಂತಿಗಳಿವೆ. ಈ ಬಗ್ಗೆ ಸಮಗ್ರ ತನಿಖೆ ನಡೆಸದಿದ್ದಲ್ಲಿ ಇದ್ಯಾವುದೂ ಹೊರಗೆ ಬರುವುದಿಲ್ಲ. ಹವಾಲ ರೂಪದಲ್ಲಿ ಭಾರತದಿಂದ ಹೊರಹೋಗುವ ಕಪ್ಪು ಹಣ ಸಹ ಪಿಎನ್‌ಗಳ ಮೂಲಕ ಮತ್ತೆ ಭಾರತದ ಮಾರುಕಟ್ಟೆಗೆ ಬಂಡವಾಳವಾಗಿ ಹರಿದುಬರಲಿದೆ. ಈ ಹಿಂದೆ ಬಹಿರಂಗಗೊಂಡಿದ್ದ ಹವಾಲ ಹಗರಣ ಇದಕ್ಕೊಂದು ಉದಾಹರಣೆ. ಭಾರತದ ಷೇರು ಮಾರುಕಟ್ಟೆಯಲ್ಲಿ ಎಫ್‌ಐಐಗಳು ತೊಡಗಿಸುವ ಬಂಡವಾಳದಲ್ಲಿ ಶೇಕಡ 40ರಷ್ಟು ಪಿಎನ್‌ಗಳ ಮೂಲಕ ತೊಡಗಿಸಲಾಗುತ್ತಿದೆ. ಅಂದರೆ ಮಾರುಕಟ್ಟೆಯಲ್ಲಿ ಹೂಡಿಕೆಯಾಗುವ ಸುಮಾರು ಎರಡು ಮೂರು ಟ್ರಿಲಿಯನ್ ಬಂಡವಾಳ ಯಾರದ್ದು, ಎಲ್ಲಿಂದ ಬರುತ್ತದೆ ಎಂಬುದರ ಮಾಹಿತೀನೇ ಇಲ್ಲ. ಪಿಎನ್‌ಗಳ ಕುರಿತು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ರಿಸರ್ವ್ ಬ್ಯಾಂಕ್ ಹಿಂದಿನಿಂದಲೂ ಒತ್ತಾಯಿಸುತ್ತಿದೆ. ಮಾರುಕಟ್ಟೆಯಲ್ಲಾಗಿರುವ ಹಗರಣಗಳ ಕುರಿತು ತನಿಖೆಗೆ ನೇಮಿಸಿದ್ದ ತಾರಾಪುರ್ ಸಮಿತಿ ನೀಡಿದ ಸಲಹೆಗಳನ್ನು ಸಹ ಸೆಬಿ ಪರಿಗಣಿಸಿಲ್ಲ. ಪಿಎನ್‌ಗಳನ್ನು ನಿಷೇಧಿಸಬೇಕು. ಷೇರು ಮಾರುಕಟ್ಟೆಯಲ್ಲಿ ಬಂಡವಾಳ ತೊಡಗಿಸುವ ಎಲ್ಲ ಸಂಸ್ಥೆಗಳು ಕಡ್ಡಾಯವಾಗಿ ಸೆಬಿಯಲ್ಲಿ ನೋಂದಾಯಿಸುವಂತೆ ಶಾಸನ ರೂಪಿಸಬೇಕೆಂದು ಸಿಪಿಎಂ ಪಕ್ಷ ನಿರಂತರವಾಗಿ ಆಗ್ರಹಿಸುತ್ತಿದೆ. ಪಿಎನ್‌ಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳದಿದ್ದಲ್ಲಿ ಮಾರುಕಟ್ಟೆ ಏರುಪೇರು ನಿಲ್ಲುವ ಸಾಧ್ಯತೆಗಳೇ ಇಲ್ಲ.

ದಾದಾಗಿರಿಯ ಎರಡು ತದ್ವಿರುದ್ಧ 'ಚಿತ್ರ'ಗಳ



■ ನಕುಲ

ಅಗ್ನಿ ಶ್ರೀಧರ್ ತಮ್ಮ ಯೌವನದ ದಿನಗಳಲ್ಲಿ ಅನಿರೀಕ್ಷಿತವಾಗಿ ಭೂಗತಲೋಕವನ್ನು ಪ್ರವೇಶಿಸಿ, ಏಳುಬೀಳು ಕಂಡು, ನೈತಿಕವಾಗಿ ಈ ದಾರಿ ಸರಿಯಿಲ್ಲವೆಂದು ಭಾವಿಸಿ, ಗೆಳೆಯ ಬಚನ್‌ರೊಂದಿಗೆ ಪ್ರಯಾಸದಿಂದ ಹೊರಬಂದವರು. ಆ ದಿನಗಳನ್ನು ಬರಣಿಗೆಗೆ ಇಳಿಸಿದಾಗ ಬಂದದ್ದೇ 'ದಾದಾಗಿರಿಯ ದಿನಗಳು'. ಈ ಪುಸ್ತಕದ ಒಂದು ಭಾಗ ಅಂದರೆ 1985-86 ರ ನಡುವಿನ ಘಟನಾವಳಿಗಳ ಚಿತ್ರಣವೇ 'ಆ ದಿನಗಳು'. ಶ್ರೀಧರ್, ಬಚನ್, ಚೇತನ್ ಮತ್ತು ಶೆಟ್ಟಿ ಈ ನಾಲ್ವರು ಸೇರಿ, ಭೂಗತ ಪಾತಕಿ ಜಯರಾಜನ ಸಹಾಯ ಹಸ್ತದೊಂದಿಗೆ ರೌಡಿ ಕೊತ್ವಾಲ ರಾಮಚಂದ್ರನನ್ನು ಹತ್ಯೆ ಮಾಡಿದ ಸತ್ಯಘಟನೆಯೇ ಈ ಚಿತ್ರ.


ಆ ದಿನಗಳ ರೌಡಿಸಂ ಕುರಿತ ವಿಚಾರಗಳು ಅಲ್ಲಿ-ಇಲ್ಲಿ ಕೇಳಿಪಟ್ಟ ಸಂಗತಿಗಳೇ ಆಗಿದ್ದರೂ ಈ ಚಿತ್ರದಿಂದ ಅದಕ್ಕೊಂದು 'ಅಧಿಕೃತತೆ' ಸಿಕ್ಕಿದೆ. ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದಾಗ ತಮ್ಮ ಅನುಕೂಲಕ್ಕಾಗಿ ಅಳಿಯ ಎಂ.ಡಿ. ನಟರಾಜರ ಮೂಲಕ ರೌಡಿ ಜಯರಾಜನನ್ನು ಬಳಸಿಕೊಂಡಿದ್ದು ಮತ್ತು ಆತನನ್ನು ಬೆಳೆಸಿದ್ದು ಎಂಬುದನ್ನು ಈ ಚಿತ್ರ ಸ್ಪಷ್ಟಪಡಿಸಿದೆ. ಆ ನಂತರ ಜಯರಾಜ್ ಜೈಲು ಪಾಲಾದಾಗ ಶಿವಮೊಗ್ಗದ ಕೊತ್ವಾಲ ರಾಮಚಂದ್ರನನ್ನು ಬೆಂಗಳೂರಿನಲ್ಲಿ ಮೆರೆಸಿದ ಕೀರ್ತಿಯೂ ಅವರದ್ದೇ. ರಾಜಕೀಯ ಬೆಂಬಲದೊಂದಿಗೆ ಬಲಿಷ್ಟರಾದ ಈ ಇಬ್ಬರು ಪಾತಕಿಗಳು ಬೆಂಗಳೂರನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಬಡಿದಾಡಿದ್ದು, ಅಟ್ಟಹಾಸ ಮೆರೆದು ಇಡೀ ಬೆಂಗಳೂರನ್ನು ಭಯಭೀತಗೊಳಿಸಿದ್ದು ಈಗ ಇತಿಹಾಸ. ಈ ಸಂದರ್ಭದಲ್ಲಿ ಪೋಲೀಸರು ಒಬ್ಬರ ಮೇಲೊಬ್ಬರನ್ನು ಎತ್ತಿಕಟ್ಟಿ, ಮತ್ತೊಬ್ಬರನ್ನು ಬೆಂಬಲಿಸುತ್ತಾ ಆಡವಾಡಿದ್ದೂ ಕುಹಕವೆ! 'ರಾಜಕಾರಣಿಗಳು - ಪೋಲೀಸರು - ರೌಡಿಗಳು ಮತ್ತು ಉದ್ಯಮಿಗಳ ನಡುವಿನ ನಿರ್ಲಜ್ಜ ಸಂಬಂಧಗಳ ಹೂರಣವನ್ನು ತೆರೆದಿಡುತ್ತದೆ ಈ ಚಿತ್ರ.

ಚೇತನ್ ಒಬ್ಬ ಉದ್ಯಮಿಯ ಮಗ. ಸಾಮಾನ್ಯ ಹುಡುಗಿಯೊಬ್ಬಳನ್ನು ಪ್ರೀತಿಸುತ್ತಾನೆ. ಆದರೆ ಕೊತ್ವಾಲ ರಾಮಚಂದ್ರ ಇವರಿಬ್ಬರೂ ಸೇರದಂತೆ ಬೆದರಿಕೆ ಒಡ್ಡುತ್ತಾನೆ. ಕಾರಣ ಹುಡುಕಿ ಹೊರಟಾಗ ತಂದೆಯೇ ಇವರಿಬ್ಬರ ಬೇರ್ಪಡಿಕೆಗೆ ಕೊತ್ವಾಲ್‌ಗೆ ಸುಪಾರಿ ಕೊಟ್ಟಿರುತ್ತಾನೆ. ಮನನೊಂದ ಚೇತನ್ ತಂದೆಯನ್ನು ಧಿಕ್ಕರಿಸುವುದೇ ಅಲ್ಲದೇ ಪ್ರೀತಿಗೆ ಅಡ್ಡಬಂದ ಕೊತ್ವಾಲನನ್ನೇ ಮುಗಿಸಲು ಯೋಚಿಸುತ್ತಾನೆ. ಆಗ ಈತನಂತೆಯೇ ಆಲೋಚಿಸುತ್ತಿದ್ದ ಶ್ರೀಧರ್ ಮತ್ತು ಬಚನ್‌ರ ಪರಿಚಯವಾಗಿ, ಮೂವರು ಸೇರಿ ಕೊತ್ವಾಲನ ಹತ್ಯೆಗೆ ಸಂಚು ರೂಪಿಸುತ್ತಾರೆ. ಆತನ ಸ್ನೇಹ ಸಂಪಾದಿಸಿ ಅವನನ್ನು ತುಮಕೂರಿನ ತೋಟದ ಮನೆಯೊಂದಕ್ಕೆ ಕರೆದೊಯುತ್ತಾರೆ.

ಹತ್ಯೆಯ ನಂತರ ಕೊತ್ವಾಲನ ರೌಡಿಗಳಿಂದ ರಕ್ಷಣೆ ಪಡೆಯಲು ಮತ್ತು ಕಾನೂನು ಹೋರಾಟಕ್ಕೆ ಜಯರಾಜನ ಬೆಂಬಲ ಕೋರುತ್ತಾರೆ. ಜಯರಾಜ್‌ನ ಪೂರ್ಣ ಬೆಂಬಲದೊಂದಿಗೆ - ಶ್ರೀಧರ್, ಬಚನ್, ಚೇತನ್ ಮತ್ತು ಕೊತ್ವಾಲನೊಂದಿಗೆ ಬಂದಿದ್ದ ಅವರ ಸಹಚರ ಶೆಟ್ಟಿ - ಈ ನಾಲ್ವರು ಸೇರಿ ಕೊತ್ವಾಲನನ್ನು ಹತ್ಯೆ ಮಾಡಿ, ಸುಟ್ಟುಹಾಕುತ್ತಾರೆ. ಸ್ವಲ್ಪದಿನಗಳಲ್ಲೇ ನಾಲ್ವರೂ ಪೊಲೀಸರಿಗೆ ಸಿಕ್ಕಿಬೀಳುತ್ತಾರೆ. ಇವರಿಗೆ ಕುಮ್ಮಕ್ಕು ನೀಡಿದ ಕಾರಣಕ್ಕೆ ಜೈರಾಜ್‌ಗೂ ಜೈಲು ಶಿಕ್ಷೆಯಾಗುತ್ತದೆ. ಆದರೆ ಸೂಕ್ತ ಸಾಕ್ಷ್ಯಾಧಾರ ಸಿಗದೆ ಒಂದೂವರೆ ವರ್ಷದ ನಂತರ ಎಲ್ಲರೂ ಖುಲಾಸೆಯಾಗುತ್ತಾರೆ - ಇದಿಷ್ಟು 'ಆ ದಿನಗಳು' ಚಿತ್ರದ ಕಥೆ. ಅನಂತರ ಜಯರಾಜ್, ಆಯಿಲ್ ಕುಮಾರ್ ಕೊಲೆಯಾಗಿದ್ದು, ಶ್ರೀಧರ್ ಮತ್ತು ಬಚನ್ ಅಗ್ನಿ ಪತ್ರಿಕೆಯಲ್ಲಿ ತೊಡಗಿಸಿಕೊಂಡಿದ್ದು, ಚೇತನ್ ಪ್ರೀತಿಸಿದ ಹುಡುಗಿಯನ್ನೇ ಮದುವೆಯಾದ್ದು ಮತ್ತು ಶೆಟ್ಟಿ ಈಗಲೂ ಜನರಲ್ ಹಾಸ್ಟೆಲ್‌ನಲ್ಲಿ ಕ್ಯಾಂಟಿನ್ ನಡೆಸುತ್ತಿರುವುದನ್ನು ಹೇಳುವುದರ ಮೂಲಕ ಚಿತ್ರ ಅಂತ್ಯವಾಗುತ್ತದೆ.

'ಆ ದಿನಗಳು' 80 ರ ದಶಕದ ಬೆಂಗಳೂರಿನ ಭೂಗತ ಜಗತ್ತಿನ ಸತ್ಯ ಘಟನೆಯಾಧರಿಸಿದ ವಾಸ್ತವ ಚಿತ್ರಣ. ಆದರೆ ವಾಸ್ತವತೆಗೆ ಹತ್ತಿರವೂ ಸುಳಿಯದ, ರೌಡಿಸಂನ ವಿಜೃಂಭಣೆಯ ವಿಕೃತ ಚಿತ್ರ 'ಗೆಳೆಯ'. ವಿಶೇಷವೆಂದರೆ ಈ ಚಿತ್ರಗಳ ನಿರ್ದೇಶಕರಿಬ್ಬರಿಗೂ ಇವು ಮೊದಲ ನಿರ್ದೇಶನದ ಚಿತ್ರಗಳು. 'ಆ ದಿನಗಳ' ಕೆ.ಎಂ. ಚೈತನ್ಯ ಭರವಸೆ ಮೂಡಿಸಿದರೆ, 'ಗೆಳೆಯ'ದ ಹರ್ಷ ಭಯ ಮೂಡಿಸುತ್ತಾರೆ.

ಇದು ಶ್ರೀಧರ್ ಅವರ ಕಣ್ಣೋಟದ ಕಥೆ ಮಾತ್ರವೇ ಆದ್ದರಿಂದ ಸತ್ಯವೆಷ್ಟು ಎಂಬುದು ಊಹೆಗೆ ಬಿಟ್ಟಿದ್ದು. ಭೂಗತಲೋಕದವರಲ್ಲೊಬ್ಬರಾಗಿ, ಅದನ್ನು ಅನುಭವಿಸಿದವರಾದ್ದರಿಂದ ರೌಡಿಗಳಿಗೂ ಬದುಕು ಇದೆ, ಆಸೆ-ಆಕಾಂಕ್ಷೆಗಳು ಮತ್ತು ತಮ್ಮ ಕುಟುಂಬದ ಬಗೆಗಿನ ವ್ಯಾಮೋಹದ ಒಳಸುಳಿಗಳನ್ನು ತೆರೆದಿಡುತ್ತಾರೆ. ಲೋಕ ಆಳಲು ಹೊರಟರೂ ಬಿಡದ ಭಯ, ಯಾರನ್ನೂ ನಂಬಲಾಗದ ಅಸಹಾಯಕತೆಯ ವಾಸ್ತವ ಚಿತ್ರಣವನ್ನು ನಮ್ಮ ಮುಂದಿಡುತ್ತದೆ ಈ ಚಿತ್ರ. ರೌಡಿಗಳಿಗೆ ಮಾನವೀಯ ಮುಖವನ್ನು ತೊಡಿಸಲು ಶ್ರೀಧರ್ ಇಚ್ಚಿಸಿರುವುದರಲ್ಲಿ ಅಸಹಜವೇನೂ ಇಲ್ಲ. ಆದರೆ ತಮ್ಮ ಕುಟುಂಬ, ಸಂಸಾರದೊಂದಿಗೆ ಎಷ್ಟೇ ಮಾನವೀಯವಾಗಿದ್ದರೂ, ಸಮಾಜದೊಂದಿಗೆ ಅವರ ವರ್ತನೆ ಹೇಗಿತ್ತು ಎಂಬುದೂ ಮುಖ್ಯವಾಗುತ್ತದೆ.



ಈ ಚಿತ್ರದ ವಿಶೇಷತೆಯಿರುವುದು ಅದರ ನಿರೂಪಣೆಯಲ್ಲಿ. ಈಗಿನ ದಿನಗಳಲ್ಲಿ ರೌಡಿಸಂನ್ನು ವಿಜೃಂಭಿಸುತ್ತಾ, ರಕ್ತದೋಕುಳಿಯಾಡುತ್ತಾ ಭ್ರಮೆಯನ್ನು ಬಿತ್ತುತ್ತಿರುವ ನಿರ್ದೇಶಕರ ಮಧ್ಯೆ ಈ ಚಿತ್ರದ ನಿರ್ದೇಶಕ ಚೈತನ್ಯ ವಿಶಿಷ್ಟವಾಗಿ ಗೋಚರಿಸುತ್ತಾರೆ. ಸತ್ಯದ ಘಟನೆಯಾದರೂ ಈ ಚಿತ್ರದಲ್ಲಿ ಎಲ್ಲೂ ರಕ್ತದೋಕುಳಿಯಿಲ್ಲ, ಮಚ್ಚು ಲಾಂಗುಗಳ ಆರ್ಭಟವಿಲ್ಲ. ತಣ್ಣನೆಯ ನಿರೂಪಣೆಯಿಂದಲೇ ಅಂದಿನ ವಾಸ್ತಾವ ಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ನಮ್ಮ ಮುಂದಿಡುತ್ತಾರೆ ಚೈತನ್ಯ. ನಟನೆಯಲ್ಲೂ ಎಲ್ಲರದ್ದೂ ಅಚ್ಚುಕಟ್ಟಾದ ಅಭಿನಯ. ಕೊತ್ವಾಲನಾಗಿ ಶರತ್ ಲೋಹಿತಾಶ್ವ ಸರಿಯಾದ ಆಯ್ಕೆ ಮತ್ತು ಅವರ ಅಭಿನಯವೂ ಪಾತ್ರಕ್ಕೆ ಪೂರಕ. ಶ್ರೀಧರ್ ಪಾತ್ರದಲ್ಲಿ ಅತುಲ್ ಕುಲಕರ್ಣಿ ಶಾಂತಚಿತ್ತದ, ಗಂಭೀರ ಅಭಿನಯ ಮನಸೆಳೆಯುತ್ತದೆ. ಅಪರೂಪಕ್ಕೆ ಇಳಿಯರ... ಅವರು ಈ ಚಿತ್ರಕ್ಕೆ ಸಂಗೀತ ನೀಡಿದ್ದು, ... ಮಧುರವಾದ ಹಾಡುಗಳಿವೆ.

80 ರ ದಶಕದ ಬೆಂಗಳೂರನ್ನು ಪ್ರೇ... ಮುಂದಿಡಲು ಸಾಕಷ್ಟು ಕಾಳಜಿ ವಹಿಸಿರುವ... ಎದ್ದು ಕಾಣುತ್ತದೆ. ಹೈಟೆಕ್ ನಗರದ 'ಕ...



ಕಟ್ಟಡ'ಗಳು ಯಾವೂ ಇಲ್ಲಿ ಕಣ್ಣಿಗೆ ಬೀಳುವು... ಸಹಜತೆಗಾಗಿ ಅಂಬಾಸಡರ್ ಕಾರು, ಬು... ಬೈಕ್‌ಗಳನ್ನೇ ಬಳಸಲಾಗಿದೆ. ಖಂಡಿತ ಅ... ಬೆಂಗಳೂರು ನಮ್ಮ ಕಣ್ಮುಂದೆ ನಿಲ್ಲುತ್ತದೆ - ನಿ... ಕನ್ನಡಿಗರು ಭರವಸೆಯಿಡಬಹುದಾದ ನಿರ್ದೇ... ಚೈತನ್ಯ.

ದೇವರಾಜ ಅರಸು ಕಾಲಾವ... ರೌಡಿಲೋಕ ಮತ್ತು ರಾಜಕಾರಣದ ನಡು... ನಂಟಿನ ಕುರಿತ ಚಿತ್ರಣವೂ ಈ ಮೂಲಕ ... ದೊರೆಯುತ್ತದೆ. ಬಂಡವಾಳಶಾಹಿ ರಾಜಕ... ತನ್ನ ಅಗತ್ಯಕ್ಕಾಗಿ ರೌಡಿಸಂ ಅನ್ನು ಅಸ್ತ್ರ... ಬಳಸುವುದನ್ನು ಇಲ್ಲಿ ಗಮನಿಸಬಹುದು.

'ಆ ದಿನಗಳು' ವಾಸ್ತವಕ್ಕೆ ಹತ್ತಿರವಾದ, ... ನಿರೂಪಣೆಯಾದರೆ 'ಗೆಳೆಯ' ಅದಕ್ಕೆ ತದ್ವಿ... 'ಮುಂಗಾರು ಮಳೆ' ಮುಖಾಂತರ ಗಮನ ಸೆ... ಪ್ರೀತಂ ಗುಬ್ಬಿ 'ಗೆಳೆಯ'ದಲ್ಲಿ ನಿರಾಸೆ ಮಾಡಿ... ವಾಸ್ತವಲ್ಲದ, ಅಸಹಜ ಕಥೆಗೆ ಅ... ನಿರೂಪಣೆಯಿಂದ ತಲೆಚಿಟ್ಟು ಹಿಡಿಯು... ಆತ್ಮೀಯ ಗೆಳೆಯರಿಬ್ಬರೂ ಅನಿರೀಕ್ಷಿತ... ಭೂಗತಲೋಕ ಪ್ರವೇಶಿಸುವುದು, ಶತ್ರು... ಕಾದಾಡಿ, ತಮ್ಮ ನೆಲೆ ಉಳಿಸಿಕೊ... ರಕ್ತದೋಕುಳಿಯಾಡುವುದು! ಮಚ್ಚು,ಲಾಂಗುಗಳಿಗಿಂತ ಗನ್ನುಗಳದ್ದೇ ದ... - ಬೀಳೋ ಹೆಣ ಲೆಕ್ಕ ಇಡುರ್‍ರ್ಯೋರು? ... ಎಳೆಯರಾದ ಪ್ರಜ್ವಲ್-ತರುಣ್‌ರಿಂದ ... ಹತ್ಯಾಕಾಂಡವನ್ನು ನೋಡಲು ಹಿಂಸೆಯಾಗ... ರಾಖಿ ಸಾವಂತ್ ಐಟಂ ಸಾಂಗ್, ಒಂದು... ಸಾಂಗ್, ಒಂದು ಗ್ರೂಪ್ ಸಾಂಗ್ - ... ಫೈಟ್, ನಾಲ್ಕು ಹೆಣ ಬಿದ್ರೆ ಚಿತ್ರ ಸಕ್ಸೆಸ್ ... ನಿರ್ದೇಶಕ ಹರ್ಷ ಭಾವಿಸಿದ್ದಂತಿದೆ.

ಕ್ರೀಡಾ ಸುದ್ದಿ



ಇರಾನ್ ರಾಜಧಾನಿ ಟೆಹರಾನ್‌ನಲ್ಲಿ ಇತ್ತೀಚೆಗೆ ನಡೆದ ಏಷ್ಯಾ ಮಹಿಳಾ ಕಬಡ್ಡಿ ಟೂನಿಯಲ್ಲಿ ಭಾರತ ತಂಡವು ಚಾಂಪಿಯನ್‌ಯಾಗಿ ಹೊರಹೊಮ್ಮಿದೆ. ಈ ಸಂದರ್ಭದಲ್ಲಿ ನಮ್ಮ ರಾಜ್ಯದಿಂದ ಎಲ್.ಜಯಂತಿ ಭಾರತ ಕಬಡ್ಡಿ ತಂಡವನ್ನು ಪ್ರತಿನಿಧಿಸಿದ್ದು ಒಂದು ವಿಶೇಷ.

ಬೆಂಗಳೂರಿನಲ್ಲಿ ನಡೆದ 9 ವರ್ಷದೊಳಗಿನ ಬಾಲಕ ಬಾಲಕಿಯರ ರಾಷ್ಟ್ರೀಯ ಚೆಸ್ ಚಾಂಪಿ... ಟೂರ್ನಿ ಇತ್ತೀಚೆಗೆ ಮುಕ್ತಾಯವಾಯಿತು. ಯುನೈಟೆಡ್ ಕರ್ನಾಟಕ ಚೆಸ್ ಸಂಸ್ಥೆ ಆಶ್ರಯದಲ್ಲಿ ನ... ಈ ಟೂರ್ನಿಯಲ್ಲಿ ಬಾಲಕರ ವಿಭಾಗದಲ್ಲಿ ಪಶ್ಚಿಮ ಬಂಗಾಳದ ದಿಪ್ತಿಯನ್ ಘೋಷ್ ಹ... ಬಾಲಕಿಯರ ವಿಭಾಗದಲ್ಲಿ ತಮಿಳುನಾಡಿನ ಜಿ.ಕೆ.ಮೋನಿಷಾ ಪ್ರಶಸ್ತಿ ಪಡೆದು ಚಾಂಪಿಯನ್‌ಗ... ಹೊರಹೊಮ್ಮಿದರು.

★

ಹೈದರಾಬಾದ್‌ನಲ್ಲಿ ನಡೆದ ವಿಶ್ವ ಸೇನಾ ಕ್ರೀಡಾಕೂಟದಲ್ಲಿ ಭಾರತದ ಬಾಕ್ಸಿಂಗ್ ವಿಭಾ... (ಪುರುಷರ ಬಾಟಮ್‌ವೇಟ್ ವಿಭಾಗ) ದಲ್ಲಿ ಮಣಿಪುರ ಮೂಲದ ಬಾಕ್ಸರ್ ಹವಾಲ್ದಾರ್ ಪುಕ್ರ... ನರ್ಜಿತ್ ಸಿಂಗ ಚಿನ್ನದ ಪದಕ ಗೆದ್ದು ಸಂಭ್ರಮಿಸಿದರು. ಅವರು ಜರ್ಮನಿಯ ಸ್ನೈಡರ್ ಮಾ... ಅವರನ್ನು 12-8 (ಪಾಯಿಂಟ್) ಅಂತರದಲ್ಲಿ ಸೋಲಿಸಿ ಜಯಗಳಿಸಿದರು. ಪುರುಷರ ವಾಲಿಬ... ವಿಭಾಗದಲ್ಲಿ ಭಾರತ ತಂಡ ಕೊಲ್ಲಿ ರಾಷ್ಟ್ರವಾದ ಕತಾರ್ ತಂಡದ ವಿರುದ್ಧ (3-0) ನೇರ ಮೂಲಕ ಜಯಸಾಧಿಸಿ ಕಂಚು ಪದಕವನ್ನು ಪಡೆದರು.

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12. 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH